ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 14 ಮಂಗಳವಾರ 2024

ಮೈಸೂರು ಮಿತ್ರ 45

ಸಂಪುಟ: 45 | ಸಂಚಿಕೆ: 28 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಎಸ್.ಎಂ.ಕೃಷ್ಣ ಆರೋಗ್ಯ ಸ್ಥಿರ: ಮುಂದುವರೆದ ಚಿಕಿತ್ಸೆ



ಬೆಂಗಳೂರು: ಹಿರಿಯ ರಾಜಕಾರಣಿ ಮತ್ತು ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರ ಆರೋಗ್ಯ ಸ್ಥಿರವಾಗಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಆಸ್ಪತ್ರೆ ವೈದ್ಯರು ಸೋಮವಾರ ಮಾಹಿತಿ ನೀಡಿದ್ದಾರೆ.

ಐಸಿಯುವಿನಲ್ಲಿ ಚಿಕಿತ್ಸೆ ಮುಂದುವರೆದಿದ್ದು, ಶ್ವಾಸಕೋಶ ತಜ್ಞ ಡಾ. ಸತ್ಯನಾರಾಯಣ ಮೈಸೂರು ಹಾಗೂ ಡಾ.ಸುನೀಲ್ ಕಾರಂತ್ ನೇತೃತ್ವದ ಕ್ರಿಟಿಕಲ್ ಕೇರ್ ● 9ನೇ ಪುಟಕ್ಕೆ

ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ, ಸಂತ್ರಸ್ತೆ ಅಪಹರಣ ಆರೋಪದಲ್ಲಿ


ರೇವಣ್ಣಗೆ ಜಾಮೀನು

● ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ತೀರ್ಪು ● ಇಂದು ಜೈಲಿಂದ ಬಿಡುಗಡೆ ಸಾಧ್ಯತೆ

ಬೆಂಗಳೂರು, ಮೇ13–ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಎಸ್‌ಐಟಿಯಿಂದ ಬಂಧಿತರಾಗಿದ್ದ ಹೊಳೆನರಸೀಪುರ ಜೆಡಿಎಸ್ ಶಾಸಕ ಹೆಚ್.ಡಿ.ರೇವಣ್ಣ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದಾರೆ.

ರೇವಣ್ಣ ಅವರು 5 ಲಕ್ಷ ರೂ.ಗಳ ಬಾಂಡ್, ಇಬ್ಬರ ಶ್ಯೂರಿಟಿ ನೀಡಬೇಕು. ಕೆ.ಆರ್. ನಗರಕ್ಕೆ ಹೋಗಬಾರದು, ನ್ಯಾಯಾಲಯದ ಅನುಮತಿ ಇಲ್ಲದೇ ನ್ಯಾಯಾಲಯ ವ್ಯಾಪ್ತಿಯಿಂದ ಹೊರ ಹೋಗಬಾರದು (ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ವ್ಯಾಪ್ತಿಯು ಇಡೀ ಕರ್ನಾಟಕ ರಾಜ್ಯಕ್ಕೆ ಒಳಪಡುತ್ತದೆ), ಸಾಕ್ಷ್ಯಗಳನ್ನು ನಾಶಪಡಿಸಬಾರದು ಹಾಗೂ ಎಸ್‌ಐಟಿ ತನಿಖೆಗೆ ಸಹಕರಿಸಬೇಕೆಂಬ ಷರತ್ತು ವಿಧಿಸಲಾಗಿದ್ದು, ಮೇ 4ರಂದು ಎಸ್‌ಐಟಿ ಪೊಲೀಸರಿಂದ ಬಂಧಿಸಲ್ಪಟ್ಟು ಪರಪ್ಪನ ಅಗ್ರಹಾರ ಜೈಲು ಸೇರಿದ್ದ ರೇವಣ್ಣ, ನಾಳೆ (ಮಂಗಳವಾರ) ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ.

ವಿವರ: ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ ಸಂತ್ರಸ್ತೆಯನ್ನು ಏಪ್ರಿಲ್ 29ರಂದು ರೇವಣ್ಣ ಕರೆದರು ಎಂದು ಹೇಳಿ, ಅವರ ಆಪ್ತ ಸತೀಶ್ ಬಾಬಣ್ಣ ಎಂಬಾತ ತಮ್ಮ ಮನೆಯಿಂದ ಕರೆದೊಯ್ದಿದ್ದಾನೆ. ನನ್ನ ತಾಯಿಯ ಮೇಲೆ ಪ್ರಜ್ವಲ್ ಲೈಂಗಿಕ ದೌರ್ಜನ್ಯ ಎಸಗಿದ ವಿಡಿಯೋ ಹೊರಬಂದಿದೆ ಎಂದು ಸಂಬಂಧಿಕರು ನನಗೆ ತಿಳಿಸಿದ್ದಾರೆ. ತಾಯಿ ಎಲ್ಲಿದ್ದಾರೆ ಎಂಬುದು ಗೊತ್ತಿಲ್ಲ. ನನ್ನ ತಾಯಿ ಜೀವಕ್ಕೆ ಅಪಾಯವಿದ್ದು ಅವರನ್ನು ರಕ್ಷಿಸಬೇಕು ಎಂದು ಸಂತ್ರಸ್ತೆಯ ಪುತ್ರ ಮೇ 2ರಂದು ಕೆ.ಆರ್. ನಗರ ಠಾಣೆಗೆ ದೂರು ಸಲ್ಲಿಸಿದ್ದ. ಈ ಪ್ರಕರಣದಲ್ಲಿ ರೇವಣ್ಣ



ಅವರ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಮೇ 4ರಂದು ಮುಂದೂಡಿದ ಕೆಲವೇ ನಿಮಿಷಗಳಲ್ಲಿ ಅವರನ್ನು ಎಸ್‌ಐಟಿ ಬಂಧಿಸಿತ್ತು.

ಜಾಮೀನಿಗೆ ಬಲವಾದ ಆಕ್ಷೇಪ: ಇಂದು (ಸೋಮವಾರ) ರೇವಣ್ಣ ಅವರ ಜಾಮೀನು ಅರ್ಜಿ ಮೇಲೆ ಎಸ್‌ಪಿಪಿಗಳಾದ ಜಯ್ನಾ ಕೊಠಾರಿ ಮತ್ತು ಅಶೋಕ್ ನಾಯಕ್ ವಾದ ಮಂಡಿಸಿ, ರೇವಣ್ಣ ಅವರ ಮೇಲೆ ಎಫ್‌ಐಆರ್‌ನಲ್ಲಿ ದಾಖಲಾಗಿರುವ ಸೆಕ್ಷನ್‌ಗಳ ಜೊತೆಗೆ 120ಬಿ ಕೂಡ ಸೇರಲಿದೆ. ಅವರು, ತನ್ನ ಪುತ್ರನ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿರುವುದಲ್ಲದೇ, ಒಳಸಂಚು ರೂಪಿಸಿದ್ದಾರೆ. ಅವರ ಪುತ್ರನ ಪ್ರಕರಣದಲ್ಲಿ ಮತ್ತಷ್ಟು ಸಂತ್ರಸ್ತರು ಎಸ್‌ಐಟಿ ಮುಂದೆ ಬರಬೇಕಾಗಿದೆ. ಅವರು ಪ್ರಭಾವಿ ವ್ಯಕ್ತಿಯಾಗಿದ್ದು, ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಸಂತ್ರಸ್ತೆಯರಿಗೆ ಬೆದರಿಕೆ ಒಡ್ಡುವ ಸಾಧ್ಯತೆ ಇದೆ ಹಾಗೂ ಸಾಕ್ಷ್ಯಗಳನ್ನು ನಾಶಪಡಿಸಲೂಬಹುದು ಎಂದು ವಾದಿಸಿದರಲ್ಲದೇ, ಈಗಾಗಲೇ ಪ್ರಕರಣದ ದಿಕ್ಕು ತಪ್ಪಿಸುವ ಉದ್ದೇಶದಿಂದ ನಿನ್ನೆ ಸಂತ್ರಸ್ತೆಯ ವಿಡಿಯೋವೊಂದನ್ನು ಬಿಡುಗಡೆ ಮಾಡಲಾಗಿದೆ. ತಮ್ಮ ಪುತ್ರ ಆರೋಪಿಯಾಗಿರುವ ಪ್ರಕರಣದ ಸಾಕ್ಷ್ಯ ನಾಶಪಡಿಸಲು ಹಾಗೂ ಸಂತ್ರಸ್ತೆ ದೂರು ನೀಡುವುದನ್ನು ತಡೆಯುವ ಉದ್ದೇಶದಿಂದ ಆಕೆಯನ್ನು ಅಪಹರಿಸಲಾಗಿತ್ತು. ಅಲ್ಲದೇ, ರೇವಣ್ಣ ಎಸ್‌ಐಟಿ ಕಸ್ಟಡಿಯಲ್ಲಿದ್ದಾಗ ತನಿಖೆಗೂ ಸಹಕರಿಸಿಲ್ಲ. ರೇವಣ್ಣ ಪುತ್ರ ವಿದೇಶದಲ್ಲಿ ತಲೆಮರೆಸಿಕೊಂಡಿದ್ದು, ಆತ ಎಲ್ಲಿದ್ದಾನೆ ಎಂಬುದು ಗೊತ್ತಿಲ್ಲ. ಆತನಿಗೆ ರೇವಣ್ಣ ಸಹಕರಿಸುವ ಸಾಧ್ಯತೆಯೂ ಇರುವುದರಿಂದ ಅವರಿಗೆ ಜಾಮೀನು ನೀಡಬಾರದು ಎಂದು ವಾದಿಸಿದರಲ್ಲದೇ, ಭಾರತೀಯ ದಂಡ ಸಂಹಿತೆ 364ಎ ಮತ್ತು 365 ಸೆಕ್ಷನ್‌ಗಳಡಿ ಆರೋಪಿಗಳಿಗೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಜಾಮೀನು ನಿರಾಕರಿಸಿರುವ ಪ್ರಕರಣಗಳನ್ನು ಉಲ್ಲೇಖಿಸಿದರು.

ಪ್ರತಿವಾದ ಮಂಡಿಸಿದ ರೇವಣ್ಣ ಪರ ವಕೀಲ ಸಿ.ವಿ. ನಾಗೇಶ್, ಮೊದಲಿಗೆ ಇಬ್ಬರು ಎಸ್‌ಪಿಪಿಗಳು ವಾದ ಮಂಡಿಸುವುದನ್ನು ವಿರೋಧಿಸಿದರಲ್ಲದೇ, ಇಬ್ಬರು ವಾದ ಮಂಡಿಸಿದರೂ ತಮಗೇನು ಸಮಸ್ಯೆ ಇಲ್ಲ. ಆದರೆ, ಅದು ಕಲಂ 24ರ ಉಲ್ಲಂಘನೆಯಾಗುತ್ತದೆ. ಇದನ್ನು ನ್ಯಾಯಾಧೀಶರು ಗಮನಿಸಿ, ತೀರ್ಮಾನ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಈ ವೇಳೆ ಎಸ್‌ಪಿಪಿ ಅಶೋಕ್ ನಾಯಕ್ ಅವರು, ಕೆಲಸದ ಒತ್ತಡವಿರುವ ಕಾರಣದಿಂದ ನಾವಿಬ್ಬರು ಕೆಲಸವನ್ನು ಹಂಚಿಕೊಂಡಿದ್ದೇವೆ. ಇದನ್ನು ಈಗಾಗಲೇ ನ್ಯಾಯಾಲಯಕ್ಕೂ ತಿಳಿಸಿದ್ದೇವೆ. ಮತ್ತೊಬ್ಬ ಎಸ್‌ಪಿಪಿ ಜಯ್ನಾ ಕೊಠಾರಿ ಅವರು ಈಗಾಗಲೇ ಮಂಡಿಸಿರುವ ವಾದಗಳ ಭಾಗವನ್ನು ● 9ನೇ ಪುಟಕ್ಕೆ



ಲೋಕಸಭೆಗೆ ನಾಲ್ಕನೇ ಹಂತದಲ್ಲಿ ಶೇ.62.84ರಷ್ಟು ಮತದಾನ

ಒಟ್ಟಾರೆ ನಾಲ್ಕೂ ಹಂತಗಳಲ್ಲಿ 379 ಕ್ಷೇತ್ರಗಳಿಗೆ ಚುನಾವಣೆ ಪೂರ್ಣ

ನವದೆಹಲಿ, ಮೇ 13– ಲೋಕಸಭೆಗೆ ಸೋಮವಾರ ನಡೆದ 4ನೇ ಹಂತದ ಚುನಾವಣೆಯಲ್ಲಿ ಶೇ. 62.84ರಷ್ಟು ಮತದಾನ ನಡೆದಿದೆ. ಆಂಧ್ರಪ್ರದೇಶದ ಒಂದು ಮತಗಟ್ಟೆಯಲ್ಲಿ ಹಿಂಸಾಚಾರ ನಡೆದಿದ್ದನ್ನು ಹೊರತುಪಡಿಸಿದರೆ, ಮತದಾನವು ಬಹುತೇಕ ಶಾಂತಿಯುತವಾಗಿ ನಡೆದಿದೆ.

ಇಂದು ಆಂಧ್ರಪ್ರದೇಶದ 25, ತೆಲಂಗಾಣದ 17, ಉತ್ತರ ಪ್ರದೇಶದ 13, ಮಹಾರಾಷ್ಟ್ರದ 11, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ತಲಾ 8, ಬಿಹಾರದ 5, ಜಮ್ಮು–ಕಾಶ್ಮೀರದ 1, ಒಡಿಸ್ಸಾ ಮತ್ತು ಜಾರ್ಖಂಡ್‌ನ ತಲಾ 4 ಕ್ಷೇತ್ರಗಳು ಸೇರಿದಂತೆ 10 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು 96 ಕ್ಷೇತ್ರಗಳಿಗೆ ಮತದಾನ ನಡೆದಿದೆ. ಇದರ ಜೊತೆಯಲ್ಲೇ ಆಂಧ್ರ ಪ್ರದೇಶ ಮತ್ತು ಒಡಿಸ್ಸಾ ವಿಧಾನಸಭೆಗಳಿಗೂ ಚುನಾವಣೆ ನಡೆದಿದ್ದು, ಆಂಧ್ರದ 175 ಮತ್ತು ಒಡಿಸ್ಸಾದ 28 ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಡೆದಿದೆ. ಇಂದು ನಡೆದ 96 ಕ್ಷೇತ್ರಗಳು ಸೇರಿ ಈವರೆಗೆ ಒಟ್ಟು 4 ಹಂತಗಳಲ್ಲಿ 23 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ್ಯಂತ ಒಟ್ಟು 379 ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆದಂತಾಗಿದೆ. ಅಲ್ಲದೇ, ಆಂಧ್ರಪ್ರದೇಶ ಒಡಿಸ್ಸಾ, ಸಿಕ್ಕಿಂ ಮತ್ತು ಅರುಣಾಚಲ ಪ್ರದೇಶದ ವಿಧಾನಸಭೆಗಳಿಗೂ ಚುನಾವಣೆ ನಡೆದಿದೆ. ಮೊದಲ ಹಂತದ ಚುನಾವಣೆಯಲ್ಲಿ ಶೇ. 66.14, ಎರಡನೇ ಹಂತದಲ್ಲಿ ಶೇ.66.71, 3ನೇ ಹಂತದಲ್ಲಿ ಶೇ. 65.68 ಹಾಗೂ ಇಂದು ನಡೆದ 4ನೇ ಹಂತದ ಚುನಾವಣೆಯಲ್ಲಿ ಶೇ. 62.84ರಷ್ಟು ಮತದಾನ ನಡೆದಿದೆ.

ಮಹಾರಾಷ್ಟ್ರ ಮಾದರಿ ಕರ್ನಾಟಕ ಕಾಂಗ್ರೆಸ್ ಸರ್ಕಾರ ಉರುಳಿಸುವ ತಂತ್ರ



ಏಕನಾಥ ಶಿಂಧೆ

ಮುಂಬೈ: ಮಹಾರಾಷ್ಟ್ರ ಮಾದರಿಯಲ್ಲೇ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಉರುಳಿಸಲು ಆಪರೇಷನ್ ನಾಥ್ ಯೋಜನೆ ಸಿದ್ಧವಾಗುತ್ತಿದ್ದು, ಈ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಮಹತ್ವದ ಸುಳಿವು ಬಿಟ್ಟುಕೊಟ್ಟಿದ್ದಾರೆ. ಆ ರಾಜ್ಯದ ಬಿಜೆಪಿ ನಾಯಕರೇ ಸರ್ಕಾರ ಉರುಳಿಸಲು ನೆರವು ಕೋರಿದ್ದಾರೆ ಎಂದು ಶಿಂಧೆ ಹೇಳಿದ್ದಾರೆ. ಈ ಹಿಂದೆ ಮಹಾರಾಷ್ಟ್ರದಲ್ಲಿ ನಡೆದ ಸಭೆಯೊಂದರಲ್ಲಿ ಆದಂತಹ ಚರ್ಚೆಯನ್ನು ಶಿಂಧೆ ಕಾರ್ಯಕ್ರಮವೊಂದರಲ್ಲಿ ಪ್ರಸ್ತಾಪಿಸಿ ಮಾತನಾಡಿದ್ದು, ಈ ಕುರಿತು ವಿಡಿಯೋ ಈಗ ವೈರಲ್ ಆಗುತ್ತಿದೆ. ಮಹಾರಾಷ್ಟ್ರದ ಸತಾರಾದಲ್ಲಿ ನಡೆದ ಒಂದು ಸಭೆಯಲ್ಲಿ ಕರ್ನಾಟಕ ಸರ್ಕಾರದ ಬಗ್ಗೆ ಅವರು ಮಾತನಾಡುತ್ತಾ, ಕರ್ನಾಟಕ ಸರ್ಕಾರ ಬೀಳುವುದು ಖಚಿತ. ಈ ಕುರಿತು ನನ್ನ ಅನುಭವ ಬೇಕು ಎಂದು ಕೋರಿರುವುದಾಗಿ ಶಿಂಧೆ ಹೇಳಿದ್ದಾರೆ. ನಾನು ಇತ್ತೀಚೆಗೆ ಕರ್ನಾಟಕದ ಒಂದು ಸಭೆಗೆ ಹೋಗಿದ್ದೆ. ಕರ್ನಾಟಕದಲ್ಲಿಯೂ ಆಪರೇಷನ್ ನಡೆಸುವುದಿದೆ. ಮಹಾರಾಷ್ಟ್ರದಲ್ಲಿ ಹಿಂದಿನ ಸರ್ಕಾರ ಪತನ ಮಾಡಿದಂತೆ ಇಲ್ಲಿಯೂ ಮಾಡುವುದಿದೆ. ಅದಕ್ಕೆ ನಿಮ್ಮ ಅನುಭವ ಅಗತ್ಯ ಎಂದು ಅಲ್ಲಿನ ನಾಯಕರು ಹೇಳಿದ್ದರು ಎಂದು ಏಕನಾಥ್ ಶಿಂಧೆ ತಿಳಿಸಿದ್ದಾರೆ.

ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ ಹೇಳಿಕೆಯಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ತಲ್ಲಣ

ನಮ್ಮ ಶಾಸಕರು ಖರೀದಿಗಿಲ್ಲ

● ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು
● ಮಹಾರಾಷ್ಟ್ರ ಸರ್ಕಾರ ಉಳಿಯುವುದೇ ಡೌಟು: ಡಿಕೆಶಿ

ಬೆಂಗಳೂರು, ಮೇ13(ಕೆಎಂಶಿ)– ಮಹಾರಾಷ್ಟ್ರ ರಾಜಕೀಯದಲ್ಲಿ ಬೀಸಿದ ಬಿರುಗಾಳಿ ಕರ್ನಾಟಕದಲ್ಲೂ ಬೀಸಿ ಕಾಂಗ್ರೆಸ್ ಸರ್ಕಾರ ಪತನಗೊಳ್ಳಲಿದೆ ಎಂದು ಅಲ್ಲಿನ ಮುಖ್ಯಮಂತ್ರಿ ಏಕನಾಥ ಶಿಂಧೆ ನೀಡಿರುವ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿದೆ. ಶಿಂಧೆ ಇಂತಹ ಹೇಳಿಕೆ ನೀಡಿದ ಬೆನ್ನಲ್ಲೇ ನಮ್ಮ ಕಾಂಗ್ರೆಸ್‌ನ ಯಾವ ಶಾಸಕರೂ ಖರೀದಿಗಿಲ್ಲ ಎಂದಿರುವ ಮುಖ್ಯಮಂತ್ರಿ ಸಿದ್ದ ರಾಮಯ್ಯ, ಮೊದಲನೆಯದಾಗಿ ಕೇಂದ್ರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರುವುದು ಕನಸು ಎಂದು ತಿರುಗೇಟು ನೀಡಿದ್ದಾರೆ.

ಲೋಕಸಭಾ ಚುನಾವಣೆ ಪೂರ್ಣಗೊಳ್ಳುತ್ತಿದ್ದಂತೆ ಕರ್ನಾಟಕದಲ್ಲಿ ಸರ್ಕಾರ ಪತನಕ್ಕೆ ಸಮಯ ಸನ್ನಿಹಿತವಾಗಿದೆ. ಇಂತಹ ಸಂದರ್ಭದಲ್ಲಿ ನನ್ನ ನೆರವನ್ನು ರಾಜ್ಯ ಬಿಜೆಪಿ ನಾಯಕರು ಕೋರಿದ್ದಾರೆಂದು ಏಕನಾಥ್ ಶಿಂಧೆ ಹೇಳಿಕೆ ನೀಡಿದ್ದಾರೆ. ಕರ್ನಾಟಕದ ಬಿಜೆಪಿ ಮತ್ತು ಎನ್‌ಡಿಎ ಭಾಗೀದಾರ ಮುಖಂಡರು ಈಗಾಗಲೇ ಹಲವಷ್ಟು ಸಭೆ ನಡೆಸಿ, ನನ್ನ ಮತ್ತು



ಗೋವಾ ಮುಖ್ಯಮಂತ್ರಿ ಅವರ ಸಹಕಾರ ಕೋರಿದ್ದಾರೆ. ಅಲ್ಲಿನ ಕಾಂಗ್ರೆಸ್‌ನ ಬಹುತೇಕ ಶಾಸಕರು ಬಿಜೆಪಿ ಮುಖಂಡರ ಜೊತೆ ಸಂಪರ್ಕದಲ್ಲಿದ್ದಾರೆ. ಅವರಿಗೆ ಹಸಿರು ನಿಶಾನೆ ದೊರೆಯುತ್ತಿದ್ದಂತೆ ಪಕ್ಷ ತೊರೆದು ಬಿಜೆಪಿ ಜೊತೆ ಕೈಜೋಡಿಸಲಿದ್ದಾರೆ ಎಂದು ಬಾಂಬ್ ಸಿಡಿಸಿದ್ದಾರೆ.

ಸರ್ಕಾರ ಬದಲಾವಣೆ ಸಂದರ್ಭದಲ್ಲಿ ಯಾವ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕೆಂದು ಅಲ್ಲಿನ ಮುಖಂಡರು ಈಗಾಗಲೇ ನನ್ನ ಸಲಹೆ ಪಡೆದಿದ್ದಾರೆ. ಚುನಾವಣೆ ಮುಗಿಯುತ್ತಿದ್ದಂತೆ ನಾನೇ ಖುದ್ದಾಗಿ ಕರ್ನಾಟಕಕ್ಕೆ ಬಂದು ಮಾರ್ಗದರ್ಶನ ಮಾಡುವುದಾಗಿ ತಿಳಿಸಿದ್ದೇನೆ. ಈ ಬೆಳವಣಿಗೆ ನಂತರವೇ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಕಾಂಗ್ರೆಸ್ ಸರ್ಕಾರ ಲೋಕಸಭಾ ಚುನಾವಣೆ ನಂತರ ತಾನಾಗಿಯೇ ಪತನಗೊಳ್ಳಲಿದೆ ಎಂದು ಪದೇ ಪದೆ ಹೇಳಿಕೆ ನೀಡುತ್ತಲೇ ಬಂದಿದ್ದಾರೆ. ಇದರ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಾರಾಷ್ಟ್ರ ಮುಖ್ಯಮಂತ್ರಿ ಶಿಂಧೆ ಭ್ರಮೆಯಲ್ಲಿದ್ದಾರೆ ಎಂದು ಖಾರವಾಗಿ ತಿರುಗೇಟು ನೀಡಿದ್ದಾರೆ. ಯಾವ ಕಾರಣಕ್ಕೂ ಆಪರೇಷನ್ ಕಮಲ ಮಾಡಲು ಆಗುವುದಿಲ್ಲ. ಚುನಾವಣಾ ಸಂದರ್ಭದಲ್ಲಿ ಪ್ರಯತ್ನ ಮಾಡಿ ವಿಫಲರಾಗಿದ್ದಾರೆ. ಮಹಾರಾಷ್ಟ್ರದಲ್ಲಾದಂತೆ ● 9ನೇ ಪುಟಕ್ಕೆ

ಇಂದು ಮೈಸೂರಿಗೆ ಸಿದ್ದರಾಮಯ್ಯ

ಮೈಸೂರು, ಮೇ13(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ(ಮೇ14) ಮೈಸೂರಿಗೆ ಆಗಮಿಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಪ್ರಯಾಣ ಬೆಳೆಸುವ ಸಿದ್ದರಾಮಯ್ಯ 11.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮಧ್ಯಾಹ್ನ 12 ಗಂಟೆಗೆ ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಮರಿತಿಬ್ಬೇಗೌಡ ನಾಮಪತ್ರ ಸಲ್ಲಿಸುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಾಮಪತ್ರ ಸಲ್ಲಿಸಿದ ತರುವಾಯ ಸಿದ್ದರಾಮಯ್ಯ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ಕುರಿತಂತೆ ಸ್ಥಳಿಯ ಕಾಂಗ್ರೆಸ್ ನಾಯಕರ ಜೊತೆ ನಾಳೆ ಸಂಜೆ ಸಿದ್ದರಾಮಯ್ಯ ಸಭೆ ನಡೆಸಿ, ಕಾರ್ಯತಂತ್ರ ರೂಪಿಸಲಿದ್ದಾರೆ. ಮೇ.15 ರಂದು ಮೈಸೂರಿನಲ್ಲಿ ನಡೆಯುವ ಕೆಲವು ಕಾರ್ಯಕ್ರಮಗಳಲ್ಲಿ ಸಿದ್ದರಾಮಯ್ಯ ಭಾಗಿಯಾಗಲಿದ್ದಾರೆ.

ಪಾಪ, ಪಿಂಚಣಿಗಾಗಿ ಫಲಾನುಭವಿಗಳ ಫಜೀತಿ

● ಮೈಸೂರು ತಾಲೂಕು ಕಚೇರಿಯಲ್ಲಿ ನಿತ್ಯವೂ ಫಲಾನುಭವಿಗಳ ಪರಿಪಾಟಲು ● ಸ್ಥಗಿತಗೊಂಡಿರುವ ಪಿಂಚಣಿ ಸಮಸ್ಯೆ ನಿವಾರಿಸಿಕೊಳ್ಳಲು ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವ ದುಸ್ಥಿತಿ ● ಇವರಿಗಿಲ್ಲ 'ಪಿಂಚಣಿ' ಗ್ಯಾರಂಟಿ

ಮೈಸೂರು, ಮೇ 13 (ಆರ್‌ಕೆ)– ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳು, ತಾಂತ್ರಿಕ ತೊಂದರೆಯಿಂದ ಸ್ಥಗಿತಗೊಂಡಿರುವ ತಮ್ಮ ಪಿಂಚಣಿ ಹಣಕ್ಕಾಗಿ ನಿತ್ಯ ಪರಿಪಾಟಲು ಪಡುವಂತಾಗಿದೆ.

ಮೈಸೂರಿನ ನಜರಬಾದ್‌ನಲ್ಲಿರುವ ತಾಲೂಕು ಕಚೇರಿ (ಮಿನಿ ವಿಧಾನಸೌಧ) ಕಟ್ಟಡದ ನೆಲಮಹಡಿಯ ಕೌಂಟರ್‌ನಲ್ಲಿ ವೃದ್ಧರು, ಅಂಗವಿಕಲರು, ವಿಧವೆಯರು, ಹಿರಿಯ ನಾಗರಿಕರು ಸ್ಥಗಿತಗೊಂಡಿರುವ ಪಿಂಚಣಿ ಹಣ ಪಡೆಯಲು ಗಂಟೆಗಟ್ಟಲೆ ಕಾದು ನಿಲ್ಲುವ ಪರಿಸ್ಥಿತಿ ಉಂಟಾಗಿದೆ.

ಸಂಧ್ಯಾಸುರಕ್ಷಾ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನ ಸೇರಿದಂತೆ ರಾಜ್ಯ ಸರ್ಕಾರ ಮಂಜೂರು ಮಾಡಿರುವ ಹಲವು ಸಾಮಾಜಿಕ ಭದ್ರತಾ ಯೋಜನೆಗಳ ಸಾವಿರಾರು ಫಲಾನುಭವಿಗಳಿಗೆ ನೀಡುತ್ತಿರುವ ಪಿಂಚಣಿ ಹಣ ಕಳೆದ ನಾಲ್ಕೈದು ತಿಂಗಳಿಂದ ಬಾರದ ಕಾರಣ ತಾಲೂಕು ಕಚೇರಿ ಕೌಂಟರ್‌ಗಳಲ್ಲಿ ದಾಖಲೆಗಳ ಜೆರಾಕ್ಸ್ ಪ್ರತಿಗಳೊಂದಿಗೆ ಪ್ರತೀ ದಿನ ಬೆಳಿಗ್ಗೆ 9.30 ಗಂಟೆಯಿಂದಲೇ ನೂರಾರು ಮಂದಿ ಸಾಲುಗಟ್ಟಿ ನಿಲ್ಲುತ್ತಿದ್ದು, ಸಮಸ್ಯೆ ಸರಿಪಡಿಸಿ



ತಾಂತ್ರಿಕ ತೊಂದರೆಯಿಂದ ಸ್ಥಗಿತಗೊಂಡಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿಯನ್ನು ಸರಿಪಡಿಸಿಕೊಳ್ಳಲು ಫಲಾನುಭವಿಗಳು ಮೈಸೂರಿನ ತಹಶೀಲ್ದಾರ್ ಕಚೇರಿಯಲ್ಲಿ ಸಾಲುಗಟ್ಟಿ ನಿಂತಿರುವುದು

ಕೊಳ್ಳಲು ಪರದಾಡುತ್ತಿದ್ದಾರೆ. ರಾಷ್ಟ್ರೀಯ ಬ್ಯಾಂಕುಗಳು ವಿಲೀನವಾದ ನಂತರ ಗ್ರಾಹಕರ ಬ್ಯಾಂಕ್ ಖಾತಾ ನಂಬರ್‌ಗಳು ಬದಲಾಗಬೇಕಿದ್ದು, ಅಗತ್ಯ ದಾಖಲೆಗಳೊಂದಿಗೆ ಆಧಾರ್ ಲಿಂಕ್ ಮಾಡಿಸಬೇಕಾಗಿದೆ. ಕೆಲವರಿಗೆ ಬ್ಯಾಂಕ್ ಖಾತೆಗೆ, ಮತ್ತೆ ಕೆಲವರಿಗೆ ಪೋಸ್ಟ್ ಆಫೀಸ್ ಖಾತೆಗಳಿಗೆ ವರ್ಗಾವಣೆಯಾಗುತ್ತಿದ್ದ ಪಿಂಚಣಿ ಹಣವನ್ನು ತಾಂತ್ರಿಕ ಸಮಸ್ಯೆಯಿಂದಾಗಿ ಜಮಾ ಮಾಡುವುದನ್ನು ಸ್ಥಗಿತಗೊಳಿಸಿರುವುದರಿಂದ ಈ ಸಮಸ್ಯೆ ಉಂಟಾಗಿದೆ. ಅದನ್ನು ಆಧಾರ್ ಸಂಖ್ಯೆ, ಬ್ಯಾಂಕ್ ಪಾಸ್‌ಬುಕ್ ಸಂಖ್ಯೆ ಮೊಬೈಲ್ ಸಂಖ್ಯೆಗಳನ್ನು ಪಡೆದು ಫಲಾನುಭವಿಗಳ ಅಧಿಕೃತ ಬ್ಯಾಂಕ್ ಖಾತೆಗೆ ಸಾಮಾಜಿಕ ಭದ್ರತಾ ಯೋಜನೆಗಳ ಪಿಂಚಣಿ ಹಣ ಜಮಾ ಆಗುವಂತೆ ಮಾಡಲು ತಾಲೂಕು ಕಚೇರಿಯಲ್ಲಿ ಕೌಂಟರ್‌ವೊಂದರಲ್ಲಿ ಪ್ರಕ್ರಿಯೆ ನಡೆಯುತ್ತಿದೆ.

ಆದರೆ, ಆ ಕೌಂಟರ್‌ನಲ್ಲಿ ಕೇವಲ ಒಬ್ಬರೇ ಸಿಬ್ಬಂದಿ ಇರುವುದರಿಂದ ಒಬ್ಬೊಬ್ಬ ಫಲಾನುಭವಿಯ ದಾಖಲೆ ಪಡೆದು ಅಪ್‌ಲೋಡ್ ಮಾಡಲು ಕನಿಷ್ಠ 20 ನಿಮಿಷ ಬೇಕಾಗುತ್ತದೆಯಾದ್ದರಿಂದ ವೃದ್ಧರು, ಅಂಗವಿಕಲರು ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ಇದೆ. ಕೆಲವರು ಸೇವೆ ಸಿಗದೆ ವಾಪಸಾಗಬೇಕಾಗಿರುವುದರಿಂದ ತಾಲೂಕು ಆಡಳಿತವು ಮತ್ತೊಂದು ಕೌಂಟರ್ ತೆರೆದು ತ್ವರಿತಗತಿಯಲ್ಲಿ ಪಿಂಚಣಿದಾರರ ಸಮಸ್ಯೆ ಪರಿಹರಿಸಬೇಕಾಗಿದೆ. ದೂರದ ಊರುಗಳಿಂದ, ವಿವಿಧ ಬಡಾವಣೆಗಳಿಂದ ಬರುವ ಪಿಂಚಣಿದಾರರು ಊಟ ತಿಂಡಿ ಇಲ್ಲದೆ ಬೆಳಗ್ಗೆಯಿಂದ ಸಂಜೆವರೆಗೂ ತಾಲೂಕು ಕಚೇರಿ ಕೌಂಟರ್‌ನಲ್ಲಿ ಕಾದು ಬಸವಳಿಯುವುದನ್ನು ತಪ್ಪಿಸಿ ಆದ್ಯತೆ ಮೇಲೆ ಫಲಾನುಭವಿಗಳಿಗೆ ಸೇವೆ ಒದಗಿಸಬೇಕಾಗಿದೆ.

ಮೈಸೂರು ಮಿತ್ರ

ಮೈಸೂರಲ್ಲಿ 'ಶಕ್ತಿ' ಪ್ರಭಾವ; ಪ್ರಯಾಣಿಕರ ಸಂಖ್ಯೆಗನುಸಾರ ಓಡಿಸಲು ಬಸ್ಸೇ ಇಲ್ಲ

●ಗುಜರಿ ಸೇರುತ್ತಿವೆ ನರ್ಮ್ ಯೋಜನೆಯ 118 ಬಸ್‌ಗಳು ●ಬಿಎಂಟಿಸಿ, ಚಿಕ್ಕಬಳ್ಳಾಪುರದ 20 ಬಸ್‌ಗಳ ತಂದು ಓಡಿಸುವ ಅನಿವಾರ್ಯತೆ ●ಜೂನ್‌ನಲ್ಲಿ 50 ನೂತನ ಬಸ್ ಸೇರ್ಪಡೆ; ವಿದ್ಯಾರ್ಥಿಗಳಿಗೆ ನಿತ್ಯವೂ ಅನಾನುಕೂಲ





ಮೈಸೂರಿನ ನಗರ ಬಸ್ ನಿಲ್ದಾಣದಲ್ಲಿ ಬಸ್‌ಗಳಿಗಾಗಿ ಕಾಯುತ್ತಿರುವ ಪ್ರಯಾಣಿಕರು.

●ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಮೇ 13– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ 'ಶಕ್ತಿ' ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಮಹಿಳೆಯರು ಉಚಿತ ಪ್ರಯಾಣ ಮಾಡುವ ಭಾಗ್ಯ ಪಡೆದಿದ್ದಾರೆ. ಹಾಗಾಗಿ ನಿತ್ಯವೂ ಸರ್ಕಾರಿ ಬಸ್‌ಗಳು ಮಹಿಳೆಯರಿಂದ ಕಿಕ್ಕಿರಿದು ತುಂಬಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಲ್ಲಿ ಉಚಿತ ಪ್ರಯಾಣ ಮಹಿಳೆಯರಿಗಂತೂ ಹಬ್ಬ ತಂದಿದೆ. ಆದರೆ ಬಸ್‌ಗಳ ಕೊರತೆ ಮಹಿಳಾ ಮಣಿಗಳೂ ಸೇರಿದಂತೆ ಎಲ್ಲಾ ಪ್ರಯಾಣಿಕರಿಗೆ ಸಮಸ್ಯೆ ತಂದೊಡ್ಡಿದೆ.

ಮೈಸೂರು ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣಗಳಲ್ಲಿ ದಿನದಿಂದ ದಿನಕ್ಕೆ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಅಸಂಘಟಿತ ವಲಯಗಳ ಮಹಿಳಾ ಕಾರ್ಮಿಕರು, ಗಾರೆ ಕೆಲಸ, ಮನೆಗೆಲಸ, ಬಟ್ಟೆ ಅಂಗಡಿ ಹೀಗೆ ಹೊಟ್ಟೆಪಾಡಿಗೆ ನಾನಾ ಕೆಲಸ ಕಾರ್ಯಗಳಿಗೆ ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರಲ್ಲಿ ಸಂಚರಿಸುವ ಎಲ್ಲಾ ಬಸ್‌ಗಳು ಪ್ರತಿನಿತ್ಯ ಕಿಕ್ಕಿರಿದು ತುಂಬಿರುತ್ತವೆ. ಇದರೊಂದಿಗೆ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕೂಲಿನಾಲಿಗೆ ಪುರುಷರು ಪ್ರಯಾಣಿಸುತ್ತಿರುವುದರಿಂದ ಬಸ್‌ಗಳಲ್ಲಿ ನಿಗದಿಗಿಂತ ಎರಡು ಪಟ್ಟು ಪ್ರಯಾಣಿಕರು ಸಂಚಾರ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್ ಸಂಚಾರಕ್ಕೆ ವ್ಯವಸ್ಥೆ ಮಾಡಲು ಬಸ್‌ಗಳ ಕೊರತೆಯಿಂದ ಅಧಿಕಾರಿಗಳು ಅಸಹಾಯಕರಾಗಿದ್ದಾರೆ.

ಗುಜರಿ ಸೇರಲಿವೆ 118 ಬಸ್‌ಗಳು: ಮೈಸೂರು ನಗರಕ್ಕೆ 2009ರಲ್ಲಿ ನರ್ಮ್ ಯೋಜನೆಯಡಿ ಖರೀದಿಸಿದ 118 ಬಸ್‌ಗಳು ಗುಜರಿಗೆ ಹಾಕಲು ನಿರ್ಧರಿಸಲಾಗಿದೆ. ನಿಯಮಾನುಸಾರ 15 ವರ್ಷ ಪೂರೈಸಿದ ಸಾರಿಗೆ ಬಸ್‌ಗಳನ್ನು ಸೇವೆಯಿಂದ ವಾಪಸ್ಸು ಕಳುಹಿಸಬೇಕಾಗಿದೆ. ಈಗಾಗಲೇ ಹಂತ ಹಂತವಾಗಿ ನೂರಾರು ಬಸ್‌ಗಳನ್ನು ಗುಜರಿಗೆ ಕಳುಹಿಸಲಾಗಿದ್ದು, 2024ರ ಏ.15ರಿಂದ ಮೇ 15ರೊಳಗೆ 118 ಬಸ್‌ಗಳು ಗುಜರಿ ಸೇರುತ್ತಿವೆ. ಈ ಎಲ್ಲಾ ಬಸ್‌ಗಳು ಮೈಸೂರು ನಗರ ವಿಭಾಗದ ಡಿಪೋಗಳಿಂದ ನಾನಾ ಮಾರ್ಗದಲ್ಲಿ ಸಂಚರಿಸುತ್ತಿದ್ದವು. ಹಾಗಾಗಿ ಮೈಸೂರು ನಗರ ವಿಭಾಗದಲ್ಲಿ ಬಸ್‌ಗಳ ಕೊರತೆ ಉಂಟಾಗುತ್ತಿದೆ.

20 ಬಸ್ ಎರವಲು: ಮೈಸೂರು ನಗರ ವಿಭಾಗದ 118 ಬಸ್‌ಗಳ ಗುಜರಿಗೆ ಹಾಕುತ್ತಿರುವುದರಿಂದ ಪ್ರಯಾಣಿಕರಿಗೆ ಆಗುವ ತೊಂದರೆಯನ್ನು ನಿವಾರಿಸಲು ಬಿಎಂಟಿಸಿ(ಕೆಎ.57) ಹಾಗೂ ಚಿಕ್ಕಬಳ್ಳಾಪುರ (ಕೆಎ.40) ವಿಭಾಗದ 20 ಬಸ್‌ಗಳನ್ನು ಕೆಲವು ಮಾರ್ಪಾಡು ಮಾಡಿ ನಗರ ವಿಭಾಗದ ವ್ಯಾಪ್ತಿಯಲ್ಲಿ ಪ್ರಯಾಣಿಕರ ಸೇವೆಗೆ ಬಳಸಿಕೊಳ್ಳಲಾಗುತ್ತಿದೆ.

ಜೂನ್‌ನಲ್ಲಿ 50 ಹೊಸ ಬಸ್: ನರ್ಮ್ ಯೋಜನೆಯಲ್ಲಿ ಖರೀದಿಸಿರುವ ಹಾಗೂ ಗುಜರಿಗೆ ಸೇರುತ್ತಿರುವ 118 ಬಸ್‌ಗಳ ಸ್ಥಾನ ತುಂಬಲು ಎರವಲು ಪಡೆದ 20 ಬಸ್‌ಗಳೊಂದಿಗೆ ಜೂನ್‌ನಲ್ಲಿ 50 ಹೊಸ ಬಸ್‌ಗಳು ನಗರ ವಿಭಾಗಕ್ಕೆ ಸೇರ್ಪಡೆಯಾಗಲಿವೆ. ಶಾಲಾ–ಕಾಲೇಜುಗಳು ಪೂರ್ಣ ಪ್ರಮಾಣದಲ್ಲಿ ಆರಂಭವಾಗುವ ವೇಳೆಗೆ 70ಕ್ಕೂ ಹೆಚ್ಚುವರಿ ಬಸ್‌ಗಳು ನಗರ ವಿಭಾಗದಲ್ಲಿ ಪ್ರಯಾಣಿಕರ ಸೇವೆ ಲಭ್ಯವಾಗುವುದರಿಂದ ಬಸ್‌ಗಳ ಕೊರತೆ ನೀಗಲಿದೆ. ಜುಲೈ, ಆಗಸ್ಟ್‌ನಲ್ಲಿ ಮತ್ತಷ್ಟು ಬಸ್‌ಗಳು ಮೈಸೂರಿಗೆ ಬರುವುದರಿಂದ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್‌ಗಳ ಸಂಚಾರ ಮುಂದುವರೆಯಲಿದೆ.

ಪ್ರಯಾಣಿಕರಿಗೆ ತೊಂದರೆಯಾಗದಂತೆ ಕ್ರಮ

"ಮೈಸೂರು ನಗರ ವಿಭಾಗದಲ್ಲಿ 536 ಬಸ್‌ಗಳಿದ್ದು, ಅವುಗಳಲ್ಲಿ 15 ವರ್ಷ ಪೂರೈಸಿದ 118 ಬಸ್‌ಗಳನ್ನು ಸ್ಕ್ರ್ಯಾಪ್(ಗುಜರಿ)ಗೆ ಹಾಕಲಾಗುತ್ತಿದೆ. ಏ.15ರಿಂದ ಮೇ 15ರೊಳಗೆ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಪ್ರಯಾಣಿಕರಿಗೆ ತೊಂದರೆ ನಿವಾರಿಸುವ ಸಲುವಾಗಿ ಬಿಎಂಟಿಸಿ ಹಾಗೂ ಇತರೆಡೆಗಳಿಂದ 20 ಬಸ್‌ಗಳನ್ನು ತರಿಸಲಾಗಿದೆ. ಅವುಗಳು ಈಗಾಗಲೇ ವಿವಿಧ ಮಾರ್ಗದಲ್ಲಿ ಸಂಚರಿಸುತ್ತಿವೆ. ಮುಂದಿನ ತಿಂಗಳು 50 ಹೊಸ ಬಸ್‌ಗಳು ನಗರ ವಿಭಾಗಕ್ಕೆ ಸೇರ್ಪಡೆಯಾಗುತ್ತಿವೆ. ಹಾಗಾಗಿ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್‌ಗಳ ಸಂಚಾರ ಸಾಧ್ಯವಿದೆ.

–ಹೆಚ್.ಟಿ.ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ನಗರ ವಿಭಾಗ

ವಾತ್ಸಲ್ಯ ಸೇವಾ ಕೇಂದ್ರದಲ್ಲಿ ವಿಶ್ವ ತಾಯಂದಿರ ದಿನಾಚರಣೆ



ಹಿರಿಯ ಜೀವಿಗಳ ಆಶ್ರಯ ತಾಣ ವಾತ್ಸಲ್ಯ ಸೇವಾ ಕೇಂದ್ರದಲ್ಲಿ ವಿಶ್ವ ತಾಯಂದಿರ ದಿನ ಆಚರಿಸಲಾಯಿತು.

ಮೈಸೂರು, ಮೇ 13–ನಗರದ ಹಿನಕಲ್‌ನಲ್ಲಿರುವ ವಾತ್ಸಲ್ಯ ಹಿರಿಯ ಜೀವಿಗಳ ಆಶ್ರಯ ತಾಣ ವಾತ್ಸಲ್ಯ ಸೇವಾ ಕೇಂದ್ರದಲ್ಲಿ (ಮೇ 13) ವಿಶ್ವ ತಾಯಂದಿರ ದಿನಾಚರಣೆಯನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಲಾಯಿತು.

> ತಾಯಿ ಮಾತೃ ಹೃದಯಿ, ವಾತ್ಸಲ್ಯಮಯಿ, ಮಮತೆಯ ಸುಳಿ... ಹೀಗೆ ತಾಯಿ ಹತ್ತು ಹಲವು ಸ್ಥಾನ ತುಂಬಬಲ್ಲವಳು. ತಾಳ್ಮೆಗೆ ಮತ್ತೊಂದು ಹೆಸರೇ ವಾತ್ಸಲ್ಯಮಯಿ ಅವ್ವ. –ನಾಗರತ್ನ


ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ಶುಶ್ರೂಷಕಿ ನಾಗರತ್ನ ಮಾತನಾಡಿ, ಸಮಾಜದಲ್ಲಿ ತಾಯಿಗೆ ಮಹತ್ವದ ಸ್ಥಾನವಿದೆ. ತಾಯಿಗಿಂತ ಮಿಗಿಲಾದ ದೇವರಿಲ್ಲ. ತಾಯಿಯೇ ಮೊದಲ ಗುರುವೂ ಹೌದು. ಏಕೆಂದರೆ, ತಾಯಿಯ ಋಣವನ್ನು ನಾವು ಎಂದೆಂದಿಗೂ ತೀರಿಸುವುದು ಅಸಾಧ್ಯ ಎಂದು ಅಭಿಪ್ರಾಯಿಸಿದರು.

ಮನೆಯಲ್ಲಿ ತಾಯಿಯಾದವಳು ಮಕ್ಕಳಿಗೆ ಒಳ್ಳೆಯ ಆಚಾರ, ವಿಚಾರ, ಸಂಸ್ಕೃತಿಯನ್ನು ಕಲಿಸಬಲ್ಲ ಮೊದಲ ಶಿಕ್ಷಕಿಯೂ ಆಗಿರುತ್ತಾಳೆ. ತಾಯಿ ಎನ್ನುವ ಎರಡಕ್ಷರಕ್ಕೆ ಅಗಾಧ ಶಕ್ತಿ ಇದೆ. ನಾವು ತಾಯಿಗೆ ಗೌರವವನ್ನು ಕೊಡುವುದರ ಜೊತೆಗೆ, ಹಿರಿಯ ವಯಸ್ಸಿನಲ್ಲಿ ಇರುವವರಿಗೆ ನೆರಳಾಗಿ ಆರೈಕೆಯನ್ನು ಮಾಡಿ ಅವರ ಮನಸ್ಸನ್ನು ಸಂತೋಷಗೊಳಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. 9 ತಿಂಗಳು ಹೊತ್ತು–ಹೆತ್ತು ಪೋಷಣೆಯೊಂದಿಗೆ ನಮ್ಮನ್ನು ಈ ಸಮಾಜಕ್ಕೆ ಅರ್ಪಿಸುವವಳೇ ತಾಯಿ. ಆದ್ದರಿಂದ ಮಾತೃಹೃದಯಿ ತಾಯಂದಿರ ದಿನವನ್ನು ಕೇವಲ ಒಂದು ದಿನಕ್ಕೆ ಸೀಮಿತವಾಗದೇ ವರ್ಷವಿಡೀ ತಾಯಿಯನ್ನು ಗೌರವಿಸಿ, ಮನ್ನಣೆಯನ್ನು ನೀಡಬೇಕಾಗಿದೆ ಎಂದು ತಿಳಿಸಿದರು.

ವಾತ್ಸಲ್ಯ ಸೇವಾ ಫೌಂಡೇಷನ್‌ನ ಅಧ್ಯಕ್ಷ ಎ.ಸಿ.ರವಿಕುಮಾರ್ ಮಾತನಾಡಿ, ಹಿರಿಯ ಜೀವಿಗಳ ಮನಸ್ಸನ್ನು ನೋಯಿಸದೇ ಅವರನ್ನು ಆರೋಗ್ಯವಂತರನ್ನಾಗಿ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ವೆಂಕಟೇಶ್, ಶಶಿಕಲಾ, ಆಶ್ರಮದ ಹಿರಿಯ ಜೀವಿಗಳು ಉಪಸ್ಥಿತರಿದ್ದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 524 ಅಂಕ ಗಳಿಸಿದ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಸದಸ್ಯ ಸಂಪತ್‌ಕುಮಾರ್ ಹಾಗೂ ಶ್ರೀಮತಿ ಮಾಧವಿ ಸಂಪತ್‌ಕುಮಾರ್ ದಂಪತಿ ಪುತ್ರಿ ಕುಮಾರಿ ನೇತ್ರ ಅವರನ್ನು ಶ್ರೀ ಶಂಕರ ಜಯಂತಿ ಮಹೋತ್ಸವದಂದು ಪ್ರತಿಭಾ ಪುರಸ್ಕಾರ ನೀಡಿ, ಸನ್ಮಾನಿಸಲಾಯಿತು. ಈ ವೇಳೆ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಮೌರ್ಯ ಆಸ್ಪತ್ರೆಯಲ್ಲಿ ನಡೆದ ಅಂತರ ರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯಲ್ಲಿ ದಾದಿಯರನ್ನು ಸನ್ಮಾನಿಸಲಾಯಿತು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ವರುಣ ಮಹಾದೇವ್, ಚೇತನ್‌ಗೌಡ, ವೆಂಕಟೇಶ್, ಭೈರತಿ ಲಿಂಗರಾಜು, ಲೋಕೇಶ್, ಶಿವು ಕಡಕೋಳ, ದುರ್ಗಾ ಪ್ರಸಾದ್, ರವಿಚಂದ್ರ, ಮೋಹನ್‌ಕುಮಾರ್, ನವೀನ್ ಕೆಂಪಿ ಹಾಗೂ ಇನ್ನಿತರರು ಹಾಜರಿದ್ದರು.

ಪ್ರಾಕೃತಿಕ ವಿಕೋಪದ ಸಮಸ್ಯೆ: ಸಹಾಯವಾಣಿ ಕೇಂದ್ರಗಳ ಸ್ಥಾಪನೆ

ಮೈಸೂರು,ಮೇ 13– ಮೈಸೂರು ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಕಾಲಿಕ ಇಲ್ಲವೆ ಅತಿಯಾದ ಮಳೆಯಿಂದಾಗಿ ಪ್ರವಾಹ, ಮನೆ ಹಾನಿ, ಕುಡಿಯುವ ನೀರು ಮತ್ತು ಒಳಚರಂಡಿ ಸಂಪರ್ಕ ಸಮಸ್ಯೆಗಳು, ಸಾರ್ವಜನಿಕ ಆಸ್ತಿಗಳಿಗೆ ಹಾನಿ ಉಂಟಾಗುವುದು, ಮರಗಳು ಮತ್ತು ವಿದ್ಯುತ್ ಕಂಬಗಳು ಉರುಳುವುದು ಇನ್ನು ಮುಂತಾದ ಹಲವಾರು ಪ್ರಾಕೃತಿಕ ವಿಕೋಪದ ಸಮಸ್ಯೆಗಳು ಉಂಟಾಗುವ ಸಂಭವವಿದ್ದು, ತಮ್ಮ ಬಡಾವಣೆಗಳ ವ್ಯಾಪ್ತಿಗಳಲ್ಲಿ ಎದುರಾಗಬಹುದಾದ ಸಮಸ್ಯೆಗಳಿಗೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಅಧಿಕಾರಿ ಅಥವಾ ಸಿಬ್ಬಂದಿಗಳನ್ನು ಸಹಾಯವಾಣಿ ಮೂಲಕ ಸಂಪರ್ಕಿಸಿ ತಮ್ಮ ಮಳೆ ಹಾನಿ ಸಂಬಂಧಿತ ಅಹವಾಲುಗಳನ್ನು ಸಲ್ಲಿಸಿ ಸೂಕ್ತ ಪರಿಹಾರಗಳನ್ನು ಪಡೆದುಕೊಳ್ಳಲು ತಿಳಿಸಿದ್ದಾರೆ. ನಂಜನಗೂಡು ನಗರಸಭೆ ಪೌರಾಯುಕ್ತ ಎಸ್.ನಂಜುಂಡಸ್ವಾಮಿ ದೂ.ಸಂ. 9844532502, ಹುಣಸೂರು ನಗರಸಭೆ ಪೌರಾಯುಕ್ತೆ ಶರ್ಮಿಳಾ ದೂ.ಸಂ. 7022773424, ಹೂಟಗಳ್ಳಿ ನಗರಸಭೆ ಪೌರಾಯುಕ್ತ ಬಿ.ಎನ್.ಚಂದ್ರಶೇಖರ್ ದೂ.ಸಂ. 9880531555, ಕೆ.ಆರ್.ನಗರ ಪುರಸಭೆಯ ಪೌರಾಯುಕ್ತ ಹೇಮಂತ್ ಎಸ್.ಡೊಳ್ಳೆ ದೂ.ಸಂ. 9449987940, ಬನ್ನೂರು ಪುರಸಭೆ ಪೌರಾಯುಕ್ತ ಹೇಮಂತರಾಜು ದೂ.ಸಂ. 9448433142, ತಿ.ನರಸೀಪುರ ಪುರಸಭೆಯ ಪೌರಾಯುಕ್ತೆ ಬಿ.ಕೆ.ವಸಂತಕುಮಾರಿ ದೂ.ಸಂ. 6360281580, ಪಿರಿಯಾಪಟ್ಟಣ ಪುರಸಭೆಯ ಪೌರಾಯುಕ್ತ ಕೆ.ಯು.ಮುತ್ತಪ್ಪ ದೂ.ಸಂ. 9902880630, ಹೆಚ್.ಡಿ.ಕೋಟೆ ಪುರಸಭೆಯ ಪೌರಾಯುಕ್ತ ಸುರೇಶ್.ಪಿ ದೂ.ಸಂ.888 4953484, ಸರಗೂರು ಪಟ್ಟಣ ಪಂಚಾಯಿತಿ ಪೌರಾಯುಕ್ತ ಮಂಜುನಾಥ್.ಎಸ್.ಎಸ್ ದೂ.ಸಂ.9844 158823, ಬೋಗಾದಿ ಪಟ್ಟಣ ಪಂಚಾಯಿತಿಯ ಪೌರಾಯುಕ್ತರಾದ ಕೊರಿಯಾಕೋಸ್ .ಸಿ ದೂ.ಸಂ. 9481653370, ಕಡಕೊಳ ಪಟ್ಟಣ ಪಂಚಾಯಿತಿಯ ಪೌರಾಯುಕ್ತೆ ನಾಗರತ್ನ ಎಂ.ಸಿ ದೂ.ಸಂ.9482058483, ಶ್ರೀರಾಂಪುರ ಪಟ್ಟಣ ಪಂಚಾಯಿತಿಯ ಪೌರಾಯುಕ್ತ ಸುರೇಶ್ ಎಂ.ಕೆ. ದೂ.ಸಂ. 9481915838, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಪೌರಾಯುಕ್ತ ನರಸಿಂಹಮೂರ್ತಿ ಎಸ್.ಡಿ. ದೂ.ಸಂ. 9964647243 ಅನ್ನು ಸಂಪರ್ಕಿಸಿ ಸಮಸ್ಯೆಗಳ ಬಗ್ಗೆ ಅಹವಾಲು ನೀಡಹುದು ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೆಂಗು ಬೆಳೆ ಪ್ರಾತ್ಯಕ್ಷಿಕೆ ತಾಕುಗಳನ್ನು ಅಭಿವೃದ್ಧಿಪಡಿಸಲು ಅರ್ಜಿ ಆಹ್ವಾನ

ಮೈಸೂರು, ಮೇ 13– ಮೈಸೂರು ತಾಲೂಕಿನ ತೋಟಗಾರಿಕೆ ಇಲಾಖೆ ವತಿಯಿಂದ ತೆಂಗು ಬೆಳೆ ಪ್ರಾತ್ಯಕ್ಷಿಕೆಗೆ, ತಾಕುಗಳನ್ನು ಅಭಿವೃದ್ಧಿಪಡಿಸಲು ಫಸಲಿಗೆ ಬಂದಿರುವ ತೆಂಗಿನ ತೋಟ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ರೈತರು ಆಧಾರ್ ಕಾರ್ಡ್, ಪಹಣಿ, ಬ್ಯಾಂಕ್ ಪಾಸ್ ಬುಕ್ ಹಾಗೂ ತಾಕಿನ ಛಾಯಾಚಿತ್ರದೊಂದಿಗೆ ಕಚೇರಿಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಮೈಸೂರು ತಾಲೂಕಿನ ಹೋಬಳಿ ಅಧಿಕಾರಿಗಳಾದ ಕಸಬ ಹೋಬಳಿ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ.ನಂ:9901387284, ಇಲವಾಲ ಹೋಬಳಿ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ.ನಂ: 9986086262, ಜಯಪುರ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ. ನಂ:8904673607, ವರುಣ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ. ನಂ:7259592484 ಅನ್ನು ಸಂಪರ್ಕಿಸಬಹುದು.

ನಿಧನ

ಅಂತೋಣಿ ಕ್ರಜ್



ಮೈಸೂರು, ಮೇ 13–ನಗರ ಸಶಸ್ತ್ರ ಮೀಸಲು ಪಡೆ ನಿವೃತ್ತ ಹೆಡ್ ಕಾನ್ಸ್‌ಟೇಬಲ್ ಮತ್ತು ರಾಘವೇಂದ್ರನಗರ ಬಡಾವಣೆ ನಿವಾಸಿ ಅಂತೋಣಿ ಕ್ರಜ್ (77) ನಿನ್ನೆ ಭಾನುವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಮೇರಿ ಎಲಿಜಬೆತ್, ಪುತ್ರಿಯರಾದ ಸುನೀತಾ ಕ್ರಜ್, ಸಾಗಂಯಾ ಕ್ರಜ್ ಲೋಬೋ, ಮೊಮ್ಮಕ್ಕಳಾದ ರಿಸ್ವಾನ್ ಆಡ್ರೀಯೆಲ್ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮೀರ್ ಬೇಗ್



ಮೈಸೂರಿನ ರಾಜೀವ್‌ನಗರ 3ನೇ ಹಂತದ ನಿವಾಸಿ ಅಮೀರ್ ಬೇಗ್ (64) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್‌ನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ವೆಂಕೋಬರಾವ್



ಮೈಸೂರಿನ ಹೆಬ್ಬಾಳು ವಾಣಿವಿಲಾಸ ಬಡಾವಣೆ ನಿವಾಸಿ ವೆಂಕೋಬರಾವ್(74) ಅವರು ತೀವ್ರ ಹೃದಯಾಘಾತದಿಂದ ಭಾನುವಾರ ಮುಂಜಾನೆ ನಿಧನರಾದರು. ಅವರು ಪತ್ನಿ ಸಕ್ಕೂಬಾಯಿ, ಪುತ್ರರಾದ ವಿನೋದ, ರಘು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಸಂಜೆ ಮಂಚೇಗೌಡಕೊಪ್ಪಲು ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಪ್ರಕಾಶ್




ಮೈಸೂರು ವಿದ್ಯಾನಗರ ನಿವಾಸಿ, ದಿವಂಗತ ಜಯದೇವ ಮತ್ತು ಶಾರದಮ್ಮ ಅವರ ಪುತ್ರ, ಉದ್ಯಮಿ ಕೆ.ಪ್ರಕಾಶ್ (63) ಅವರು ಇಂದು ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಭಾರತಿ, ಪುತ್ರಿ ಶಿಲ್ಪಾ, ಪುತ್ರ ಶ್ರೇಯಸ್ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅನುಸೂಯಮ್ಮ ನಿಧನ



ಮೈಸೂರು, ಮೇ 13–ಮೈಸೂರಿನ ಸರಸ್ವತಿಪುರಂ ನಿವಾಸಿ ದಿವಂಗತ ಬಿ.ಬಸವೇ ಗೌಡರ ಪತ್ನಿ ಜೆ.ಪಿ.ಅನುಸೂಯಮ್ಮ(89) ಅವರು ಇಂದು ನಿಧನರಾದರು. ಮೃತರು ಪುತ್ರ ಕೆ.ಬಿ. ನಾಗೇಂದ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗ ಅಗಲಿದ್ದು ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ಕೆ.ಜಿ. ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.05.2024 ಮಂಗಳವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್.ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಸಾಹಿತಿ ಎಂ.ಎಸ್. ನರಸಿಂಹಮೂರ್ತಿ, ಎಸ್.ಬಿ. ನವೀನ್‌ಗೌಡ, ಅಧ್ಯಕ್ಷತೆ : ಕು. ಅರ್ಚನಾ ಪರಮೇಶ್ವರ ಹೆಗಡೆ, ಉಪಸ್ಥಿತರು : ಟಿ. ಮುರಳೀಧರ್ ಭಾಗವತ್, ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಡಾ. ಸಿ.ಕೆ. ರೇಣುಕಾರ್ಯ, ಡಾ. ಎಸ್.ಆರ್. ರಮೇಶ್, ಡಾ. ಬಿ.ಆರ್. ಜಯಕುಮಾರಿ, ಎಂ. ನಾಗೇಶ್, ಡಾ. ಕ್ಯಾಪ್ಟನ್ ಎಂ.ಆರ್. ಇಂದ್ರಾಣಿ, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ದಲಿತ ಸಾಹಿತ್ಯ ಪರಿಷತ್ತು, ಜಿಲ್ಲಾ ಘಟಕ, ಪ್ರಗತಿಪರ ಸಂಘಟನೆಗಳ ಸಮನ್ವಯ ವೇದಿಕೆ, ಚಳವಳಿ ಪ್ರಕಾಶನ, ನಂಜನಗೂಡು :** ಡಾ. ಕೆ.ಪಿ. ಮಹಾಲಿಂಗು ಕಲ್ಕುಂದ ಅವರ 12ನೇ ಕೃತಿ ವಿಮೋಚನ ದರ್ಶನ ಲೋಕಾರ್ಪಣೆ ಸಮಾರಂಭ, ಪುಸ್ತಕ ಲೋಕಾರ್ಪಣೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಅಧ್ಯಕ್ಷತೆ : ದಲಿತ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಅರ್ಜುನ ಗೊಳಸಂಗಿ, ಕೃತಿ ಕುರಿತು ಮಾತನಾಡುವವರು : ಚಿಂತಕ ನಾ. ದಿವಾಕರ, ಉಪಸ್ಥಿತರು : ಕೃತಿ ರಚನೆಕಾರ ಡಾ. ಕೆ.ಪಿ.ಮಹಾಲಿಂಗು ಕಲ್ಕುಂದ, ಹರಿಹರ ಆನಂದ ಸ್ವಾಮಿ, ಡಾ. ಚಂದ್ರಗುಪ್ತ, ಕರಾಮುವಿವಿ ವಿಶೇಷಾಧಿಕಾರಿ ಎಸ್. ಮಹದೇವು, ಪ್ರಗತಿಪರ ಸಂಘಟನೆಗಳ ಸಮನ್ವಯ ವೇದಿಕೆ ಅಧ್ಯಕ್ಷ ಸೋಮಯ್ಯ ಮಲಿಯೂರು, ಪ್ರದೇಶಾಭಿವೃದ್ಧಿ ಮಂಡಳಿ ಯೋಜನಾ ಇಲಾಖೆ ನಿರ್ದೇಶಕ ಡಿ.ಚಂದ್ರಶೇಖರಯ್ಯ, ಹಾಸನ ಕರಾಮುವಿವಿ ಪ್ರಾದೇಶಿಕ ನಿರ್ದೇಶಕ ಪಿ. ಜಗದೀಶ್, ಕರಾದಸಂಸ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ, ಸ್ಥಳ:ರೋಟರಿ ಸಭಾಂಗಣ, ಮುಡಾ ಎದುರು, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಶ್ರೀ ತ್ರಿನೇತ್ರ ಇಂಟರ್‌ನ್ಯಾಷನಲ್ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಬೃಂದಾವನ ಬಡಾವಣೆ:** 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗೋತ್ಸವ, ಸಾನ್ನಿಧ್ಯ: ಬೇಬಿಮಠ ಮತ್ತು ಚಂದ್ರವನ ಆಶ್ರಮದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಉದ್ಘಾಟನೆ: ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಅಧ್ಯಕ್ಷತೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿ ಡಾ. ಎಸ್. ಅಹಲ್ಯಾ, ಮುಖ್ಯ ಅತಿಥಿಗಳು: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಮಂಡ್ಯ ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶೇಕ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ. ಎಚ್.ಎಲ್. ನಾಗರಾಜು, ಸ್ಥಳ: ಡಿಎಂಎಸ್ ಚಂದ್ರವನ ಆಶ್ರಮ, ಶ್ರೀರಂಗಪಟ್ಟಣ, ಬೆಳಗ್ಗೆ 7ಕ್ಕೆ

■ **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ವಿಭಾಗೀಯ ಪತ್ರಾಗಾರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ :** ಎರಡು ದಿನಗಳ ವಿಚಾರ ಸಂಕಿರಣ, ವಿಷಯ : ಚಾರಿತ್ರಿಕ ದಾಖಲೆಗಳ ಹಿನ್ನೆಲೆಯಲ್ಲಿ ನಂಜನಗೂಡು ತಾಲೂಕಿನ ಚರಿತ್ರೆ, ಉದ್ಘಾಟನೆ : ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶಕ ಡಾ. ಗವಿಸಿದ್ದಯ್ಯ, ಮುಖ್ಯ ಅತಿಥಿಗಳು: ವಿಭಾಗೀಯ ಪತ್ರಾಗಾರ ಕಚೇರಿ ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್. ಮಂಜುನಾಥ್, ಜಂಟಿ ನಿರ್ದೇಶಕರ ಪ್ರಾದೇಶಿಕ ಕಚೇರಿ ಸಹಾಯಕ ನಿರ್ದೇಶಕ ಎ.ಬಿ. ನಾಗೇಂದ್ರ ಪ್ರಸಾದ್, ಪ್ರಾಂಶುಪಾಲರಾದ ಶ್ರೀಮತಿ ರೇಣುಕಾಬಾಯಿ, ರೇವಣ್ಣ, ಪ್ರಾಸ್ತಾವಿಕ ನುಡಿ : ಪ್ರಾಧ್ಯಾಪಕ ಹೆಚ್.ಬಿ. ಗಂಗಾಧರ್, ಅಧ್ಯಕ್ಷತೆ: ಪ್ರಾಂಶುಪಾಲ ಪ್ರೊ.ಬಿ.ಎಂ. ನಾಗರಾಜು, ಉಪಸ್ಥಿತರು : ಡಾ. ಜಯಕುಮಾರ್, ಕೆ. ಚಿನ್ನಸ್ವಾಮಿ, ಡಾ. ಎಂ.ಎನ್. ಲೋಕೇಶ್, ಎನ್. ಚಂದ್ರಶೇಖರ್, ಸ್ಥಳ: ಕಾಲೇಜು ಸಭಾಂಗಣ, ಹುಲ್ಲಹಳ್ಳಿ, ಬೆಳಗ್ಗೆ 10.30ಕ್ಕೆ.

■ **ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ವಿವಿಧ ವೇದಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಮುಖ್ಯ ಅತಿಥಿಗಳು : ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಡಾ. ಮಧು ಪಟೇಲ್ ಎನ್.ಎನ್., ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲರಾದ ಪ್ರೊ. ಎನ್. ಮಾಯಾದೇವಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಅದಮ್ಯ ರಂಗಶಾಲೆ :** ಬಾಲಂಗೋಚಿ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ, ಮಕ್ಕಳ ನಾಟಕ ಮತ್ತು ಜಾನಪದ ನೃತ್ಯ ಪ್ರದರ್ಶನ, ಅಧ್ಯಕ್ಷತೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ. ಜೆ. ಶಶಿಧರ್ ಪ್ರಸಾದ್, ಉದ್ಘಾಟನೆ : ಮಹಾರಾಜ ಕಾಲೇಜು ಕನ್ನಡ ಪ್ರಾಧ್ಯಾಪಕ ಡಾ. ಡಿ. ವಿಜಯಲಕ್ಷ್ಮಿ, ಸಮಾರೋಪ ನುಡಿ : ಅದಮ್ಯ ರಂಗಶಾಲೆ ಗೌರವ ಕಾರ್ಯದರ್ಶಿ ಟಿ. ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು : ಮಾಜಿ ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜ್‌ಗೌಡ, ಕೆನರಾ ಬ್ಯಾಂಕ್ ಹಿರಿಯ ವ್ಯವಸ್ಥಾಪಕ ಎಸ್. ರಾಜ, ಸ್ಥಳ: ಶ್ರೀ ಕುವೆಂಪು ರಂಗಮಂದಿರ, ಜಯಲಕ್ಷ್ಮಿಪುರಂ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಲೇಖನ–ಡಾ. ವಿನೋದಾ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ –ಮುಂದಿನ ವಾರದಿಂದ ಪ್ರಾರಂಭವಾಗಲಿರುವ ನೂತನ ಕಾದಂಬರಿಯ ಬಾನುಲಿ ಓದಿಗೊಂದು ಪ್ರಸ್ತಾವನೆ ಮಾಡಿರುವವರು –ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಅ.ಕೃ.ಗೌತಂ–ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಡಾ.ಮೈಸೂರು ಉಮೇಶ್, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ.ಎನ್.ಗಿರೀಶ್ ಮತ್ತು ಎಂ.ಎಸ್.ಪುಟ್ಟರಾಜು–ನಾಗಸ್ವರ, ಎಂ.ಆರ್. ಅಜಯ್‌ಕುಮಾರ್–ಡೋಲು, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ : ಭಾರತನಾಟ್ಯ, ರಂಗಭೂಮಿ ಕಲಾವಿದೆ ಹಾಗೂ ಲೇಖಕಿ ವಿದೂಷಿ ವಾಣಿಸತೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಅಬ್ದುಲ್ ರಶೀದ್, 12.30 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.20 ಭಾವಗೀತೆಗಳು–ಶರಧಿ ಪಾಟೀಲ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್.ರಾಕೇಶ್–ಕೊಳಲು ವಾದನ, 4.00 ಕಥಾ ಕಾಲಕ್ಷೇಪ–ಚವತಿ ಚಂದಿರ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.55 ಕೃಷಿರಂಗ–ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ–ಹಿಪ್ಪುನೇರಳೆ ಗಿಡದ ಸಮಗ್ರ ಪೀಡೆ ನಿರ್ವಹಣೆ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಸ್. ಬಾಲಸರಸ್ವತಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 9.30 ಲೋಕ್ ಪ್ರಸಾರಕ್ ಕೇ ಸಾಥ್ ಲೋಕ್ ನಿರ್ಣಯ್–2024, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ–ಹೆಚ್.ಆರ್.ಕೇಶವಮೂರ್ತಿ, ವ್ಯಾಖ್ಯಾನ–ಮಾರ್ಕಂಡೇಯ ಅವಧಾನಿ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ಮಳೆ ಕೊರತೆ ನಡುವೆ ಹೂ, ಹಣ್ಣು, ತರಕಾರಿ, ಧಾನ್ಯಗಳ ದರದಲ್ಲಿ ಏರಿಕೆ





■ ಮೋಹನ್ ಕಾಯಕ

ಮೈಸೂರು, ಮೇ 13–ಬಿಸಿಲಿನ ತೀವ್ರತೆ, ಮಳೆ ಇಲ್ಲದೆ ಇಳುವರಿ ಕುಂಠಿತವಾಗಿರುವ ಹಿನ್ನೆಲೆಯಲ್ಲಿ ಹೂ, ಹಣ್ಣು, ತರಕಾರಿ ಹಾಗೂ ಧಾನ್ಯಗಳ ಬೆಲೆ ದುಪ್ಪಟ್ಟಾಗಿದ್ದು, ಮುಂಗಾರು ಆರಂಭದಲ್ಲೇ ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ ತಟ್ಟಿದೆ...!

ತರಕಾರಿಗಳಲ್ಲಿ ಬೀನ್ಸ್, ಹಸಿಮೆಣಸಿನಕಾಯಿ, ಶುಂಠಿ, ಬೆಳ್ಳುಳ್ಳಿ ಡಬಲ್ ಸೆಂಚುರಿ ಸನಿಹದಲ್ಲಿದ್ದು, ಈರುಳ್ಳಿ ಮತ್ತು ಟೊಮ್ಯಾಟೋ ಬಿಟ್ಟು ಉಳಿದಂತಹ ಎಲ್ಲಾ ಬಗೆಯ ತರಕಾರಿಗಳ ಬೆಲೆಯಲ್ಲೂ ಸರಿ–ಸುಮಾರು 20–40 ರೂ.ವರೆಗೆ ಬೆಲೆ ಏರಿಕೆಯಾಗಿದೆ. ಮಳೆ–ಬೆಳೆ ಇಲ್ಲದೆ ಫಸಲು ಕಳೆದುಕೊಂಡ ರೈತರದ್ದು ಬಡ ಪರಿಸ್ಥಿತಿಯಾದರೆ, ನಗರವಾಸಿಗಳ ಜೇಬಿಗೆ ಭಾರಿ ಕತ್ತರಿ ಬಿದ್ದಿದೆ.

ಮೈಸೂರಿನ ದೇವರಾಜ ಮಾರುಕಟ್ಟೆ, ಅಗ್ರಹಾರದ ಚಿಕ್ಕ ಮಾರುಕಟ್ಟೆ, ಬಂಡಿಪಾಳ್ಯ ಸೇರಿದಂತೆ ನಗರದ ವಿವಿಧೆಡೆ ಟೊಮ್ಯಾಟೊ ಕೆ.ಜಿಗೆ 20–30 ರೂ. ಇದ್ದರೆ, ಬೀನ್ಸ್ 150–200 ರೂ., ಹಸಿಮೆಣಸಿನಕಾಯಿ 140–150 ರೂ., ಕ್ಯಾರೆಟ್ 40–50 ರೂ., ಬೀಟ್ರೂಟ್ 30–40 ರೂ., ಶುಂಠಿ 140–150 ರೂ., ಬೆಳ್ಳುಳ್ಳಿ 140–160 ರೂ., ನುಗ್ಗೆಕಾಯಿ 60–70 ರೂ., ಎಲೆಕೋಸು 40, ಹೂಕೋಸು 70–80 ರೂ., ಆಲೂಗಡ್ಡೆ 40–50 ರೂ., ಬೂದುಗುಂಬಳ 40–50 ರೂ. ಇದೆ. ಹಾಗೆಯೇ ಸಿಹಿಕುಂಬಳ 30 ರೂ., ಸೋರೆಕಾಯಿ 60–70 ರೂ., ಮಂಗಳೂರು ಸೌತೆಕಾಯಿ 30–40 ರೂ., ಪಡುವಲ ಕಾಯಿ 40 ರೂ., ಗೆಣಸು 40 ರೂ., ಬದನೆಕಾಯಿ 50–60 ರೂ., ಹಾಗಲ ಕಾಯಿ 60–70 ರೂ., ತೊಂಡೆಕಾಯಿ ಹೀರೇಕಾಯಿ 50–60 ರೂ., ದಪ್ಪ ಮೆಣಸಿನಕಾಯಿ 60 ರೂ. ಗೆಡ್ಡೆಕೋಸು 40 ರೂ. ಇದ್ದರೆ ಅಡುಗೆಗೆ ಅತ್ಯಾವಶ್ಯಕವಾದ ಈರುಳ್ಳಿ ಮಾತ್ರ 100 ರೂ.ಗೆ ಗಾತ್ರಕ್ಕೆ ತಕ್ಕಂತೆ 3 ರಿಂದ 5 ಕೆಜಿವರೆಗೆ ಮಾರಾಟ ಮಾಡಲಾಗುತ್ತಿದೆ. ಅದೇ ರೀತಿ ಸೊಪ್ಪುಗಳ ಬೆಲೆ ಏರಿಕೆಯೂ ಆಗಿದ್ದು, ಕೊತ್ತಂಬರಿ ಸೊಪ್ಪು ಕಟ್ಟಿಗೆ (ಮಿಡಿಯಂ ಗಾತ್ರ) 10–20 ರೂ., ಕರಿಬೇವು ಕೆಜಿಗೆ 60 ರೂ., ಪುದೀನ ಕಟ್ಟಿಗೆ 10–20 ಹಾಗೂ ಮೆಂತೇ ಸೊಪ್ಪು ಕಟ್ಟಿಗೆ 10–20 ರೂ.ನಂತೆ ಮಾರಾಟ ಮಾಡಲಾಗುತ್ತಿದೆ ಎಂದು ದೇವರಾಜ ಮಾರುಕಟ್ಟೆ ಮಳಿಗೆದಾರರ ಸಂಘದ ಸದಸ್ಯ ಇಬ್ರಾಹಿಂ ಇಬು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಚಿನ್ನದ ಹಣ್ಣುಗಳು!: ಹಣ್ಣುಗಳಲ್ಲಿ ಸೇಬು ದ್ವಿಶತಕ ಬಾರಿಸಿದ್ದು, ಆಮದಾಗಿರುವ ಹಣ್ಣುಗಳ ಬೆಲೆಯೂ ವಿಪರೀತವಾಗಿ ಹೆಚ್ಚಾಗಿದೆ. ಸೇಬು ಕೆಜಿಗೆ 200–250 ರೂ., ಗ್ರೀನ್ ಆಪಲ್ 200 ರೂ., ದಾಳಿಂಬೆ 160–200 ರೂ., ದ್ರಾಕ್ಷಿ 80–100 ರೂ., ಕಿತ್ತಳೆ 180–200 ರೂ (ಆಮದು ಮಾಡಿಕೊಂಡಿರುವುದು)., ಸೀಬೆಹಣ್ಣು 150–160 ರೂ., ತೋತಾಪುರಿ 120–130 ರೂ., ಮಾವು 80–140 ರೂ., ಮೊಸಂಬಿ 80 ರೂ., ಮರಸೇಬು 380–400 ರೂ., ಡ್ರ್ಯಾಗನ್ ಫ್ರೂಟ್ಸ್ 240–250 ರೂ. ಕಿವೀ ಒಂದು ಬಾಕ್ಸ್ (ಮೂರು)ಗೆ 100 ರೂ., ಪೈನಾಪಲ್ 60–80 ರೂ., ಚಕೊತ 110–120 ರೂ., ಕರ್ಬೂಜ 60 ರೂ., ಕಲ್ಲಂಗಡಿ 30 ರೂ. ಆಗಿದ್ದರೆ, ಏಲಕ್ಕಿ ಬಾಳೆಹಣ್ಣು ಕೆಜಿಗೆ 60–80 ರೂನಂತೆ ವ್ಯಾಪಾರವಾಗುತ್ತಿದೆ.

ಗಗನಕುಸುಮವಾದ ಪರಿಮಳ ಭರಿತ ಹೂವುಗಳು: ಹಣ್ಣು–ತರಕಾರಿಗೆ ತಾನೇನು ಕಮ್ಮಿ ಇಲ್ಲವೆಂಬಂತೆ ಹೂವುಗಳ ಬೆಲೆಯೂ ಗಗನಕುಸುಮವಾಗಿದೆ. ಪೂಜಾ ಕೈಂಕರ್ಯಗಳಿಗೆ ಅತೀ ಅವಶ್ಯವಾಗಿ ಬಳಸುವ ಸೇವಂತಿ ಹೂ ಒಂದು ಮಾರಿಗೆ 80–100 ರೂ. ಇದ್ದರೆ, ಕನಕಾಂಬರ ಕೆಜಿಗೆ 800–1000 ರೂ., ಮೈಸೂರು ಮಲ್ಲಿಗೆ 400–450 ರೂ., ಕಾಕಡ 800–1000 ರೂ., ಮರ್ಲೆ 400–450 ರೂ. ಬಿಡಿ ಹೂ 100–120 ರೂ., ಚೆಂಡು ಹೂ 120–140 ರೂ.ನಂತೆ ಮಾರಾಟ ಮಾಡಲಾಗುತ್ತಿದೆ ಎಂದು ದೇವರಾಜ ಮಾರುಕಟ್ಟೆ ಹೂ ವ್ಯಾಪಾರಿ ಚೇತನ್ ಮಾಹಿತಿ ನೀಡಿದರು.





ದುಬಾರಿ ದವಸ–ಧಾನ್ಯಗಳು...!

ಹೂ, ಹಣ್ಣು, ತರಕಾರಿ ಬೆಲೆಗಳಲ್ಲಿ ಆಗಾಗ ಏರಿಕೆ–ಇಳಿಕೆ ಸಾಮಾನ್ಯ. ಆದರೆ ನಿತ್ಯ ಆಹಾರವಾಗಿ ಬಳಸುವ ಧಾನ್ಯಗಳ ಬೆಲೆಯಂತೂ ಕೇಳಿದರೆ ತಲೆ ತಿರುಗುವುದು ಗ್ಯಾರಂಟಿ. ಇದರ ನಡುವೆ ಅಡುಗೆ ಎಣ್ಣೆ ಮತ್ತು ತುಪ್ಪಗಳ ಬೆಲೆಯಲ್ಲಿ ಇಳಿಕೆಯಾಗಿರುವುದು ಗ್ರಾಹಕರಿಗೆ ಕೊಂಚ ಸಮಾಧಾನ ತಂದಿದೆ.

ತೊಗರಿಬೇಳೆ ಕೆಜಿಗೆ 180–200 ರೂ., ಉದ್ದಿನಬೇಳೆ 145–150 ರೂ., ಹೆಸರುಬೇಳೆ 120–130 ರೂ., ಕಡಳೆಬೇಳೆ 96–100 ರೂ., ಹೆಸರುಕಾಳು 144–150 ರೂ., ಕಡಲೆಕಾಯಿ ಬೀಜ 145–150 ರೂ., ಹುರುಳಿ 80–100 ರೂ., ಹಲಸಂದೆ 110–120 ರೂ., ಸಕ್ಕರೆ 44–50 ರೂ., ಬಟಾಣಿ 100–110 ರೂ., ಹುಣಸೆಹಣ್ಣು 150–160 ರೂ., ಬ್ಯಾಡಗಿ ಮೆಣಸಿನಕಾಯಿ 360 ರೂ., ಗುಂಟೂರು ಮೆಣಸಿನಕಾಯಿ 190–200 ರೂ., ಕಾರದ ಮೆಣಸಿನಕಾಯಿ 240–250 ರೂ., ಕೊತ್ತಂಬರಿ ಬೀಜ 125–130 ರೂ. ಇದ್ದರೆ ರಾಜಮುಡಿ ಅಕ್ಕಿ ಕೆಜಿಗೆ 82–90 ರೂವರೆಗೆ ಮಾರಾಟವಾಗುತ್ತಿದೆ.

ಹಾಗೆಯೇ ಅಡುಗೆ ಎಣ್ಣೆಯಲ್ಲಿ ಸನ್‌ಪ್ಯೂರ್ ಮತ್ತು ಗೋಲ್ಡ್‌ವಿನ್ನರ್ ಲೀಟರ್‌ಗೆ 108 ರೂ., ಇಮಾಮಿ ಮತ್ತು ಫಾರ್ಚೂನ್ 110 ರೂ. ಇದ್ದು, ದೀಪದ ಎಣ್ಣೆ ಹಾಗೂ ವನಸ್ಪತಿ ತುಪ್ಪದ ಬ್ರಾಂಡ್‌ಗಳ ಬೆಲೆಯಲ್ಲೂ ಇಳಿಕೆಯಾಗಿದೆ. ಕೊರೊನಾ ಸಂದರ್ಭದಲ್ಲಿ 200 ರೂಗಳ ಗಡಿ ದಾಟಿದ್ದ ಅಡುಗೆ ಎಣ್ಣೆ 90 ರೂ.ಗಳವರೆಗೆ ಇಳಿಕೆಯಾಗಿರುವುದು ಗ್ರಾಹಕರಿಗೆ ಸ್ವಲ್ಪ ಸಮಾಧಾನ ತಂದಿದೆ.

ಲೋಕಸಭೆ ಚುನಾವಣೆ ಮಾದರಿಯಲ್ಲೇ ಪರಿಷತ್ ಚುನಾವಣೆ ಎದುರಿಸಲು ಕಾಂಗ್ರೆಸ್ ಸಿದ್ಧತೆ



ಬೆಂಗಳೂರು: ಜೂನ್ 3 ರಂದು ನಡೆಯಲಿರುವ ಪರಿಷತ್ತಿನ ಆರು ಸ್ಥಾನಗಳ (ತಲಾ ಮೂರು ಪದವೀಧರ ಮತ್ತು ಶಿಕ್ಷಕರ ಕ್ಷೇತ್ರ) ಚುನಾವಣೆಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿರುವ ಕಾಂಗ್ರೆಸ್, ಲೋಕಸಭೆ ಚುನಾವಣೆಗೆ ಹೂಡಿದ್ದ ತಂತ್ರಗಳನ್ನೇ ಅನುಸರಿಸಲು ಮುಂದಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಪಕ್ಷದ ನಾಯಕತ್ವವು ತಮ್ಮ ಸಂಪುಟ ಸಹೋದ್ಯೋಗಿಗಳು ಮತ್ತು ಅಭ್ಯರ್ಥಿಗಳೊಂದಿಗೆ ಸಭೆ ನಡೆಸಿದ್ದು, ಬಿಜೆಪಿ–ಜೆಡಿಎಸ್ ಮೈತ್ರಿಕೂಟವನ್ನು ಎದುರಿಸಲು ಕಾರ್ಯತಂತ್ರ ರೂಪಿಸಲು ನಿರ್ಧರಿಸಿದೆ.

ನಾವು ನಮ್ಮ ಅಭ್ಯರ್ಥಿಗಳು, ಪಕ್ಷದ ಮುಖಂಡರು ಮತ್ತು ಪದಾಧಿಕಾರಿಗಳೊಂದಿಗೆ ಚರ್ಚಿಸಿದ್ದೇವೆ. ಈ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೋರಾಡಲು ಸ್ಥಳೀಯ ಕಾಂಗ್ರೆಸ್ ಮುಖಂಡರು ಸೇರಿದಂತೆ ಇತರೆ ನಾಯಕರಿಗೆ ಸೂಚನೆ ನೀಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ. ಲೋಕಸಭೆ ಚುನಾವಣೆಗೆ ಹೂಡಿದ್ದ ತಂತ್ರವನ್ನೇ ಈ ಚುನಾವಣೆಯಲ್ಲು ಅನುಸರಿಸುತ್ತೇವೆಂದು ಇದೇ ವೇಳೆ ತಿಳಿಸಿದ್ದಾರೆ.

ಬಿಜೆಪಿ–ಜೆಡಿಎಸ್ ಮೈತ್ರಿ ಮುಂದುವರೆಯುತ್ತಿರುವ ಕುರಿತು ಮಾತನಾಡಿ, ಶಾಶ್ವತ ಮೈತ್ರಿ ಮಾಡಿಕೊಳ್ಳಲಿ ಅಥವಾ ವಿಲೀನವಾಗಲಿ. ನಮಗೆ ಯಾವುದೇ ಅಭ್ಯಂತರವಿಲ್ಲ. ಇದು ಅವರ ಆಂತರಿಕ ವಿಷಯ ಎಂದರು. ಈಗಾಗಲೇ ಚುನಾವಣೆ ಕುರಿತು ಸಭೆ ನಡೆಸಿರುವ ನಾಯಕರು, ಪ್ರಚಾರದ ಸಮಯದಲ್ಲಿ ತೆಗೆದುಕೊಳ್ಳಬೇಕಾದ ವಿವಿಧ ವಿಷಯಗಳ ಕುರಿತೂ ಚರ್ಚೆ ನಡೆಸಿದ್ದು, ಹಿರಿಯ ನಾಯಕ ಹಾಗೂ ಎಂಎಲ್ಸಿ ಪುಟ್ಟಣ್ಣ ಅವರು ಚುನಾವಣೆಯಲ್ಲಿ ಗೆಲ್ಲಲು ಕೆಲವು ಸಲಹೆಗಳನ್ನು ನೀಡಿದ್ದಾರೆಂದು ಮೂಲಗಳು ತಿಳಿಸಿವೆ.

ಸಚಿವರಾದ ಕೆ.ಎನ್.ರಾಜಣ್ಣ, ಮಧು ಬಂಗಾರಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ತನ್ವೀರ್ ಸೇಠ್, ಜಿ.ಸಿ.ಚಂದ್ರಶೇಖರ್, ಪಕ್ಷದ ಮುಖಂಡ ಬೇಲೂರು ಗೋಪಾಲಕೃಷ್ಣ ಕೂಡ ಸಭೆಯಲ್ಲಿ ಭಾಗವಹಿಸಿದ್ದರು ಎಂದು ತಿಳಿದುಬಂದಿದೆ.

ಮರಿತಿಬ್ಬೇಗೌಡ (ದಕ್ಷಿಣ ಶಿಕ್ಷಕರ ಸ್ಥಾನ), ಡಿ.ಟಿ.ಶ್ರೀನಿವಾಸ್ (ಆಗ್ನೇಯ ಶಿಕ್ಷಕರ ಸ್ಥಾನ), ಡಾ.ಚಂದ್ರಶೇಖರ ಪಾಟೀಲ್ (ಈಶಾನ್ಯ ಪದವೀಧರರು), ಆಯನೂರು ಮಂಜುನಾಥ್ (ನೈಋತ್ಯ ಪದವೀಧರರು), ರಾಮೋಜಿಗೌಡ (ಬೆಂಗಳೂರು ಪದವೀಧರರು), ಮತ್ತು ಕೆ.ಕೆ.ಮಂಜುನಾಥ್ (ನೈಋತ್ಯ ಶಿಕ್ಷಕರ ಸ್ಥಾನ) ಅವರನ್ನು ಕಾಂಗ್ರೆಸ್ ನಾಮ ನಿರ್ದೇಶನ ಮಾಡಿದೆ.

CBSE 10, 12ನೇ ತರಗತಿ ಫಲಿತಾಂಶ ಪ್ರಕಟ

ಬೆಂಗಳೂರು: CBSE 12ನೇ ಹಾಗೂ 10ನೇ ತರಗತಿ ಫಲಿತಾಂಶವು ಹೊರ ಬಿದ್ದಿದೆ. CBSE ಫಲಿತಾಂಶಗಳನ್ನು ಅಧಿಕೃತ ವೆಬ್‌ಸೈಟ್‌ಗಳಾದ cbseresults.nic.in, results.cbse.nic.in ಮತ್ತು cbse.gov.inನಲ್ಲಿ ಪರಿಶೀಲಿಸಬಹುದು.

ಈ ಬಾರಿಯೂ ಮತ್ತೆ ಹುಡುಗಿಯರೇ ಮೇಲುಗೈ ಸಾಧಿಸಿದ್ದಾರೆ. 2024ರ 12ನೇ ಬೋರ್ಡ್ ಫಲಿತಾಂಶದಲ್ಲಿ ಶೇ.91.52 ರಷ್ಟು ಬಾಲಕಿಯರು ತೇರ್ಗಡೆಯಾಗಿದ್ದಾರೆ. ಬಾಲಕರ ಉತ್ತೀರ್ಣ ಪ್ರಮಾಣ ಶೇಕಡಾ 85.12 ರಷ್ಟಿದೆ. ಕಳೆದ ವರ್ಷ 2023ರಲ್ಲಿ ಬಾಲಕಿಯರ ಉತ್ತೀರ್ಣ ಪ್ರಮಾಣ ಶೇ.90.68 ಮತ್ತು ಬಾಲಕರ ಉತ್ತೀರ್ಣ ಪ್ರಮಾಣ ಶೇ.84.67 ರಷ್ಟಿತ್ತು. ಈ ವರ್ಷ ಎಲ್ಲಾ ವಿಷಯಗಳಲ್ಲಿ ಒಟ್ಟು ಶೇಕಡಾ 87.98ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.


2023ರ 10ನೇ ತರಗತಿ ಪರೀಕ್ಷೆಯಲ್ಲಿ ಒಟ್ಟು 93.12 ಶೇಕಡಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಬಾಲಕಿಯರ ಫಲಿತಾಂಶವು ಹುಡುಗರಿಗಿಂತ ಉತ್ತಮವಾಗಿತ್ತು. ಬಾಲಕಿಯರು ಶೇ.94.25 ಹಾಗೂ ಬಾಲಕರು ಶೇ.92.72 ಉತ್ತೀರ್ಣರಾಗಿದ್ದಾರೆ. ಅನಾರೋಗ್ಯಕರ ಸ್ಪರ್ಧೆಯನ್ನು ತಪ್ಪಿಸಲು, CBSE ಈ ವರ್ಷ 10 ಮತ್ತು 12 ನೇ ತರಗತಿಗಳ ಮೆರಿಟ್ ಪಟ್ಟಿ ಮತ್ತು ಟಾಪರ್ಸ್ ಪಟ್ಟಿಯನ್ನು ಬಿಡುಗಡೆ ಮಾಡಲಿಲ್ಲ. ವಿದ್ಯಾರ್ಥಿಗಳ ಪ್ರಥಮ, ದ್ವಿತೀಯ ಮತ್ತು ತೃತೀಯ ವಿಭಾಗದ ಮಾಹಿತಿಯನ್ನೂ ನೀಡಿಲ್ಲ. ಸಿಬಿಎಸ್‌ಇ 10ನೇ ಮತ್ತು 12ನೇ ಫಲಿತಾಂಶಗಳಲ್ಲಿ ತಿರುವನಂತಪುರ ಪ್ರದೇಶವು ಅಗ್ರಸ್ಥಾನದಲ್ಲಿದೆ.



ನಿಲ್ಲದ ಒತ್ತುವರಿ ಚಾಳಿ... ಅಧಿಕಾರಿಗಳದ್ದು ಸ್ಟಾರ್ಟ್ ಕ್ಯಾಮರಾ ಆಕ್ಸನ್ ಅಷ್ಟೇ...!

ದೇವರಾಜ ಮಾರುಕಟ್ಟೆಯಲ್ಲಿ ಗ್ರಾಹಕರು ತಿರುಗಾಡಲು ಇರುವ ಜಾಗದ ಒತ್ತುವರಿ ಮುಂದುವರೆದಿದ್ದು, ಕೆಲ ದಿನಗಳ ಹಿಂದಷ್ಟೇ ತೆರವು ಮಾಡಿಸಿದ್ದರೂ ಮಳಿಗೆದಾರರು ಅದೇ ಹಳೇ ಚಾಳಿ ಮುಂದುವರೆಸಿದ್ದಾರೆ. ನಗರಪಾಲಿಕೆ ಆಯುಕ್ತರ ಸಮ್ಮುಖದಲ್ಲಿ ಪಾಲಿಕೆ ಅಧಿಕಾರಿ, ಸಿಬ್ಬಂದಿ ತಿಂಗಳ ಹಿಂದೆಯಷ್ಟೇ ದೇವರಾಜ ಮಾರುಕಟ್ಟೆಯಲ್ಲಿ ಮಳಿಗೆದಾರರು ಒತ್ತುವರಿ ಮಾಡಿಕೊಂಡಿದ್ದ ಪಾದಚಾರಿಗಳ ಮಾರ್ಗವನ್ನು ತೆರವುಗೊಳಿಸಿದ್ದರು. ಅಲ್ಲದೆ ಗ್ರಾಹಕರು ತಿರುಗಾಡಲು ತೊಂದರೆಯಾಗದಂತೆ ಟಾರ್ಪಲ್‌ಗಳನ್ನು ಕಟ್ಟದಂತೆಯೂ ಸೂಚಿಸಲಾಗಿತ್ತು. ಆದರೆ ಮತ್ತೆ ಎಂದಿನಂತೆ ಮಳಿಗೆದಾರರು ತಿರುಗಾಡುವ ದಾರಿಯನ್ನು ಮಾತ್ರವಲ್ಲ ಮಾರುಕಟ್ಟೆಯೊಳಗಿನ ಪ್ರವೇಶದ್ವಾರವನ್ನು ಒತ್ತುವರಿ ಮಾಡಿಕೊಂಡು ಸಿಕ್ಕ ಸಿಕ್ಕಲ್ಲಿ ವ್ಯಾಪಾರ ನಡೆಸುತ್ತಿದ್ದಾರೆ. ಪಾಲಿಕೆ ಅಧಿಕಾರಿಗಳ ಕಾರ್ಯವೈಖರಿಯಲ್ಲಿ ಬಿಗಿ ಇಲ್ಲದಿರುವುದಕ್ಕೆ ದೇವರಾಜ ಮಾರುಕಟ್ಟೆಯೊಳಗಿನ ಒತ್ತುವರಿ ವ್ಯಾಪಾರ ಪ್ರತ್ಯಕ್ಷ ಉದಾಹರಣೆಯಾಗಿದೆ. ಪಾಲಿಕೆ ಅಧಿಕಾರಿಗಳು ಆಗೊಮ್ಮೆ–ಈಗೊಮ್ಮೆ ಬಂದು ಬೇಕಾಬಿಟ್ಟಿಯಾಗಿ ತೆರವುಗೊಳಿಸಿ ಫೋಟೋಗಳಿಗೆ ಪೋಸ್ ಕೊಡುತ್ತಾರೆಯೇ ಹೊರತು ಒತ್ತುವರಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ವರ್ಷಕ್ಕೊಮ್ಮೆ ಮಾರುಕಟ್ಟೆಯೊಳಗೆ ಅಡ್ಡಾಡಿ ಹೋಗುತ್ತಾರೆಯೇ ಹೊರತು ಮಾರುಕಟ್ಟೆಯಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡಿಲ್ಲ ಎಂದು ದೇವರಾಜ ಮಾರುಕಟ್ಟೆ ಮಳಿಗೆದಾರರ ಸಂಘ ಸದಸ್ಯರೊಬ್ಬರು ಅತೀವ ಬೇಸರ ವ್ಯಕ್ತಪಡಿಸಿದರು.

ದೇವರಾಜೇಗೌಡಗೆ 3 ದಿನ ಪೊಲೀಸ್ ಕಸ್ಟಡಿ



ಹಾಸನ: ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣ ಹಿನ್ನೆಲೆ ಬಿಜೆಪಿ ಮುಖಂಡ ಹಾಗೂ ವಕೀಲ ದೇವರಾಜೇಗೌಡ ಅವರನ್ನು ಸೋಮವಾರ ಹೊಳೆನರಸೀಪುರ ಜೆಎಂಎಫ್‌ಸಿ ಕೋರ್ಟ್ ಮೂರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ.

ಬಂಧನಕ್ಕೊಳಗಾಗಿರುವ ವಕೀಲ ದೇವರಾಜೇಗೌಡಗೆ ಮೇ 11ಕ್ಕೆ 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿತ್ತು. ಆದರೆ ಪೊಲೀಸರು ಹೆಚ್ಚಿನ ತನಿಖೆಗಾಗಿ ಅವರನ್ನು ಪೊಲೀಸ್ ಕಸ್ಟಡಿಗೆ ಕೊಡಿ ಎಂದು ಕೋರ್ಟ್ ಮೊರೆ ಹೋದ ಹಿನ್ನೆಲೆ ಇಂದು ಕೋರ್ಟ್ ದೇವರಾಜೇಗೌಡ ಅವರನ್ನು ಮೂರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ.

ಶಂಕರಾಚಾರ್ಯರಿಂದ ಹಿಂದೂ ಸಂಸ್ಕೃತಿ ಪುನರುತ್ಥಾನ

–ಶಾಸಕ ಶ್ರೀವತ್ಸ ಸ್ಮರಣೆ



ಶ್ರೀ ಶಂಕರಾಚಾರ್ಯ ಜಯಂತಿ ಪ್ರಯುಕ್ತ ಪೂಜ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನಂತರ ವಿದ್ಯಾರಣ್ಯಪುರಂನ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು

ಮೈಸೂರು, ಮೇ 13(ಎಸ್‌ಪಿಎನ್)– ಅವಸಾನದ ಅಂಚಿನಲ್ಲಿದ್ದ ಹಿಂದೂ ಸಂಸ್ಕೃತಿಯನ್ನು ದೇಶದ ಉದ್ದಗಲಕ್ಕೂ ಸಂಚರಿಸಿ ಪುನರುತ್ಥಾನಗೊಳಿಸಿದ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು. ಮೈಸೂರು ವಿದ್ಯಾರಣ್ಯಪುರಂನಲ್ಲಿರುವ ವಿಪ್ರ ಜಾಗೃತಿ ವೇದಿಕೆ ವತಿಯಿಂದ ಶ್ರೀ ಶಂಕರಾಚಾರ್ಯ ಜಯಂತಿ ಪ್ರಯುಕ್ತ ಪೂಜ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನಂತರ ವಿದ್ಯಾರಣ್ಯಪುರಂನ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಶ್ರೀವತ್ಸ, ಶಂಕರಾಚಾರ್ಯರು ತಮ್ಮ ಎಂಟನೇ ವಯಸ್ಸಿನಲ್ಲಿ ಸನ್ಯಾಸತ್ವ ಸ್ವೀಕರಿಸಿ, ದೇಶ ಪರ್ಯಟನೆ ಮಾಡಿ, ಹಿಂದೂ ಪರಂಪರೆ ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅಲ್ಲದೆ ವೇದ, ಉಪನಿಷತ್‌ಗಳಿಗೆ ಹೊಸ ಆಯಾಮ ನೀಡುವಲ್ಲಿ ಶಂಕರಾಚಾರ್ಯರು ಶ್ರಮಿಸಿದ್ದು, ತಮ್ಮ ಜೀವನವನ್ನೇ ಧರ್ಮ ರಕ್ಷಣೆಗಾಗಿ ಮೀಸಲಿಟ್ಟ ಅವತಾರ ಪುರುಷ ಎಂದರು.

ನಂತರ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮಾತನಾಡಿ, ಶಂಕರಾಚಾರ್ಯರ ಬದುಕನ್ನು ಸಮಚಿತ್ತದಿಂದ ಅವಲೋಕಿಸಿದಾಗ ಭಾರತೀಯ ಆಧ್ಯಾತ್ಮಿಕ ಪರಂಪರೆಗೆ ಅಪಾರ ಕೊಡುಗೆ ಸಲ್ಲಿಸಿದ್ದಾರೆ ಎಂದರು. ಇದಕ್ಕೂ ಮುನ್ನ ಶ್ರೀ ಶಂಕರಾಚಾರ್ಯರ ಭಾವಚಿತ್ರವನ್ನು ರಥದಲ್ಲಿರಿಸಿ ವಿದ್ಯಾರಣ್ಯಪುರಂ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಬಾಲಶಂಕರ ವೇಷ ಧರಿಸಿ ಮೆರವಣಿಗೆಯಲ್ಲಿ ಮಕ್ಕಳು ಸಾಗಿದ್ದು ವಿಶೇಷವಾಗಿತ್ತು. ಈ ವೇಳೆ ಜಯ ಜಯಶಂಕರ, ಹರಹರ ಶಂಕರ ಮಂತ್ರಘೋಷ ಮೊಳಗಿತು. ಮೆರವಣಿಗೆಯಲ್ಲಿ ನಾದಸ್ವರ ಹಾಗೂ ಶಂಕರಾಚಾರ್ಯರ ಕೀರ್ತನೆಗಳು, ಭಜನೆ, ದೇವರನಾಮವನ್ನು ಮಹಿಳೆಯರು ಭಜಿಸಿದರು. ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗಿಸಲಾಯಿತು.

ಮೆರವಣಿಗೆಯಲ್ಲಿ ಹಿರಿಯ ವಿಪ್ರ ಮುಖಂಡರಾದ ಕೆ.ರಘುರಾಂ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ವಿಪ್ರ ಸಂಗಮ ಅಧ್ಯಕ್ಷೆ ಡಾ.ಲಕ್ಷ್ಮಿ, ಜಿಲ್ಲಾಧ್ಯಕ್ಷ ಗೋಪಾಲರಾವ್, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ವಿಪ್ರ ಜಾಗೃತಿ ವೇದಿಕೆಯ ಉಪಾಧ್ಯಕ್ಷ ಆರ್.ನಾಗರಾಜ್, ಕಾರ್ಯದರ್ಶಿ ಮುಳ್ಳೂರು ಸುರೇಶ್, ಸಹ ಕಾರ್ಯದರ್ಶಿ ಎಚ್.ಸಿ ಮುರುಗೇಶ್, ಖಜಾಂಚಿ ಎಂ.ವಿ ಮಂಜುನಾಥ್, ಸುಚಿಂದ್ರ ತೀರ್ಥ, ಶ್ರೀಕಾಂತ್ ಕಶ್ಯಪ್ ಹಾಗೂ ಇನ್ನಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಒಬ್ಬ : "ನಿಮ್ಮ ದೇಶದಲ್ಲಿ ಸಾವಿನ ಪ್ರಮಾಣ ಹೇಗೆ?"
ಇನ್ನೊಬ್ಬ : "ನೂರಕ್ಕೆ ನೂರು"
ಒಬ್ಬ : "ಹೇಗೆ?"
ಇನ್ನೊಬ್ಬ : "ಇಲ್ಲಿ ಯಾರು ಹುಟ್ಟಿದ್ದಾರೋ ಅವರೆಲ್ಲಾ ಕಡೆಯಲ್ಲಿ ಸಾಯ್ತಾರೆ"

ಮೈಸೂರು ಮಿತ್ರ

ಮಂಗಳವಾರ, 14 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಮ್ಮ ಅಂತರಂಗದ ಪುಸ್ತಕ ತೆರೆಯುವವರೆಗೆ
ಉಳಿದೆಲ್ಲ ಪುಸ್ತಕಗಳೂ ಉಪಯೋಗಕ್ಕೆ ಬಾರವು. –ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಲೆಯೇ ಸೌಂದರ್ಯ

ನಿಮ್ಮ ಪತ್ರಗಳು

ಅಮ್ಮಂದಿರ ದಿನ ಮಾತ್ರ ಅಮ್ಮನಿಗೆ ಆದ್ಯತೆಯೇ?

ಮಾನ್ಯರೆ,

ಇತ್ತೀಚೆಗಂತು ವಿದೇಶಿಗರ ಪ್ರಭಾವ ಎಲ್ಲದರಲ್ಲೂ ಎಲ್ಲೆಡೆಯಲ್ಲಿಯೂ ಬೀರುತ್ತಿದೆ. ಅಂತಹವುಗಳಲ್ಲಿ ಫಾದರ್ಸ್ ಡೇ, ಮದರ್ಸ್ ಡೇ, ವ್ಯಾಲಂಟೈನ್ಸ್ ಡೇ ಇತ್ಯಾದಿ. ಇವುಗಳು ನಮ್ಮ ದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಚರಣೆಯಾಗುತ್ತಾ ಪ್ರಭಾವ ಬೇರು ಬಿಟ್ಟಿವೆ. ಮನೆಯಲ್ಲಿ ಒಂದು ದಿನವು ಅಪ್ಪ ಅಮ್ಮನನ್ನು ಪ್ರೀತಿ ವಿಶ್ವಾಸದಿಂದ ಮಾತನಾಡಿಸದಿದ್ದರೂ ಅವರ ಮೊಬೈಲ್ ವಾಟ್ಸಪ್‌ನಲ್ಲಿ ಸ್ಟೇಟಸ್ ಹಾಕಿ ಲೈಕ್ ಪಡೆದು ಮೆಚ್ಚುಗೆ ಗಿಟ್ಟಿಸಿಕೊಳ್ಳುತ್ತಾರೆ. ಇದು ನಿಜಕ್ಕೂ ತೋರ್ಪಡಿಕೆಯ ಪ್ರೀತಿ.

ನಮ್ಮ ದೇಶದಲ್ಲಿ ತಂದೆ–ತಾಯಿಯನ್ನು ದೇವರೆಂದು ಪೂಜಿಸುವ ವಾಡಿಕೆಯಿದೆ. ಇದಕ್ಕೆ ನಾಟಕದ ಬಣ್ಣ ಬಳಿದು ಅದರ ತೂಕವನ್ನು ಕಡಿಮೆ ಮಾಡುತ್ತಿದ್ದೇವೇನೋ ಎನ್ನಿಸುತ್ತಿದೆ. ನಾವು ವಿದೇಶಿ ಆಚರಣೆಗೆ ಮಾರುಹೋಗುತ್ತಿದ್ದೇವೆ. ಅಲ್ಲಿಯ ಆಚರಣೆಗಳನ್ನು ನಮ್ಮ ದೇಶದಲ್ಲಿ ಬಳಕೆಗೆ ತಂದು ಸಂಪ್ರದಾಯವನ್ನು ಮೂಲೆಗೆ ತಳ್ಳುತ್ತಿದ್ದೇವೆ. ಇದು ನಿಜಕ್ಕೂ ನಮಗೆ ಅವಮಾನ ಎನ್ನಿಸುವುದಲ್ಲವೇ?

ನಾವು ಮೊದಲು ನಮ್ಮ ಸಂಪ್ರದಾಯ ಹಾಗೂ ಆಚರಣೆಗಳನ್ನು ಗೌರವಿಸಬೇಕು. ವಿದೇಶೀ ಆಚರಣೆಗಳಿಗೆ ಮಾರುಹೋಗುವುದನ್ನು ನಿಲ್ಲಿಸುವುದರ ಜೊತೆಗೆ ಖಂಡಿಸಬೇಕು ಎನ್ನುವುದು ಈ ಕಿರಿಯನ ಅಭಿಪ್ರಾಯ. ತಂದೆ–ತಾಯಿಯರ ದಿನದ ಆಚರಣೆಯು ಕೇವಲ ಒಂದು ದಿನದ ಆಚರಣೆಯಲ್ಲ. ಇವರು ಒಂದೇ ನಾಣ್ಯದ ಎರಡು ಮುಖಗಳು ಮತ್ತು ಬೆಲೆಕಟ್ಟಲಾಗದ ಎರಡು ಮುತ್ತುಗಳು.

ಇವರನ್ನು ಪ್ರತಿದಿನವು ಪ್ರೀತಿಸಬೇಕು, ಪೂಜಿಸಬೇಕು ಹಾಗೂ ಗೌರವಿಸಬೇಕು. ಇವರು ಮೊಬೈಲ್‌ಗಳ ಸ್ಟೇಟಸ್‌ನಲ್ಲಿ ಹರಿದಾಡುವ ಚಿತ್ರಪಟವಾಗಬಾರದು. ನಮ್ಮ ಸಂಪ್ರದಾಯದಂತೆ ನಾವು ನಮ್ಮವರನ್ನು ಪ್ರೀತಿಸಿ ಗೌರವಿಸುವುದನ್ನು ಕಲಿಯೋಣ, ಅದನ್ನು ರೂಢಿಸಿಕೊಳ್ಳೋಣ ಹಾಗೂ ಇತರರಿಗೂ ಇದರ ಬಗ್ಗೆ ಅರಿವು ಮೂಡಿಸೋಣವೇ?!

– ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು

ವಿದ್ಯುತ್ ದೀಪಗಳಿಲ್ಲದೆ ಪರದಾಟ



ಸಂಜೆಯ ಸುಂದರ ನೋಟ. !

ಮಾನ್ಯರೆ,

ಇದೇನು ಯುದ್ಧ ಶುರುವಾಯಿತೇ, ಬ್ಲಾಕ್ ಔಟ್ ಆಗುತ್ತಿದೆಯೇ ಎಂದು ಚಿಂತಿಸಬೇಡಿ. ಇದು ಮೈಸೂರಿಗೆ ಮಳೆಬಿದ್ದ ಪರಿಣಾಮಗಳಲ್ಲೊಂದು. ಮೈಸೂರಿನ ಚಾಮರಾಜಪುರಂ ದೇವಪಾರ್ಥಿವ ರಸ್ತೆ, ವಿಷ್ಣುವರ್ಧನ ರಸ್ತೆ, ಮನುವನ ಇವೆಲ್ಲಾ ಸಂಜೆಯ ವೇಳೆ ಒಂದು ವಾರದಿಂದಲೂ ಕತ್ತಲೆಯ ಕೂಪಗಳಾಗುತ್ತಿವೆ. ಮಳೆ ಬಿದ್ದ ಸಂತೋಷ ಹಲವರಿಗಾದರೆ ಮಳೆಯ ಪರಿಣಾಮ ವಿದ್ಯುತ್ ದೀಪಗಳಿಲ್ಲದೇ ಪರದಾಡುವ ಪರಿಸ್ಥಿತಿ ಇಲ್ಲಿನ ನಿವಾಸಿಗಳಿಗೆ ಬಂದೊದಗಿದೆ. ಒಂದು ವಾರದಿಂದ ಸಂಜೆಯ ನಂತರ ಬೀದಿದೀಪಗಳು ಉರಿಯದೇ ಹೋದರೆ ಜನರಿಗಾಗುವ ತೊಂದರೆಯೆಷ್ಟು? ಪಾಲಿಕೆಯ ಆಯುಕ್ತರೇ ನೀವು ಗಮನ ಹರಿಸುತ್ತೀರಾ ?

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು

ಮರ ಬೆಳೆಸೋಣ, ನೀರು ಉಳಿಸೋಣ

ಮಾನ್ಯರೆ,

ಜಾಗತಿಕ ಹವಾಮಾನ ವೈಪರೀತ್ಯ ಕಾರಣದಿಂದಾಗಿ ಬಿಸಿಲು ಹೆಚ್ಚಾಗುತ್ತಿದೆ. ಮಳೆಯ ಕೊರತೆಯಿಂದಾಗಿ ಈ ವರ್ಷ ನೀರಿಗೆ ಜ್ವಲಂತ ಸಮಸ್ಯೆ ಉಂಟಾಗಿ ಎಲ್ಲರನ್ನೂ ಕಾಡತೊಡಗಿದೆ. ರೈತರಿಗೆಲ್ಲ ಸಂಕಷ್ಟ ಬಂದೊದಗಿದೆ. ರೈತರಿಗೆ ಕೃಷಿ ಮಾಡಲು ಸಮರ್ಪಕ ನೀರಿಲ್ಲದೆ ಸಂಕಷ್ಟದ ಜೀವನಕ್ಕೆ ತುತ್ತಾಗುತ್ತಿದ್ದಾರೆ. ಇಷ್ಟಲ್ಲದೆ ಬೆಂಗಳೂರು ಹಾಗೂ ಮೈಸೂರಿನಂತಹ ಮಹಾನಗರಗಳಲ್ಲಿ ಸ್ವಂತ ಮನೆ ಕಟ್ಟಿಸಿಕೊಳ್ಳಬೇಕೆಂಬುವವರ ಕನಸು ನೀರಿನ ಸಮಸ್ಯೆಯಿಂದಾಗಿ ಕಮರಿ ಹೋಗುತ್ತಿದೆ. ನೀರಿಲ್ಲದ ಕಾರಣ ದೊಡ್ಡ ದೊಡ್ಡ ಕಟ್ಟಡಗಳ ನಿರ್ಮಾಣದಲ್ಲಿ ತೊಡಗಿಕೊಂಡಿರುವ ಶ್ರಮಿಕರಿಗೆ ಕೆಲಸವಿಲ್ಲದಂತಾಗಿದೆ. ಕೆರೆ, ಕೊಳ, ಬಾವಿಗಳು ಮಾತ್ರವಲ್ಲದೆ ಹಲವಾರು ಕಡೆ ಎಷ್ಟೋ ಬೋರ್‌ವೆಲ್‌ಗಳು ಕೂಡ ಬತ್ತಿಹೋಗಿವೆ. ನೀರಿನ ಒಂದು ಸಮಸ್ಯೆಗೆ ಅನೇಕ ಕ್ಷೇತ್ರಗಳು ನಕಾರಾತ್ಮಕ ಪರಿಣಾಮಗಳನ್ನು ಎದುರಿಸುತ್ತಿವೆ. ಮನುಷ್ಯರು ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಈ ಸಮಯದಲ್ಲಿ ಪ್ರಾಣಿ–ಪಕ್ಷಿಗಳ ಬದುಕನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಸಾರ್ವಜನಿಕರು, ವಿದ್ಯಾರ್ಥಿಗಳು, ಯುವಕರು ಹಾಗೂ ಸರ್ಕಾರಗಳು ಮುಂದಿನ ದಿನಗಳಲ್ಲಿ ಮರಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಿ, ಅವುಗಳನ್ನು ರಕ್ಷಿಸಬೇಕಿದೆ. ನೈಸರ್ಗಿಕ ಸಂರಕ್ಷಣೆ ಮತ್ತು ನಿರ್ವಹಣೆ ಬಗ್ಗೆ ಅತೀ ಹೆಚ್ಚು ಅರಿವು ಕಾರ್ಯಕ್ರಮ ಹಾಗೂ ತರಬೇತಿಗಳು ಈಗಿನಿಂದಲೇ ನಡೆಯಬೇಕಿದೆ.

–ಅನ್ನಪೂರ್ಣ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು

ಮನುಕುಲದ ಕಂಟಕರು

ಮಾನ್ಯರೆ,

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಕುಂಬಾರ ಗಡಿ ಎಂಬ ಗ್ರಾಮದಲ್ಲಿ 16ರ ಹರೆಯದ ಯು.ಎಸ್.ಮೀನಾ ಎಂಬ ಬಾಲಕಿಯನ್ನು ಅತ್ಯಂತ ಬರ್ಬರ ರೀತಿಯಲ್ಲಿ ಕೊಂದು ಆಕೆಯ ರುಂಡದೊಂದಿಗೆ ಹಂತಕ ಮೊಣ್ಣಂಡ ಪ್ರಕಾಶ ಎಂಬ ವ್ಯಕ್ತಿ ಪರಾರಿಯಾಗಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇಂತಹ ಮೈ ನಡುಗಿಸುವಂತಹ ಬರ್ಬರ ಮತ್ತು ಪೈಶಾಚಿಕ ಕೃತ್ಯ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಹತ್ಯೆಯಾಗಿರುವ ಮೀನಾ ಹಾಗೂ ಹಂತಕ ಪ್ರಕಾಶ್ ಇವರಿಗೆ ಕಳೆದ ಮೇ 9ರಂದು ನಿಶ್ಚಿತಾರ್ಥ ಏರ್ಪಡಿಸಲಾಗಿತ್ತು. ಆದರೆ ಇದು ಬಾಲ್ಯವಿವಾಹವಾಗಿದ್ದರಿಂದ, ಬಾಲಕಿಯ ತಂದೆ ತಾಯಿಗೆ ಈ ಮದುವೆ ಕಾನೂನಿಗೆ ವಿರುದ್ಧ ಎಂಬುದನ್ನು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮನದಟ್ಟು ಮಾಡಿಕೊಟ್ಟಿದ್ದರಿಂದ ಬಾಲಕಿಯ ಪೋಷಕರು ನಿಶ್ಚಿತಾರ್ಥವನ್ನು ರದ್ದುಗೊಳಿಸಿದ್ದರಿಂದ ಆಕ್ರೋಶಗೊಂಡ ಹಂತಕ, ಅದೇ ದಿನ ಸಂಜೆ 5.30ರ ಸುಮಾರಿಗೆ ಮೀನಾಳ ಮನೆಗೆ ಆಗಮಿಸಿ, ಬಾಲಕಿಯ ತಂದೆಯೊಂದಿಗೆ ಜಗಳ ಪ್ರಾರಂಭಿಸಿ ನಂತರ ಹಲ್ಲೆ ನಡೆಸಿ, ಅಲ್ಲೇ ಇದ್ದ ಮೀನಾಳನ್ನು ಸುಮಾರು 150 ಮೀಟರ್ ದೂರಕ್ಕೆ ಎಳೆದೊಯ್ದು, ನಂತರ ಆಕೆಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಆಕೆಯ ರುಂಡವನ್ನು ಕತ್ತರಿಸಿ, ಅದರೊಂದಿಗೆ ಪರಾರಿಯಾಗಿದ್ದಾನೆಂದು ಪೊಲೀಸ್ ಮೂಲಗಳು ತಿಳಿಸಿವೆ. ಹಂತಕನನ್ನು ಈಗಾಗಲೇ ಪೊಲೀಸರು ಬಂಧಿಸಿದ್ದಾರೆ.

ಸಮಾಜದಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಇಂತಹ ಭೀಕರ ಮತ್ತು ಪೈಶಾಚಿಕ ಕೃತ್ಯಗಳು ನಡೆಯುತ್ತಿರುವುದು ದುರದೃಷ್ಟಕರವಾಗಿದೆ. ಈ ಹಿಂದೆಯೂ ಇಂತಹ ಅಮಾನವೀಯ ಕೃತ್ಯಗಳು ನಡೆದಿದ್ದು, ಇಂತಹ ಹಂತಕರು ಇಡೀ ಮನುಕುಲಕ್ಕೆ ಕಂಟಕರಾಗಿದ್ದಾರೆ. ಇಂತಹವರು ವಿಕೃತ ಮನೋಭಾವದವರಾಗಿದ್ದು, ಇಂತಹವರಿಂದ ಸಮಾಜದ ಸ್ವಾಸ್ಥ್ಯ ಕೆಡುತ್ತದೆ. ಇವರಿಗೆ ಯಾವುದೇ ರೀತಿಯ ಕರುಣೆ ತೋರಿಸದೇ ನ್ಯಾಯಾಲಯ ಗರಿಷ್ಠ ಮಟ್ಟದ ಶಿಕ್ಷೆ ವಿಧಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಸಾಕೆಂಬುವ ಸಿರಿತನ ಬೇಡವೇ...!?



ನಮ್ಮ ಆರೋಗ್ಯ, ಆಯುಷ್ಯ, ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಾನಮಾನ ಎಲ್ಲವೂ ಸರಿಯಿದ್ದಾಗಲೇ ಆತ್ಮತೃಪ್ತಿಯ ಪುಟಗಳೆಡೆಗೆ ಕಣ್ಣಾಡಿಸಬೇಕು. ಬೇಕಾದುದೆಲ್ಲಾ ದಕ್ಕಿದ ಮೇಲೂ ಮತ್ತೆ ಮತ್ತೆ ಬೆನ್ನತ್ತಿದ ಬೇತಾಳದಂತೆ ಅದರ ಹಿಂದೆಯೇ ಓಡಬಾರದು. ಎಲ್ಲವೂ ಸರಿಯಿದ್ದಾಗಲೇ ಇನ್ನು ಇದು ನನಗೆ ಸಾಕು ಎನ್ನುವ ಸಿರಿತನ ನಮ್ಮನ್ನು ಆವರಿಸಿಕೊಳ್ಳಬೇಕು. ಅದೇ ನಮ್ಮನ್ನು ನಾವೇ ಓದಿಕೊಳ್ಳುವ ನಡೆದು ಬಂದ ದಾರಿ, ಆತ್ಮತೃಪ್ತಿಯ ಸಂಪುಟ.

ನಮಗೆ ಎಲ್ಲ ಆಕರ್ಷಣೆಗಳ ಪರಮ ಕೇಂದ್ರಬಿಂದು ಈ ಜೀವನ. ಆಕರ್ಷಣೆಯೇ ಇಲ್ಲದಿದ್ದರೆ ಈ ಬದುಕು ಇಷ್ಟೊಂದು ಸಹನೀಯವಾಗಿ ಇರುತ್ತಿತ್ತೆ ಹೇಗೆ! ಶಾಲೆಗೆ ಹೋಗುವ ಹುಡುಗನಿಗೆ ತಾನು ಓದಿ ಬರೆದು, ದೊಡ್ಡ ವ್ಯಕ್ತಿಯಾದರೆ, ಹೀಗಿರುತ್ತೇನೆ–ಹಾಗಿರುತ್ತೇನೆ ಎಂಬ ಆಕರ್ಷಣೆ ಅವನನ್ನು ಆಕರ್ಷಿಸದಿದ್ದರೆ, ಆತ ಮಣಭಾರದ ಪುಸ್ತಕದ ಹೊರೆ ಹೊತ್ತು ಶಾಲೆಯೆಡೆಗೆ ಧಾವಿಸುತ್ತಾನಾದರೂ ಏಕೆ? ಒಬ್ಬ ಉದ್ಯಮಿ ಈ ವರ್ಷದ ಆದಾಯದ ದುಪ್ಪಟ್ಟು ಲಾಭಾಂಶವನ್ನು ಮುಂದಿನ ವರ್ಷ ಕಾಣುತ್ತೇನೆಂಬ ಯೋಜನಾಬದ್ಧ ಕ್ರಿಯಾಯೋಜನೆಗೆ ಆಕರ್ಷಿತನಾಗದೇ ಹೋದರೆ, ಆತ ದುಡಿಮೆಯನ್ನೇಕೆ ನೆಚ್ಚಿಕೊಳ್ಳುತ್ತಾನೆ. ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಎಂಟ್ರಿ ತೆಗೆದುಕೊಂಡ ರಾಜಕಾರಣಿ ಇವತ್ತಲ್ಲ, ನಾಳೆ ತಾನು ಯಾವುದಾದರೊಂದು, ಅಧಿಕಾರದ ಗದ್ದುಗೆಯಲ್ಲಿ ಕೂರುತ್ತೇನೆ ಎಂಬ ಆಕರ್ಷಣೆಗೆ ಒಳಗಾಗದೇ ಹೋದರೆ ಆತನಾದರೂ ಜನಸೇವೆಯ ಆಕರ್ಷಣೆಗೆ ಏಕೆ ಒಳಗಾಗುತ್ತಾನೆ. ಬರಹಗಾರನೊಬ್ಬ ಎಷ್ಟೇ ಸಿದ್ಧಾಂತ, ವೇದಾಂತ ಮಾತಾಡಿದರೂ ಜನ ತನ್ನನ್ನು ಒಬ್ಬ ಬರಹಗಾರ ಎಂದು ಗುರ್ತಿಸಲಿ ಎಂಬ ಆಕರ್ಷಣೆಗೆ ಒಳಗಾಗದೆ ಹೋದರೆ, ಆತನ ಅಧ್ಯಯನ, ಅಭ್ಯಾಸ, ಅಕ್ಷರಗಳು, ಕಳೆಕಟ್ಟುವುದಾದರೂ ಹೇಗೆ? ಹೋಟೆಲಿನ ಮಾಣಿ ಮುಂದೊಂದು ದಿನ ತಾನು ಚಿಕ್ಕದೊಂದು ದರ್ಶಿನಿಗಾದರೂ ಮಾಲೀಕನಾಗುತ್ತೇನೆಂಬ ಒಂದು ಸಣ್ಣ ಚಿಕ್ಕದೊಂದು ಆಕರ್ಷಣೆಗೆ ಒಳಗಾಗದೇ ಹೋದರೆ, ಆತ ತನ್ನ ಕೆಲಸದಲ್ಲಿ ತಾಜಾತನ ಕಾಣುವುದಾದರೂ ಹೇಗೆ? ಸಮಾಜದಲ್ಲಿ ಹೀಗೆ ಹೊಟ್ಟೆಪಾಡಿಗೆ ದುಡಿಯುವ, ವರ್ಗ ಒಂದಲ್ಲಾ ಒಂದು ವಿಧದಲ್ಲಿ ತಮ್ಮ ತಮ್ಮ ಅಭಿವೃದ್ಧಿಯ ಆಕರ್ಷಣೆಗೆ ಒಳಗಾಗಿಯೇ ದಿನ ದೂಡುತ್ತಿರುತ್ತದೆ.

ಆದರೆ, ದುಡ್ಡು, ಕಾಸು, ಅನುಕೂಲ, ಅಧಿಕಾರಗಳೆಲ್ಲವನ್ನೂ ಕಂಡುಂಡ ಮಂದಿ ಕೂಡ ಸುಮ್ಮನೆ ರಗ್ಗು ಹೊದ್ದು ಮಲಗುತ್ತಾರೆಯೇ? ನಮಗೆ ಎಲ್ಲವೂ ಇದೆ ನಮಗಿನ್ಯಾಕೆ ಶ್ರಮ, ದುಡಿಮೆ ಎಂದು ಯಾರು ತಾನೆ ಕೈಕಟ್ಟಿ ಕೂರುತ್ತಾರೆ ಹೇಳಿ? ಪ್ರತಿಯೊಬ್ಬರ ಕಲ್ಪನೆಯೂ ಅವರನ್ನು ತಮ್ಮ ತಮ್ಮ ಬದುಕಿನ 'ಹೀರೋ' ಆಗಿಸಿಕೊಳ್ಳಲಿಕ್ಕಾಗಿಯೇ ಹೆಣಗುವ ನಿರಂತರವಾಗಿ ದುಡಿಮೆಯೆಂಬ ಹಳಿಯ ಮೇಲೆ ಪಯಣ ಕೇಳುತ್ತಿರುತ್ತದೆ. ಹಾಗೆ ಆಕರ್ಷಣೆಯ ಹುಚ್ಚು ವೇಗದಲ್ಲಿ ಕೆಲವರು ಅಪಘಾತಕ್ಕೊಳಗಾಗುತ್ತಾರೆ. ವೇಗದ ಓಟಕ್ಕೆ ಬ್ರೇಕ್ ಹಾಕುವ ಅಪಾಯವನ್ನೂ, ಅಡೆತಡೆಗಳ ಒತ್ತಡವನ್ನೂ ದಾಟಿ ಕೆಲವರು ತಮ್ಮ ಪ್ರಯಾಣವನ್ನು ಮುನ್ನಡೆಸುತ್ತಾರೆ. ಆಗ ಸಿಕ್ಕುತ್ತಾರೆ ನೋಡಿ ಅವರೊಳಗೊಬ್ಬ ಸಕ್ಸಸರ್, ಅವನೇ ಯಶಸ್ಸಿನ ಮೆಟ್ಟಿಲೇರಿ ಬೀಗುವವನು. ನೆಲಕ್ಕೆ ಬಿದ್ದವನು ಮೇಲೆದ್ದು ಓಡುವ ಹೊತ್ತಿಗೆ, ಇವರು ಗುರಿಮುಟ್ಟಿರುತ್ತಾರೆ.

'ಏಳಿ ಎದ್ದೇಳಿ ಗುರಿ ಮುಟ್ಟುವವರೆಗೂ ನಿಲ್ಲದಿರಿ' ಎಂದು ಸ್ವಾಮಿ ವಿವೇಕಾನಂದರು ಹೇಳಿದ ಮಾತು ಸಾರ್ವತ್ರಿಕ ಮತ್ತು ಎಲ್ಲರಿಗೂ ಅನ್ವಯಿಕ. ಯಾಕೆಂದರೆ ಯಶಸ್ಸಿನ ಮೊದಲ ಹೆಜ್ಜೆ ಕೂಡ ಶುರುವಾಗುವುದು ಮೊದಲ ಹೆಜ್ಜೆಯಿಂದ, ಅಂದರೆ ಅದರ ಸಂಖ್ಯೆ ಶುರುವಾಗುವುದು ಒಂದರಿಂದಲೇ! ಅದು ಹತ್ತು ತಲುಪಿ ಗುರಿಮುಟ್ಟಿದ ಮೇಲೆ ಮುಂದೇನು? ಎಂಬ ಪ್ರಶ್ನೆ ಕಾಡುತ್ತದೆ. ನಾವು ಹೀಗೆ ಯೋಚಿಸಲಿಕ್ಕೆ ಆ ದಿನಗಳು ನಮಗೆ ಬರಲೇ ಇಲ್ಲ ಅಲ್ಲವೇ? ಕಾರಣ ಇಷ್ಟೇ, ನಾವು ಶುರು ಹಚ್ಚಿಕೊಂಡ ನಮ್ಮ ಬದುಕಿನ ಯಶೋಗಾಥೆಯ ನಿರಂತರ ಪ್ರಯಾಣ ನಮಗಿನ್ನೂ ಮುಗಿದೇ ಇಲ್ಲ. ನಮಗಿನ್ನು ಅದೇ ಹೋರಾಟ, ನಿತ್ಯ ಪರದಾಟ. ದುಡ್ಡು ಕಾಸು, ಅಡ್ಜೆಸ್ಟ್‌ಮೆಂಟು, ಹೀಗೆ ಸಾಯುವ ಕಡೇ ದಿನದವರೆಗೂ ಹೆಣಗಿ ಹೆಣಗಿ ಹೈರಾಣಾಗಿ ಹೋಗುತ್ತೇವೆ. ಈ ಜೀವ–ಜೀವನದ ರೇಜಿಗೆಗಳಿಂದ ತಲೆತಪ್ಪಿಸಿಕೊಳ್ಳಲು ಒಂದಲ್ಲಾ ಒಂದು ರೀತಿಯ ಹೋರಾಟದ ಬದುಕನ್ನು ಸವೆಸುತ್ತಲೇ ಕಾಲ ದೂಡುವ ನಮ್ಮಂಥ ಸಾಮಾನ್ಯ ಜೀವಗಳ ಕಥೆಯಿದು.

ಆದರೆ ನಮ್ಮ ನಡುವೆಯೇ ಮತ್ತೊಂದು ವರ್ಗವಿದೆ. ಅವರ ಕೈಯ್ಯಲ್ಲಿ ದುಡ್ಡಿದೆ, ಅಧಿಕಾರವಿದೆ, ಆಸ್ತಿಯಿದೆ, ಅಂತಸ್ತಿದೆ, ಆಳುಕಾಳುಗಳಿದ್ದಾರೆ, ಬೇಡವೆಂದರೂ ಒಲಿದು ಬರುವ ಸುಖದ ಸುಪ್ಪತ್ತಿಗೆಯಿದೆ, ಬೆಡಗಿನ ಸಿರಿಯಿದೆ, ಸಾಕೆನ್ನುವಷ್ಟು ಭೂಮಿಯಿದೆ–ಕಾಣಿಯಿದೆ, ಕಣ್ಣ ಆಣತಿಯಲ್ಲೇ ಜಗವ ಕುಣಿಸುವ ತಾಕತ್ತಿದೆ.

> **"** ವೃತ್ತಿ ಎಂದ ಕೂಡಲೆ, ಅದೇನು ಸರಕಾರಿ ವೃತ್ತಿಯೇ ಆಗಬೇಕಿಲ್ಲ. ಖಾಸಗಿ ಮತ್ತು ಸರಕಾರಿ ನೌಕರರಿಗೆ ನಿಗದಿತ ವಯಸ್ಸಿನ ನಂತರ ನಿವೃತ್ತಿಯಾಗುತ್ತದೆ. 'ನಿವೃತ್ತಿ'ಯಾದ ಮೇಲೆ ತನ್ನ ಇಳಿಸಂಜೆಯ ಹೊತ್ತಿನಲ್ಲಿ ಅವರು ನೆಮ್ಮದಿಯಾಗಿರಲಿ ಎಂಬುದೇ ಅದರ ಉದ್ದೇಶ. ಇಲ್ಲಿವರೆಗೂ ನೋಡಿಕೊಳ್ಳಲಾಗದ ಅವರ ಆರೋಗ್ಯ ನೋಡಿಕೊಳ್ಳಲಿ, ಮಕ್ಕಳು, ಮೊಮ್ಮಕ್ಕಳ ಕೂಡಿ, ಕಾಲ ಕಳೆಯಲಿ, ಒಟ್ಟಾರೆ ತಮ್ಮ ಜೀವಿತಾವಧಿಯ ಪ್ರಖರ ಅರವತ್ತು ವರ್ಷಗಳ ಕಾಲದ ವೇಗದ ಬದುಕಿಗೆ ಬ್ರೇಕ್ ಹಾಕಿ ನಿವೃತ್ತಿಯ ದಿನಗಳಲ್ಲಿ ನಿಶ್ಚಿಂತೆಯಿಂದಿರಲಿ ಎಂಬುದೇ ಈ ನಿವೃತ್ತಿಯ ಆಶಯ. ಹಾಗೆಯೇ ಪ್ರವೃತ್ತಿಯಲ್ಲಿ ಸದಾ ಬಿಜಿಯಾಗಿರುವ ಕಲೆ, ಕಲಾವಿದ ಕ್ರೀಡೆ–ಕ್ರೀಡಾಪಟು, ಉದ್ಯಮಿ, ವ್ಯಾಪಾರಿ ರಾಜಕಾರಣಿ ಹೀಗೆ ನೌಕರಿಯ ವಲಯದಿಂದ ಆಚೆಯಿರುವವರು ಕೂಡ ತಮ್ಮ 'ಆತ್ಮತೃಪ್ತಿ'ಗಾಗಿ 'ನಿವೃತ್ತಿ'ಯನ್ನು ಆಶ್ರಯಿಸಲೇ ಬೇಕು. ಅದು ಸ್ವಯಂ ನಿವೃತ್ತಿಯಾ! ವಯೋನಿವೃತ್ತಿಯಾ? ಎಂದರೆ ಖಂಡಿತವಾಗಿಯೂ ಅದು 'ವಯೋನಿವೃತ್ತಿ'.

ಖಂಡಿತವಾಗಿ ಇಷ್ಟೆಲ್ಲಾ ಇದ್ದರೂ ಕೂಡ ಅವರಿಗೆ ನೆಮ್ಮದಿಯ ನಿದ್ದೆಯಿಲ್ಲ! ತೃಪ್ತಿಯಿಂದ ಅವರು ತೃಪ್ತರಾಗಿಲ್ಲ! ಸಾಮಾನ್ಯರಲ್ಲಿ ಸಾಮಾನ್ಯರಾದ ನಾವು ಅನ್ನಬಟ್ಟೆ, ವಸತಿ, ಖರ್ಚು–ವೆಚ್ಚಗಳಿಗಾಗಿ ಹೋರಾಡಿದರೆ, ಯಶಸ್ಸಿನ ಮೆಟ್ಟಿಲೇರಿದ ಆ ಇನ್ನೊಂದು ವರ್ಗ, ಗಳಿಸಿದ್ದೆಲ್ಲವನ್ನೂ ತಾವು ಬದುಕಿರುವವರೆಗೂ ಉಳಿಸಿಕೊಳ್ಳಲು ಹೋರಾಡುತ್ತಿರುತ್ತಾರೆ.

ಅಂದರೆ ನಿರಂತರ ಹೋರಾಟದಲ್ಲೇ ಬದುಕಿ ಬಿಡುವ ಅವರು–ಇವರು, ನಾವು–ನೀವೂ, ಎಲ್ಲರಿಗೂ ಇವತ್ತು ಅಗತ್ಯವಾಗಿ ಬೇಕಾದ ಒಂದೇ ಒಂದು ಮೂಲದ್ರವ್ಯವೆಂದರೆ 'ಆತ್ಮತೃಪ್ತಿ'. ಸಂತೃಪ್ತಿಯಿಲ್ಲದಿದ್ದರೂ ಪರ್ವಾಗಿಲ್ಲ, ಕನಿಷ್ಠ ಪಕ್ಷ ನಮ್ಮ ನಮ್ಮ ಆತ್ಮಸುಖಕ್ಕಾಗಿ ಇಷ್ಟು ದಿನ ಹೆಣಗಾಡಿದರೂ ತೃಪ್ತಿಯಿಂದ ನಿರ್ಗಮಿಸುವ ನಿರ್ಗಮನ ಪಥ ನಮ್ಮ ನೂರನೇ ಹೆಜ್ಜೆಗಾಗಿ ಕಾದಿರಬೇಕು!. ಎಂದರೆ ನಮಗೆ ಉಳಿದಿರುವ ಮಾರ್ಗ ಅದೊಂದೆ.! ಅದೇ ನಮ್ಮ ವೃತ್ತಿ–ಪ್ರವೃತ್ತಿಗಳಿಂದ ನಮಗೆ ನಿವೃತ್ತಿ ಬೇಕು.

ವೃತ್ತಿ ಎಂದ ಕೂಡಲೇ, ಅದೇನು ಸರಕಾರಿ ವೃತ್ತಿಯೇ ಆಗಬೇಕಿಲ್ಲ. ಖಾಸಗಿ ಮತ್ತು ಸರಕಾರಿ ನೌಕರರಿಗೆ ನಿಗದಿತ ವಯಸ್ಸಿನ ನಂತರ ನಿವೃತ್ತಿಯಾಗುತ್ತದೆ. 'ನಿವೃತ್ತಿ'ಯಾದ ಮೇಲೆ ತನ್ನ ಇಳಿಸಂಜೆಯ ಹೊತ್ತಿನಲ್ಲಿ ಅವರು ನೆಮ್ಮದಿಯಾಗಿರಲಿ ಎಂಬುದೇ ಅದರ ಉದ್ದೇಶ. ಇಲ್ಲಿಯವರೆಗೂ ನೋಡಿಕೊಳ್ಳಲಾಗದ ಅವರ ಆರೋಗ್ಯ ನೋಡಿಕೊಳ್ಳಲಿ, ಮಕ್ಕಳು, ಮೊಮ್ಮಕ್ಕಳ ಕೂಡಿ, ಕಾಲ ಕಳೆಯಲಿ, ಒಟ್ಟಾರೆ ತಮ್ಮ ಜೀವಿತಾವಧಿಯ ಪ್ರಖರ ಅರವತ್ತು ವರ್ಷಗಳ ಕಾಲದ ವೇಗದ ಬದುಕಿಗೆ ಬ್ರೇಕ್ ಹಾಕಿ ನಿವೃತ್ತಿಯ ದಿನಗಳಲ್ಲಿ ನಿಶ್ಚಿಂತೆಯಿಂದಿರಲಿ ಎಂಬುದೇ ಈ ನಿವೃತ್ತಿಯ ಆಶಯ. ಹಾಗೆಯೇ ಪ್ರವೃತ್ತಿಯಲ್ಲಿ ಸದಾ ಬಿಜಿಯಾಗಿರುವ ಕಲೆ, ಕಲಾವಿದ ಕ್ರೀಡೆ–ಕ್ರೀಡಾಪಟು, ಉದ್ಯಮಿ, ವ್ಯಾಪಾರಿ ರಾಜಕಾರಣಿ ಹೀಗೆ ನೌಕರಿಯ ವಲಯದಿಂದ ಆಚೆಯಿರುವವರು ಕೂಡ ತಮ್ಮ **'ಆತ್ಮತೃಪ್ತಿ'**ಗಾಗಿ **'ನಿವೃತ್ತಿ'**ಯನ್ನು ಆಶ್ರಯಿಸಲೇಬೇಕು. ಅದು ಸ್ವಯಂ ನಿವೃತ್ತಿಯಾ! ವಯೋ ನಿವೃತ್ತಿಯಾ? ಎಂದರೆ ಖಂಡಿತವಾಗಿಯೂ ಅದು 'ವಯೋನಿವೃತ್ತಿ'.

ಕಾರಣ ಇಷ್ಟೇ. ಸ್ವಯಂ ನಿವೃತ್ತಿಯಾದವರ ಉದ್ದೇಶ, ಪರಿವೇಷಗಳು ಬೇರೆಯೇ ಇರುತ್ತವೆ. ಅವರ ಗೊತ್ತುಗುರಿಗಳು ಮತ್ತಿನ್ನೇನನ್ನೋ ಸಾಧಿಸಲು ಹವಣಿಸುತ್ತಿರುತ್ತವೆ. ಅದನ್ನು ಸಾರ್ವತ್ರಿಕ ಸ್ವೀಕೃತಿ ಎನ್ನಲಾಗುವುದಿಲ್ಲ. ಆದರೆ ವಯೋ ನಿವೃತ್ತಿ ಹಾಗಲ್ಲ. ಅದು ದೇಹ, ಮನಸ್ಸುಗಳಿಗೆ ತಮ್ಮ ಅರವತ್ತು ವರುಷಗಳ ಮಣಭಾರದ ಆಯಾಸವನ್ನು ಕೆಳಗಿಳಿಸುವ ತವಕ. ವಿಶ್ರಾಂತ ಜೀವನದ ನಿರ್ಲಿಪ್ತ ಸ್ಥಿತಿ. ಹೋರಾಟದ ಜೀವನದಲ್ಲಿ ಶಸ್ತ್ರಾಸ್ತ್ರಗಳನ್ನು ಕಳಚಿಟ್ಟು ನಿರ್ಲಿಪ್ತ ಆನಂದಕ್ಕೆ ನಮ್ಮನ್ನೇ ಒಡ್ಡಿಕೊಳ್ಳುವ ಪುಳಕ. ಒಟ್ಟಾರೆ **'ಅಂತರ್ಯದಲ್ಲಿ ಆತ್ಮತೃಪ್ತಿ'**ಯ ಪುಟಗಳನ್ನು ತೆರೆದು **'ನಮಗಿನ್ನು ಸಾಕು'** ನಮಗೆ ಇನ್ನೇನು ಬೇಕು! ಎಂದು ನೆಮ್ಮದಿಯ ನೇಪಥ್ಯದಲ್ಲಿ ಷರಾ ಬರೆದುಕೊಳ್ಳುವ ಮಧುರ ಕ್ಷಣದ ಹೆಸರು 'ವಯೋನಿವೃತ್ತಿ'. ಆದರೆ ಬದುಕು ಎಲ್ಲಿಗೆ ಬಂದು ನಿಂತಿದೆ ನೋಡಿ! ಸ್ವಯಂ ನಿವೃತ್ತಿಯಾಗಿ ಆತ್ಮತೃಪ್ತಿ'ಯ ದಿನಗಳು ಕದ ತೆರೆದು ಕೈ ಬೀಸಿ ಕರೆಯುತ್ತಿದ್ದರೂ ಬಹಳಷ್ಟು ಮಂದಿಗೆ ಹೋಗುವ ಮನಸ್ಸಿಲ್ಲ. ನಿವೃತ್ತಿಯಾದ ಮೇಲೂ ಕೆಲವರಿಗೆ ದುಡಿಯುವ ತವಕ. ಕೆಲವರಿಗದು ಅನಿವಾರ್ಯ.

ಆ ಕಾರಣಕ್ಕೇ ಅವರು ಮತ್ತೊಮ್ಮೆ ಹೋರಾಟದ ಅಖಾಡಕ್ಕಿಳಿಯುತ್ತಾರೆ. ಅವರ ತಾಪತ್ರಯಗಳ ಅಯೋಮಯ ಆಯವ್ಯಯಗಳ ಅಂದಾಜು ವೆಚ್ಚ ಅರವತ್ತರ ನಂತರದಲ್ಲೂ ಅವರಿಂದ ದುಡಿಸುತ್ತದೆ. ಅಂಥವರು ದುಡಿದೂ ದುಡಿದೂ ಅಳಿದು ಹೋಗುತ್ತಾರೆ. ಅದು ಬಿಡಿ! ಆದರೆ ಸಾರಸರ್ವಸ್ವವೂ ಕೈವಶವಾದವರು, ನಿವೃತ್ತಿಯ ನಂತರವೂ ದುಡಿಮೆಯ ಅಖಾಡಕ್ಕಿಳಿಯುವುದನ್ನು ನೋಡಿದರೆ! ಅಸಂಖ್ಯಾತರ ಎದೆಯಲ್ಲಿ **'ಆತ್ಮತೃಪ್ತಿ'** ಎಂಬುದು ಮರಳುಗಾಡಿನ ಮರೀಚಿಕೆಯಂತೆ ಅಲ್ಲವೇ? ಇದು ಕೇವಲ ನೌಕರರಿಗೆ ಮಾತ್ರವಲ್ಲ, ಇದು ಪ್ರವೃತ್ತಿಗೂ ಅನ್ವಯಿಸುತ್ತದೆ. ಹೆಜ್ಜೆ ಎತ್ತಿಡಲಾಗದೆ ಮಂಡಿನೋವಿನಿಂದ ಬಳಲುವ ನೃತ್ಯಪಟುಗಳು ಮತ್ತೆ ಜನರ ಚಪ್ಪಾಳೆಗಾಗಿ ಕಾಲಿಗೆ ಗೆಜ್ಜೆ ಕಟ್ಟುತ್ತಾರೆ. ಪಿ.ಬಿ.ಶ್ರೀನಿವಾಸರಂಥ ಅದ್ಭುತ ಗಾಯಕ ಸಹ ದಶಕಗಳ ಕಾಲ ಕರ್ನಾಟಕದ ಮನೆ ಮನಗಳನ್ನು ಸೂರೆಗೊಂಡರೂ, ಅಷ್ಟೊಂದು ಜನಪ್ರೀತಿಯನ್ನು ಎಂಜಾಯ್ ಮಾಡಿದ್ದರೂ, ಇಳಿವಯಸ್ಸಿನಲ್ಲೂ ಮೈಕು ಸಿಕ್ಕರೆ ಸಾಕು ಹಾಡುತ್ತಿದ್ದರು.

ಆದರೆ ಅವರ ಗಂಟಲು ಮಾತ್ರ ವಯೋಸಹಜ ನಿವೃತ್ತಿ ಘೋಷಿಸಿಕೊಂಡಿತ್ತು. ಇಳಿವಯಸ್ಸಿನಲ್ಲಿ ಅವರು ಹಾಡುತ್ತಿದ್ದರೇನೋ ಸರಿ! ಆದರೆ ಆ ಲಯಮಾಧುರ್ಯದಲ್ಲಿ, ನಮ್ಮ ಹಳೆಯ ಪಿ.ಬಿ.ಶ್ರೀನಿವಾಸ್ ಕಾಣುತ್ತಿರಲಿಲ್ಲ. ಆದರೆ ಅದು ಅವರಿಗೆ ಗೊತ್ತಾಗುತ್ತಿರಲಿಲ್ಲ. ಆದರೆ ಜನರು ಮಾತ್ರ ಅವರ ಮೇಲಿನ ಪ್ರೀತಿ ಅಭಿಮಾನದಿಂದ ಪಿ.ಬಿ.ಯವರ ಹಾಡನ್ನು ಕೇಳಿಸಿಕೊಳ್ಳುತ್ತಿದ್ದರು. ಅದೇ ಅವರ ಜನ ಪ್ರೀತಿ. ಆದರೆ ಗಂಟಲು ಮಾತ್ರ ಅವರ ಆ ಇಳೀ ವಯಸ್ಸಿನಲ್ಲಿ ವಯೋನಿವೃತ್ತಿ ಘೋಷಿಸಿಕೊಂಡಿತ್ತು

ಲಂಕೇಶ್‌ರಂಥ ಪತ್ರಿಕಾ ಸಂಪಾದಕರು ತಾವು ಸಾಯುವ ಒಂದೆರಡು ವಾರದ ಹಿಂದೆ ಟೀಕೆ–ಟಿಪ್ಪಣಿ ಬರೆದು ಮುಗಿಸಿ, ಅವರಿಗೇ ಅದು ಹಿಡಿಸದಂತಾಗಿ ಹರಿದು ಬಿಸಾಕಿದರಂತೆ. ಹೀಗೆ ಬರೆಯುವುದಾದರೆ ಇನ್ನು ಬರೆಯಲೇಬಾರದು, ನಿಲ್ಲಿಸಿಬಿಡಬೇಕೆಂದು ಗೊಣಗಿಕೊಂಡು ಸುಮ್ಮನಾದರಂತೆ. ತನ್ನ ಆತ್ಮತೃಪ್ತಿಗಾಗಿ ಅವಶ್ಯಕವಾದ ವಯೋ ನಿವೃತ್ತಿಯ ಮಾಯಾಂಗನೆ ತೋರಿಸುತ್ತಿರುವ ಬಣ್ಣದ ವೇಷದ ನೆರಳಿನಾಟಕ್ಕೆ ಅವರು ಒಳಗಾಗಿದ್ದರು. ಎಷ್ಟೋ ಜನ ರಾಜಕಾರಣದಲ್ಲಿ ಸೋತ ನಂತರವೂ ಮತ್ತೊಮ್ಮೆ ಗೆಲ್ಲುವ ತವಕ, ಬೇಕೋ ಬೇಡವೋ ಬೆಳಗ್ಗಿನಿಂದಲೂ ಸಂಜೆಯ ತನಕ ವಿಶ್ರಾಂತಿಯಿಲ್ಲದೆ ಜನಸಂಪರ್ಕದಲ್ಲಿರುವ ಹುಮ್ಮಸ್ಸು, ಇದೆಲ್ಲವನ್ನೂ ಉಳಿಸಿಕೊಳ್ಳಲು ಹೋಗಿ ಆತ್ಮತೃಪ್ತಿಯ ಪುಟಗಳಿಗೆ ತಾವೇ ಪೂರ್ಣ ವಿರಾಮ ಇಟ್ಟುಕೊಂಡುಬಿಡುತ್ತಾರೆ. ಹೀಗೆ ತಾವು ಮತ್ತು ತಮ್ಮ ಐಡೆಂಟಿಟಿ ಅಸ್ತಿತ್ವದಲ್ಲಿರಬೇಕು ಎಂಬ ಲೈಮ್‌ಲೈಟ್ ಥಿಯರಿ ಇಟ್ಟುಕೊಂಡು ಮಾಡುವ ಈ ಸಂಕಲ್ಪಗಳು ಕಡೇ ಕ್ಷಣದವರೆಗೂ ವಿಶ್ರಾಂತಿಯ ಆತ್ಮತೃಪ್ತಿ ಕೈಗೂಡುವುದಿಲ್ಲ. ಆದರೆ ಕಾಲ ಅವರ ವಯೋನಿವೃತ್ತಿಯ ದಿನಾಂಕವನ್ನು ಘೋಷಿಸಿಯೇ ತೀರುತ್ತದೆ. ಅದನ್ನು ಓವರ್‌ಟೇಕ್ ಮಾಡಿ ಓಡುವ ಹಲವರಿಗೆ again **ಆತ್ಮತೃಪ್ತಿ**ಯೆಂಬ ನೆಮ್ಮದಿಯ ನಿರಾಳತೆ ಕನಸಿನ ಮಾತು.

ದಶಕಗಳ ಕಾಲ ಇಡೀ ಕನ್ನಡ ಚಿತ್ರರಂಗದ ಪರದೆಯ ಮೇಲೆ ತಮ್ಮ ಗೀತರಚನೆಯ ಕೈಚಳಕ ತೋರಿಸಿದ ಚಿ.ಉದಯಶಂಕರ್, ನಾದಬ್ರಹ್ಮ ಹಂಸಲೇಖ ಬಂದ ಮೇಲೆ ನಿವೃತ್ತಿಯ ಆತ್ಮತೃಪ್ತಿಯೆಡೆಗೆ ಹೊರಟುಬಿಟ್ಟರು. ಜಿದ್ದಿಗೆ ಬಿದ್ದು, ಹಠಕ್ಕೆ ಬಿದ್ದು, ತಮ್ಮ ಪೆನ್ನಿಗೆ ಬಲವಂತದ ಮಾಘಸ್ನಾನ ಮಾಡಿಸಲಿಲ್ಲ. ದುಡಿವ ವಯಸ್ಸಿನಲ್ಲಿ ಬರೆದ ಹಳೆಯ ಹಾಡುಗಳಿಂದ ಇವತ್ತಿಗೂ ಅವರು ಜನರ ಮನಸ್ಸಿನಲ್ಲಿ ಜೀವಂತವಾಗಿದ್ದಾರೆ. ಹಾಗೆ ಉಳಿಯುವಂತೆ ಅವರು ಮತ್ತು ಅವರ ಹಾಡುಗಳು ಕನ್ನಡ ಚಿತ್ರರಸಿಕರ ಮನಸ್ಸನ್ನು ಆಳುತ್ತಿವೆ. ಇಂದಿಗೂ ಚಿ.ಉದಯಶಂಕರರ ಹಾಡುಗಳು ಎಂದೂ ಮರೆಯದ ಹಾಡಾಗಿ ನಮ್ಮನ್ನು ನಮ್ಮದೇ ಜೀವಮಾನದ ನಮ್ಮ ಜಮಾನವನ್ನು ನೆನಪಿಸುತ್ತವೆ. ಕಾರಣ ಇಷ್ಟೆ, ಹೊಸಬರಿಗೆ ದಾರಿಬಿಟ್ಟು ತಮ್ಮ **'ಆತ್ಮತೃಪ್ತಿ'**ಯ ಬಾಲೋದ್ಯಾನದಲ್ಲಿ ವಿಹರಿಸಲು ಒಪ್ಪಿದ ಅವರವರ ಮನಸ್ಸು ಮತ್ತು ಪ್ರವೃತ್ತಿ ಇದಕ್ಕೆ ಕಾರಣ. ಹಾಗಾಗಿಯೇ ಇಂದಿಗೂ ಚಿ.ಉದಯಶಂಕರ್ ಹಾಡುಗಳು ಜೀವಂತ. ಅದೇ ರೀತಿ ಹಂಸಲೇಖ ಕೂಡ ಅದೇ ಹಾದಿ ಹಿಡಿದು ಬಹಳ ದಿನಗಳಾಗಿವೆ. ಆತ್ಮತೃಪ್ತಿಯ ಪುಟಗಳಲ್ಲಿ 'ಸರಿಗಮಪ' ನುಡಿಸುತ್ತಿರುವ ಹಂಸಲೇಖ, ಮಕ್ಕಳ ಮನಸ್ಸಿನ ಶಾರೀರ ತಿದ್ದುವಲ್ಲಿ ಸಂತೃಪ್ತಿ ಕಾಣುತ್ತಿದ್ದಾರೆ.

ಹೀಗೆ ಯಾವುದೇ ವೃತ್ತಿ ಇರಲಿ! ಪ್ರವೃತ್ತಿ ಏನೇ ಇರಲಿ, ಹೊಸತರಲ್ಲಿ ಗೋಣಿ ಎತ್ತಿ ಒಗೆದಾಗಿನ ಉತ್ಸಾಹ ಹುಮ್ಮಸ್ಸು ಸದಾ ಇರುವುದಿಲ್ಲ. ದಣಿದ ದೇಹ, ದುಡಿದ ಮನಸ್ಸು ಎರಡೂ ಕೂಡ ಯಾವುದೋ ಒಂದು ಕಾಲಕ್ಕೆ ವಿಶ್ರಾಂತಿ ಬೇಡುತ್ತವೆ. ಆ ಕಾಲಘಟ್ಟಕ್ಕೆ ತಮ್ಮ ಆತ್ಮತೃಪ್ತಿಯ ಪುಟಗಳೆಡೆಗೆ ನಿಗಾ ವಹಿಸಲು ಮುಲಾಜಿಲ್ಲದೆ ಹೊರಟು ಬಿಡಬೇಕು. ಮನೋಪ್ರವೃತ್ತಿಗೊಂದು ವಯೋನಿವೃತ್ತಿ ಘೋಷಿಸಿಕೊಂಡರೆ, ವರಕವಿ **ಡಾ. ದ.ರಾ.ಬೇಂದ್ರೆ**ಯವರು ಹೇಳಿರುವ ಹಾಗೆ,

" ನಮ್ಮಿಂದ ಹರಿದು ಚಿಂತಿ
ಜುಮ್ಮೆನ್ನು ತಾವ ತಂತಿ"

ಅಂದರೆ ನರನಾಡಿಗಳೆಂಬ ಈ ಜೀವ ವೀಣೆಯ ತಂತಿ, ವಿಶ್ರಾಂತಿಯಲ್ಲಿ ವಿರಮಿಸಿದರೆ, ಚಿಂತಿ ಹರಿದು ಬೆಳಕು ಮರಳಿ, ಮತ್ತೆ ಹೊಸಹಾಡ ಕಟ್ಟತೈತಿ ಮನಸು. ಅದೇ ಬದುಕಿನ ಇಳಿಸಂಜೆಯ ಸೊಗಸು, ಅದು ಬಿಟ್ಟು ಎಲ್ಲ ದಕ್ಕಿದ ಮೇಲೂ ಆಕರ್ಷಣೆಯನ್ನು ಅರ್ಥಮಾಡಿಕೊಳ್ಳದಿದ್ದರೆ ನಾವು ಆತ್ಮತೃಪ್ತಿಯಿಂದ ಹೊರದಬ್ಬಿಸಿಕೊಂಡು ಅತೃಪ್ತಿ ನಮ್ಮನ್ನು ಉಡಾಯಿಸುತ್ತಿರುತ್ತದೆ.

ಯಾವುದು ಎಷ್ಟೇ ಇರಲಿ 'ಸಾಕು' ಎನ್ನುವ ಮನಸ್ಥಿತಿಯೇ 'ಬುದ್ಧತ್ವ'. ನಾವು ನಡೆದು ಬಂದ ದಾರಿಯ ಮೈಲಿಗಲ್ಲುಗಳನ್ನು ನಾವಾದರೂ ನೆನೆಸಿಕೊಂಡು ಖುಷಿಪಡಲಿಕ್ಕೆ, ಸಮಾನಮನಸ್ಕ ಗೆಳೆಯರ ಜತೆ ಕಳೆದ ಬದುಕಿನ ಸ್ವಾರಸ್ಯವನ್ನು ಹಂಚಿಕೊಂಡು ಆನಂದಪಡಲಿಕ್ಕೆ, ವಾಕಿಂಗ್ ಪಥದಲ್ಲಿ, ಗಿಡದಲ್ಲಿ ನಕ್ಕ ಗುಲಾಬಿಯನ್ನು ಮೈಮುಟ್ಟಿ ಮಾತಾಡಿಸಲಿಕ್ಕೆ ಆಡಿದ ಲಗೋರಿಯ ನೆನಪಿಗೆ, ಕಾಡಿದ ನವಿಲುಗರಿಯ ರೋಮಾಂಚನಕ್ಕೆ. ಮೊಮ್ಮಗುವಿನ ಹಲ್ಲಿಲ್ಲದ ಬಾಯಿಗೆ ಬೆರಳಿಟ್ಟು ಕಿತ್ತುಕೊಳ್ಳಲು ಮನಸ್ಸಿಲ್ಲದೆ ಮೋಜು ಮಾಡೋಕೆ ನಿವೃತ್ತಿಯೆಂಬ **'ಆತ್ಮತೃಪ್ತಿ'** ಬೇಡವೇ? ಮತ್ತೆ ಮತ್ತೆ ಅದೇ ರಾಗ ಅದೇ ಹಾಡಿನ ಹಾಗೆ ದುಡಿವ ಧಾವಂತದ ತೀರದ ಪಯಣವನ್ನು ಮುಂದುವರಿಸಿ, ಬೇಕು ಬೇಕೆನ್ನುವ ಚಟಕ್ಕೆ ಬಿದ್ದರೆ, ಅದು ವೃತ್ತಿಯೇ ಇರಲಿ, ಪ್ರವೃತ್ತಿಯೇ ಇರಲಿ, ಅದು ಇಳಿವಯಸ್ಸಿನಲ್ಲೂ ಕತ್ತಿಯಂಚಿನ ದಾರಿ, ಆಗಲೂ ಕೂಡ ಚಂಚಲ ಮನಸ್ಸಿನ ವಾಂಛಲ್ಯವನ್ನು ನೀಗಿಕೊಂಡಂತೆ ಆಗುವುದಿಲ್ಲ.

ಆತ್ಮ ಎಂದರೆ 'ಆಕಾಶ'. ಅಲ್ಲಿಗೆ ನಮ್ಮೆಲ್ಲಾ ಅಭಿವೃದ್ಧಿ ಸಾಧನೆ, ಸಿದ್ಧಿ ಕಷ್ಟ–ನಷ್ಟಗಳೆಲ್ಲಾ ನಮ್ಮ ಮನೋ ರಥದ ಮೇಲೆ ಚೆದುರಿ ಹೋದ ಮೋಡಗಳಂತೆ ಪರಸ್ಪರ ಬಂದು ಹೋಗುತ್ತವೆಯೇ ವಿನಃ ಶಾಶ್ವತವಾಗಿ ಅವೇ ನಿಂತುಬಿಡುವುದಿಲ್ಲ. ಆತ್ಮ ಎಂಬ ಆಕಾಶ ಮಾತ್ರ ಜೀವ–ಜೀವನವಿರುವತನಕ ಅಚಲ. ಅಲ್ಲಿ ಆತ್ಮತೃಪ್ತಿಯ ಬೇರುಗಳಿವೆ. ಹುಡುಕಾಟದ ವಿನೋದಕ್ಕೆ ನಾವು ಮನಸ್ಸು ಮಾಡಬೇಕಷ್ಟೆ, ಎಲ್ಲವನ್ನೂ ನೋಡಿದ ಮೇಲಾದರೂ ಎಲ್ಲವನ್ನೂ ಗ್ರಹಿಸಿದ ಮೇಲಾದರೂ ಎಲ್ಲವನ್ನೂ ಅನುಭವಿಸಿದ ಮೇಲಾದರೂ 'ಸಾಕೆಂಬುವ ಸಿರಿತನ' ನಮ್ಮನ್ನು ತಾಕಬೇಕು, ಆತ್ಮತೃಪ್ತಿಯ ಒಳಪುಟ ತೆರೆಯಬೇಕು. ಅದಕ್ಕಾಗಿ ವಿಶ್ರಾಂತಿ, ಅದಕ್ಕಾಗಿ ವಯೋನಿವೃತ್ತಿ ಬೇಡೆನ್ನುತ್ತೀರ? **ಸೃಷ್ಟಿಯೇ ಸೃಷ್ಟಿಸಿದ ಸಹಜ ವಯೋ ನಿವೃತ್ತಿ ಸಾದೃಶ್ಯ ಮಾರ್ಗವಲ್ಲವೇ?**

ನವ್ಯಕವಿ **ಎಂ.ಗೋಪಾಲಕೃಷ್ಣ ಅಡಿಗ**ರ ಕವಿತೆಯೊಂದರ ಸಾಲಿದೆ. ನಿವೃತ್ತಿಯ ನಂತರದಲ್ಲಿ ಅದನ್ನು ಕೇಳಿಸಿಕೊಳ್ಳಬೇಕು ನಾವು. **"ಹೊಸ ಜಗವು ರೂಪುಗೊಂಡಿಹುದೀಗ, ಹೊಸಬಾಳು ನಮ್ಮದಿದ; ಹೊಸತೆಲ್ಲ ನಮ್ಮದಿನ್ನು, ನಗೆಯ ಹಾಯಿ ದೋಣಿ, ಉಳಿದುದೆಲ್ಲ ಸಣ್ಣಸಂಗತಿ"** ಏನಂತೀರಿ?.

ಬಹುಹಿಂದೆಯೇ ಸಮಾಜದಲ್ಲಿ ಸಮಾನತೆ ಸಾರಿದ ಮಹಾತ್ಮ ರಾಮಾನುಜಾಚಾರ್ಯರು



ಮೈಸೂರು, ಮೇ 13–ಭಾರತದಲ್ಲಿ ಸಮಾನತೆ ಸಾರಿದವರು ಶ್ರೀ ರಾಮಾನುಜಾಚಾರ್ಯರು. ಅವರನ್ನು ಗುರು, ದಾರ್ಶನಿಕ ಮತ್ತು ಸಮಾಜ ಸುಧಾರಕ ಎಂದು ಇಂದಿಗೂ ಪೂಜಿಸಲಾಗುತ್ತದೆ. ಅವರು ಬೋಧಿಸಿದ ವಿಶಿಷ್ಟಾದ್ವೈತ ಸಿದ್ಧಾಂತವು ಇಂದಿಗೂ ಭಾರತದ ಜನಪ್ರಿಯ ಅಧ್ಯಾತ್ಮ ಮಾರ್ಗವಾಗಿ ಪ್ರಕಾಶಿಸುತ್ತಿದೆ ಎಂದು ಶ್ರೀನಿವಾಸ ಅರ್ಕ ಸ್ವಾಮೀಜಿ ಪ್ರತಿಪಾದಿಸಿದರು.

ನಗರದ ರೋಟರಿ ಪಶ್ಚಿಮ ಸಂಸ್ಥೆಯ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಶಾತ್ತಾದ ಶ್ರೀ ವೈಷ್ಣವ ಸಂಘದಿಂದ ಆಯೋಜಿಸಿದ್ದ ಭಗವದ್ ಶ್ರೀ ರಾಮಾನುಜಾಚಾರ್ಯರ 1007ನೇ ತಿರು ನಕ್ಷತ್ರ ಹಾಗೂ 15ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿದ್ದ ಅಸ್ಪೃಶ್ಯತೆ ತೊಡೆದುಹಾಕಲು ಶ್ರಮಿಸಿದ ರಾಮಾನುಜರು ಹಿಂದೂ ಧರ್ಮದ ಶ್ರೇಷ್ಠ ತತ್ವಜ್ಞಾನಿಗಳಲ್ಲಿ ಒಬ್ಬರು. ನಾಡಿಗೆ ಅವರ ಕೊಡುಗೆ ಅಪಾರ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಮೈಸೂರು ಜಿಲ್ಲಾ ಶಾತ್ತಾದ ಶ್ರೀ ವೈಷ್ಣವ ಸಂಘದ ಅಧ್ಯಕ್ಷ ನರಸಿಂಹಯ್ಯ, ಉಪಾಧ್ಯಕ್ಷ ಕೆ.ಎನ್.ಸಂಪತ್ ಕುಮಾರ್, ಕಾರ್ಯದರ್ಶಿ ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ನಾರಾಯಣ್ ಜೀಯರ್, ಖಜಾಂಚಿ ಪಾಲಾಕ್ಷ, ಕಾರ್ಯದರ್ಶಿ ಪ್ರೇಮ್‌ಕುಮಾರ್ ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ತಾಲೂಕಿನ ದೇವಗಳ್ಳಿ ಗ್ರಾಮದಲ್ಲಿ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡ ಕವೀಶ್‌ಗೌಡ, ಗ್ರಾಮದ ಹಿರಿಯರು, ಬಸವ ಶರಣರು ಉಪಸ್ಥಿತರಿದ್ದರು.

12ನೇ ಶತಮಾನದಲ್ಲೇ ಕಾಯಕದ ಶ್ರೇಷ್ಠತೆ ಸಾರಿದ ಬಸವಣ್ಣ



ಮೈಸೂರು, ಮೇ 13– ಸಮ ಸಮಾಜ ನಿರ್ಮಾಣದ ಕನಸು ಕಂಡು ಅದಕ್ಕಾಗಿ ಶ್ರಮಿಸಿದ ಬಸವಣ್ಣನವರು ಕಾಯಕವೇ ಪರಮಧರ್ಮವೆಂದು ಬೋಧಿಸಿ ಅದರ ಶ್ರೇಷ್ಠತೆಯನ್ನು ಜಗತ್ತಿಗೆ ಸಾರಿದರು ಎಂದು ಜುಬಿಲಿಯಂಟ್ ಕಾರ್ಖಾನೆಯ ಮಾನವ ಸಂಪನ್ಮೂಲ ವಿಭಾಗದ ಎಚ್.ಆರ್.ಸುಬ್ರಹ್ಮಣ್ಯ ಹೇಳಿದರು.

ನಗರದ ಬೋಗಾದಿಯ ಮರಟಿಕ್ಯಾತನ ಹಳ್ಳಿ ಜನಸೇವಕ ಯುವ ಬ್ರಿಗೇಡ್ ವತಿಯಿಂದ ವಿಶ್ವ ತಂತ್ರಜ್ಞಾನದ ದಿನ ಹಾಗೂ ಬಸವ ಜಯಂತಿ ಅಂಗವಾಗಿ ಜುಬಿಲಿಯಂಟ್ ಕಾರ್ಖಾನೆಯ ಮಾನವ ಸಂಪನ್ಮೂಲ ವಿಭಾಗದ ಎಚ್.ಆರ್.ಸುಬ್ರಹ್ಮಣ್ಯ ಅವರನ್ನು ಸನ್ಮಾನಿಸಲಾಯಿತು.


ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ್ದ ಅನುಭವ ಮಂಟಪ ಎಲ್ಲ ಜಾತಿ ಜನಾಂಗದವರ ಪ್ರವೇಶಕ್ಕೆ ಸಮಾನ ಅವಕಾಶ ಕಲ್ಪಿಸಿತ್ತು. ಅಂದು ಶರಣರು ಬರೆದು ಚರ್ಚಿಸಿದ ವಚನಗಳು ಎಂದಿಗೂ ಪ್ರಸ್ತುತವಾಗಿರುತ್ತವೆ ಎಂದರು.

ಜನಸೇವಕ ಯುವ ಬ್ರಿಗೇಡ್ ಅಧ್ಯಕ್ಷ ಡಿ.ರಾಘವೇಂದ್ರ ಮಾತನಾಡಿ, ಬಸವಣ್ಣನವರ ವಚನ ಸಾಹಿತ್ಯ ಅತ್ಯಂತ ಸರಳವಾಗಿದ್ದು ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಡೆದರೆ ನಮ್ಮ ಜೀವನ ಸಾರ್ಥಕವಾಗುವುದು ಎಂದರು.

ಈ ವೇಳೆ ಪ್ರದೀಪ್‌ಕುಮಾರ್, ಮಂಜು, ಜುಬಿಲಿಯಂಟ್ ನೆಸ್ಲೆ ಕಾರ್ಖಾನೆಯ ಮಾನವ ಸಂಪನ್ಮೂಲ ಇಲಾಖೆ ನಿತಿನ್, ಕಾರ್ಖಾನೆಯ ಇಂಜಿನಿಯರಿಂಗ್ ವಿಭಾಗದ ರಾಘವೇಂದ್ರ, ಮಹೇಶ್ ಕುಮಾರ್, ಪರಮೇಶ್, ವಿಭಾಗದ ಪ್ರಶಾಂತ್, ಜ್ಯೋತಿ, ಅನಿತಾ, ದೀಪಕ್, ನಿತಿನ್, ಆದರ್ಶ್, ಸಂತೋಷ್, ರಾಚಪ್ಪ, ಹನುಮಂತಪ್ಪ, ಜಯಶ್ರೀ, ಮೂರ್ತಿ, ಮಹದೇವ್ ಇನ್ನಿತರರು ಉಪಸ್ಥಿತರಿದ್ದರು.

ಸತತ ಪರಿಶ್ರಮದಿಂದ ಯಶಸ್ಸು ಸಾಧ್ಯ

ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡ ಅಭಿಮತ



ಮೈಸೂರು, ಮೇ 13– ಸತತ ಪರಿಶ್ರಮ ಹಾಗೂ ಆತ್ಮಸ್ಥೈರ್ಯದಿಂದ ಬದುಕಿನಲ್ಲಿ ಸಾಧನೆಗೈಯ್ಯಲು ಸಾಧ್ಯವಾಗುತ್ತದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡ ಹೇಳಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಗೆ ಪ್ರಥಮ ಹಾಗೂ ರಾಜ್ಯಕ್ಕೆ 3ನೇ ಸ್ಥಾನ ಪಡೆದ ಕುಮಾರಿ ಡಿ.ಎಸ್. ಧ್ವನಿ ಅವರಿಗೆ ಶಾಸಕ ಹರೀಶ್‌ಗೌಡ ಹಾಗೂ ಪತ್ನಿ ಗೌರಿ ಅವರು, ಕೆ.ಜಿ.ಕೊಪ್ಪಲಿನ ಶಾಸಕರ ನಿವಾಸದಲ್ಲಿ ಸಿಹಿ ತಿನಿಸಿ ಸನ್ಮಾನಿಸಿ, ಶುಭ ಹಾರೈಸಿದರು.

ಅವರು ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಗರಿಷ್ಠ ಪ್ರಮಾಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಉಪಕ್ರಮಗಳನ್ನು ಅಳವಡಿಸಿಕೊಂಡಿರುವ ಪ್ರಯುಕ್ತ ಪ್ರತಿಯೊಂದು ಕ್ಷೇತ್ರದಲ್ಲಿಯೂ ದಕ್ಷತೆ ಮತ್ತು ನಿಖರತೆಯ ಪ್ರಮಾಣ ಹೆಚ್ಚಾಗಿರುತ್ತದೆ. ಆರೋಗ್ಯಕರ ಸಾಮಾಜಿಕ ವ್ಯವಸ್ಥೆಯನ್ನು ಬಲಗೊಳಿಸಲು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಮಾತ್ರ ಮಾನವ ಸಂಪನ್ಮೂಲವನ್ನು ನಿರ್ಧರಿಸುವ ಕಾರಣದಿಂದಾಗಿ ಇಂದಿನ ವಿದ್ಯಾರ್ಥಿಗಳು ನಿರಂತರ ಓದು, ಕರಾರುವಾಕ್ ಅಧ್ಯಯನ ಇತ್ಯಾದಿ ಕೌಶಲಗಳನ್ನು ಕಾಲಕ್ಕೆ ತಕ್ಕಂತೆ ಬೆಳೆಸಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಅವರ ತಂದೆ ಡಿ.ಪಿ.ಸುಧನ್ವ, ತಾಯಿ ಎನ್.ಎಸ್.ಕುಸುಮ ಹಾಜರಿದ್ದರು.



ಶಾಸಕರಾಗಿ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸೋಮವಾರ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರಿನ ನೂರೊಂದು ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಎನ್.ಪ್ರದೀಪ್‌ಕುಮಾರ್, ಕಿಶೋರ್, ಪ್ರಶಾಂತ್‌ಗೌಡ, ಜೋಗಿ ಮಂಜು, ರಾಕೇಶ್ ಗೌಡ, ಕೀರ್ತಿ, ಕೇಬಲ್ ಮಹೇಶ್, ಹೇಮಂತ್ ಇನ್ನಿತರರು ಉಪಸ್ಥಿತರಿದ್ದರು.

ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ ವಾರ್ಷಿಕೋತ್ಸವ

ಮೇ 16ರಿಂದ ಅಖಂಡ ಭಾಗವತ ಸಪ್ತಾಹ


ಮೈಸೂರು, ಮೇ 13– ಶ್ರೀರಾಂಪುರದಲ್ಲಿರುವ ಉತ್ತರಾದಿ ಮಠದ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ ವಾರ್ಷಿಕೋತ್ಸವದ ಪ್ರಯುಕ್ತ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಮೇ 16ರಿಂದ 22ರವರೆಗೆ ಕರ್ನಾಟಕದ ಸುಪ್ರಸಿದ್ಧ ವಿದ್ವಾಂಸರಾದ ಪಂಡಿತ್ ಶ್ರೀ ಬಾದರಾಯಣಾಚಾರ್ಯರಿಂದ ಅಖಂಡ ಭಾಗವತ ಸಪ್ತಾಹವನ್ನು ಏರ್ಪಡಿಸಲಾಗಿದೆ.

ಮೇ 16ರಂದು ಬೆಳಗ್ಗೆ 7.30ಕ್ಕೆ ಶಾಸ್ತ್ರೋಕ್ತವಾದ ಸಪ್ತಾಹ ಕ್ರಮದಲ್ಲಿ ಕಲಶಸ್ಥಾಪನೆ ನಂತರ ಬೆಳಗ್ಗೆ 8.30ರಿಂದ 11.30ರವರೆಗೆ ಹಾಗೂ ಮಧ್ಯಾಹ್ನ 3.30ರಿಂದ 6ರವರೆಗೆ ಭಾಗವತ ಉಪನ್ಯಾಸ ಆಯೋಜಿಸಲಾಗಿದೆ. ಮೇ 23ರಂದು ಗುರುವಾರ ವಾರ್ಷಿಕೋತ್ಸವದ ಪ್ರಯುಕ್ತ ಬೆಳಗ್ಗೆ 7.30ಕ್ಕೆ ಶ್ರೀ ವೆಂಕಟೇಶ್ವರ ದೇವರಿಗೆ ನಿರ್ಮಾಲ್ಯ ವಿಸರ್ಜನೆ ನಂತರ ಕಲಶಾಭಿಷೇಕ, ವಿಶೇಷ ಪಂಚಾಮೃತ ಅಭಿಷೇಕ, ನಾರಾಯಣ ಮಂತ್ರ ಮತ್ತು ಅಷ್ಟಾಕ್ಷರ ಮಹಾಮಂತ್ರದ ಹೋಮ ಶ್ರೀಮದ್ಭಾಗವತ ಮಂಗಳ ಮಹೋತ್ಸವ ನಡೆಯಲಿದೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಮಠದ ವ್ಯವಸ್ಥಾಪಕ ಪಂಡಿತ್ ಹೇಮಂತಾಚಾರ್ ಗುಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 8147205326 ಸಂಪರ್ಕಿಸಬಹುದು.

ಕೇರ್ಗಳ್ಳಿ ಬಳಿಯ ಕೆರೆಗೆ ಬೇಕಾಗಿದೆ

ತುರ್ತು ಕಾಯಕಲ್ಪ







"ಕೇರ್ಗಳ್ಳಿ ಬಳಿಯ ಕೆರೆಗೆ ಮಳೆ ನೀರು ಹರಿದು ಬರಲೆಂದು ನಿರ್ಮಿಸಿರುವ ಪೂರ್ಣಯ್ಯ (ರಾಜಕಾಲುವೆ) ನಾಲೆಯನ್ನು ಸ್ವಚ್ಛಗೊಳಿಸಿ ಕೆರೆಗೆ ಮಲೀನ ನೀರು ಹರಿದು ಬರುವುದನ್ನು ತಪ್ಪಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಮುಡಾ ಅಧಿಕಾರಿಗಳು ಇತ್ತ ಗಮನ ಹರಿಸಿ ಸಾರ್ವಜನಿಕರ ಹಿತ ದೃಷ್ಟಿಯಿಂದ ಪುನರುಜ್ಜೀವನಗೊಳಿಸಿ ಕೆರೆಯನ್ನು ಸಂರಕ್ಷಿಸಬೇಕೆಂದು ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಮೈಸೂರು, ಮೇ 13(ಆರ್‌ಕೆ)– ಕೇರ್ಗಳ್ಳಿಯ ಶ್ರೀ ಸಿದ್ಧರಾಮೇಶ್ವರ ದೇವಸ್ಥಾನ ಬಳಿಯ ಕೆರೆ ಕಲುಷಿತಗೊಂಡು, ನೀರು ಸಂಪೂರ್ಣ ಪಾಚಿ ಕಟ್ಟಿರುವುದರಿಂದ ಅಲ್ಲಿನ ವಾತಾವರಣ ದುರ್ವಾಸನೆ ಬೀರುತ್ತಿದ್ದು, ಜನಸಾಮಾನ್ಯರಿಗೆ ತೀವ್ರ ತೊಂದರೆ ಉಂಟಾಗಿದೆ.

ಅಲ್ಲಿನ ರಿಷಬ್ ಲೇಔಟ್ ಸಮೀಪವಿರುವ ಕೆರೆಗೆ ಮಳೆ ನೀರಿನ ಜೊತೆಗೆ ಸುತ್ತಮುತ್ತಲ ವಸತಿ ಬಡಾವಣೆಯ ಕಲುಷಿತ, ಒಳಚರಂಡಿ ನೀರು ಹರಿದು ಬಂದು ಸೇರುತ್ತಿರುವುದರಿಂದ ಕೆರೆಯ ನೀರು ಹಸಿರು ಪಾಚಿ ಕಟ್ಟಿಕೊಂಡು ಸೊಳ್ಳೆ, ಹಾವು, ಚೇಳುಗಳಂತಹ ವಿಷಜಂತುಗಳ ಆವಾಸ ತಾಣವಾಗಿದ್ದು ರೋಗ–ರುಜಿನಗಳು ಹರಡುತ್ತಿವೆ.

ಈ ಸಂಬಂಧ ಅಲ್ಲಿನ ನಿವಾಸಿಗಳು ಹಲವು ಬಾರಿ ದೂರು, ಮನವಿ ನೀಡಿದರೂ ಸ್ಥಳೀಯ ಸಂಸ್ಥೆ ಅಧಿಕಾರಿಗಳು ಗಮನಹರಿಸದ ಕಾರಣ, ಕೆರೆಯಲ್ಲಿ ಅನೈರ್ಮಲ್ಯ ಉಂಟಾಗಿದ್ದು, ಜನರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ.

ಇತ್ತೀಚೆಗೆ ಸುರಿದ ಮಳೆಯಿಂದ ಕೆರೆ ಭರ್ತಿಯಾಗಿದ್ದು, ಮತ್ತೆ ಮಳೆ ಬಂದರೆ ಕೋಡಿ ಒಡೆದು ಸುತ್ತಲಿನ ವಸತಿ ಬಡಾವಣೆಗಳ ಮನೆಗಳಿಗೆ ನೀರು ನುಗ್ಗುವ ಅಪಾಯವಿರುವುದರಿಂದ ಬೋಗಾದಿ ಪಟ್ಟಣ ಪಂಚಾಯ್ತಿ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳು ಇತ್ತ ಗಮನಹರಿಸಿ ಸಾರ್ವಜನಿಕರಿಂದ ಕೆರೆ ಅಭಿವೃದ್ಧಿಯೂ ಸೇರಿದಂತೆ ವಿವಿಧ ಸೇವೆಗಳಿಗೆ ಸಂಗ್ರಹಿಸುತ್ತಿರುವ ಶುಲ್ಕದ ಹಣದಲ್ಲಿ ಕೆರೆ ಸ್ವಚ್ಛಗೊಳಿಸಿ, ಶುದ್ಧ ನೀರು ಹರಿದು ಬರುವಂತೆ ವ್ಯವಸ್ಥೆ ಮಾಡಿ ವಾಯುವಿಹಾರಕ್ಕೆ ಮೂಲ ಸೌಕರ್ಯ ಕಲ್ಪಿಸಬೇಕೆಂದು ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಮುಡಾ ಅಧಿಕಾರಿಗಳು ಕೆರೆ ಸ್ವಚ್ಛಗೊಳಿಸಿದಲ್ಲಿ ಬೋಗಾದಿ ಪಟ್ಟಣ ಪಂಚಾಯಿತಿಯಿಂದ ಸೊಳ್ಳೆಗಳನ್ನು ನಾಶಪಡಿಸುವ ಮೀನುಗಳನ್ನು ಬಿಟ್ಟು ಬೆಳೆಸುವ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಮಿಕರ ದಿನಾಚರಣೆ: ಪೌರಕಾರ್ಮಿಕರಿಗೆ ಸನ್ಮಾನ



ಒಕ್ಕಲಿಗ ವುಮೆನ್ಸ್ ವೆಲ್ಫೇರ್ ವತಿಯಿಂದ ಕಾರ್ಮಿಕರ ದಿನಾಚರಣೆ ಅಂಗವಾಗಿ ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಸ್ವಚ್ಛತಾ ಸೇನಾನಿ, ಪೌರಕಾರ್ಮಿಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಮೇ 13–ಒಕ್ಕಲಿಗ ವುಮೆನ್ಸ್ ವೆಲ್ಫೇರ್ ವತಿಯಿಂದ ಕಾರ್ಮಿಕರ ದಿನಾಚರಣೆ ಅಂಗವಾಗಿ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಸ್ವಚ್ಛತಾ ಸೇನಾನಿ, ಪೌರಕಾರ್ಮಿಕರ ಸನ್ಮಾನಿಸಲಾಯಿತು.

ಈ ವೇಳೆ ಒಕ್ಕಲಿಗ ವುಮೆನ್ಸ್ ವೆಲ್ಫೇರ್ ಅಧ್ಯಕ್ಷೆ ಪದ್ಮಜಾ ಶ್ರೀನಿವಾಸ್ ಮಾತನಾಡಿ, ಮೈಸೂರು ಇಷ್ಟೊಂದು ಸ್ವಚ್ಛವಾಗಿರಲು ಕಾರಣ ಪೌರಕಾರ್ಮಿಕರು. ಗಾಳಿ, ಮಳೆ, ಬಿಸಿಲು, ಚಳಿ ಎನ್ನದೆ, ದಿನನಿತ್ಯ ಮುಂಜಾನೆಯಿಂದ ಸ್ವಚ್ಛತಾ ಕಾರ್ಯ ಕೈಗೊಳ್ಳುವ ಪೌರಕಾರ್ಮಿಕರು ನೈಜ ಕಾಯಕ ಯೋಗಿಗಳು, ಸ್ವಚ್ಛತಾ ರೂವಾರಿಗಳು. ಎಂತಹ ಪ್ರಕೃತಿ ಮಾರಕ ಸಂದರ್ಭದ ಸಂದಿಗ್ಧಸ್ಥಿತಿಯಲ್ಲಿಯೂ ತಮ್ಮ ಜೀವದ ಹಂಗನ್ನು ತೊರೆದು ಬಿಡುವಿಲ್ಲದ ನೈರ್ಮಲೀಕರಣ ಕಾರ್ಯ ಮಾಡಿದ್ದು ಶ್ಲಾಘನೀಯ ಎಂದರು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ ಮಾದೇಶ್, ಉಪಾಧ್ಯಕ್ಷರಾದ ನಳಿನಾ ಮಂಜು, ಗೌರವ ಅಧ್ಯಕ್ಷೆ ಜಯಲಕ್ಷ್ಮಿ, ಕಾರ್ಯದರ್ಶಿ ಶೋಭಾ ಮಂಜುನಾಥ್, ವನಿತಾ ರವಿ, ಖಜಾಂಚಿ ಭವ್ಯ ರಘು, ವಿಜಯ ಮಂಜು, ನಿರ್ದೇಶಕರಾದ ನವೀನ ರಂಗರಾಜ್, ಸುನಿತಾ, ಯಶೋಧ ಗೋಪಾಲಸ್ವಾಮಿ, ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಮೇ 19, ರಂಗಭೂಮಿ ಡಿಪ್ಲೊಮಾ ಪ್ರವೇಶ ಪ್ರಕ್ರಿಯೆ ಆರಂಭ

ಮೈಸೂರು, ಮೇ 13–ಮಂಡ್ಯ ರಮೇಶ್ ನೇತೃತ್ವದ ನಟನ ರಂಗಶಾಲೆಯು ಕಳೆದ ಅನೇಕ ವರ್ಷಗಳಿಂದ ರಂಗ ಭೂಮಿಯಲ್ಲಿ ನಿರಂತರ ಕ್ರಿಯಾಶೀಲವಾಗಿದ್ದು, ರಂಗಭೂಮಿಯ ಅಧ್ಯಯನ, ಪ್ರಾತ್ಯಕ್ಷಿಕೆ, ಪ್ರಯೋಗ, ಪ್ರದರ್ಶನಗಳ ಮೂಲಕ ಶ್ರೇಷ್ಠತೆಯನ್ನು ಸಾಧಿಸುವುದರತ್ತ ಸತತವಾಗಿ ಪ್ರಯತ್ನಶೀಲವಾಗಿದೆ.

ತನ್ನ ಚಟುವಟಿಕೆಯ ಭಾಗವಾಗಿ 16ರಿಂದ 32 ವರ್ಷದ ಒಳಗಿನ ಆಸಕ್ತ ಯುವಕ ಯುವತಿಯರಿಗೆ ಒಂದು ವರ್ಷದ ವಸತಿ ರಹಿತ ರಂಗಭೂಮಿ ಡಿಪ್ಲೊಮಾ ಕೋರ್ಸ್ ಅನ್ನು ನಡೆಸುತ್ತಿದ್ದು, ಕಳೆದ ಅನೇಕ ವರ್ಷಗಳಿಂದ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ವಿದ್ಯಾರ್ಥಿಗಳು ಆಗಮಿಸಿ ನಟನ ರಂಗಶಾಲೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ನಟನ ರಂಗಶಾಲೆಯಲ್ಲಿ ತರಬೇತಿ ಪಡೆದ ಸುಮಾರು 500ಕ್ಕೂ ಹೆಚ್ಚು ಕಲಾವಿದರು ದೇಶದಾದ್ಯಂತ ವಿವಿಧ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿದ್ದಾರೆ. 2024–25ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮತ್ತು ಅಭ್ಯರ್ಥಿಗಳ ಸಂದರ್ಶನ(ಆಡಿಷನ್) ಮೇ 19ರಂದು ಬೆಳಗ್ಗೆ 10 ಗಂಟೆಗೆ ಸರಿಯಾಗಿ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನೇರ ಸಂದರ್ಶನದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಮೇಲ್ಕಂಡ ದಿನಾಂಕದಂದೇ ಸಂದರ್ಶನದಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 7259537777, 948046 8327, 9845595505 ಸಂಪರ್ಕಿಸಬಹುದು.

ಪ್ರತಿದಿನ ಸಂಜೆ 5.30ರಿಂದ 9ರವರೆಗೆ ತರಗತಿಗಳು ನಡೆಯಲಿದ್ದು, ಅಭಿನಯ, ರಂಗ ಸಿದ್ಧಾಂತ, ರಂಗ ಸಂಗೀತ, ಆಂಗಿಕ ಚಲನೆ, ಧ್ವನಿ ಬಳಕೆ, ಪ್ರಸಾಧನ, ಬೆಳಕು, ರಂಗ ವಿನ್ಯಾಸ, ಪರಿಕರ ನಿರ್ಮಾಣ, ರಂಗ ಇತಿಹಾಸ, ನಾಟಕ ತಯಾರಿ, ಪ್ರದರ್ಶನ. ಹೀಗೆ ರಂಗಭೂಮಿಯ ಬೇರೆ ಬೇರೆ ಆಯಾಮಗಳ ಪರಿಚಯಾತ್ಮಕ ಪ್ರಾಯೋಗಿಕ ತರಗತಿಗಳು ನಡೆಯಲಿವೆ.

ಶಂಕರ ಜಯಂತಿ: ಭಕ್ತಾದಿಗಳಿಗೆ ಅನ್ನ ಸಂತರ್ಪಣೆ



ಮೈಸೂರು,ಮೇ 13–ಸುವರ್ಣ ಭಾರತಿ ಮಹೋತ್ಸವ ಹಾಗೂ ಶ್ರೀ ಶಂಕರ ಜಯಂತ್ಯುತ್ಸವದ ಸಂದರ್ಭದಲ್ಲಿ ಮೈಸೂರು ಶಂಕರ ಮಠದ ವತಿಯಿಂದ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ದಿವಾನ್ ಪೂರ್ಣಯ್ಯ ಛತ್ರದ ಎದುರು ಚಾಮುಂಡೇಶ್ವರಿ ದೇವಸ್ಥಾನದ ಹತ್ತಿರ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮೈಸೂರು ಶಂಕರ ಮಠದ ಧರ್ಮಾಧಿಕಾರಿಗಳಾದ ರಾಮಚಂದ್ರ ಮಾತನಾಡಿ, ಜಗದ್ಗುರುಗಳಾದ ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳು ಸನ್ಯಾಸ ಸ್ವೀಕರಿಸಿದ 50ನೇ ವರ್ಷದ ಸುವರ್ಣ ಮಹೋತ್ಸವದಲ್ಲಿ ಮಠದ ವತಿಯಿಂದ ಒಂದು ವರ್ಷ ಕಾಲ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮೊದಲನೆಯದಾಗಿ ಅನ್ನ ಸಂತರ್ಪಣೆ ಹಾಗೂ ಮುಂದಿನ ಮೇ 19ರಂದು ಉಚಿತ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಿದ್ದು, ಇದರ ಸದುಪಯೋಗವನ್ನು ಭಕ್ತಾದಿಗಳು ಹಾಗೂ ಸಾರ್ವಜನಿಕರು ಪಡೆದುಕೊಳ್ಳಬೇಕಾಗಿ ಕರೆ ನೀಡಿದರು.

ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಶಂಕರ್ ಮಠದ ವ್ಯವಸ್ಥಾಪಕ ಶೇಷಾದ್ರಿ ಭಟ್, ಸೇವ ಕರ್ತೃಗಳಾದ ಎಸ್.ರಂಗನಾಥ, ಹರೀಶ್, ಎಂ.ಆರ್.ಬಾಲಕೃಷ್ಣ, ಶ್ರೀನಾಥ್, ಜ್ಯೋತಿ, ಮೀನಾ, ಸಹನಾ, ಪಂತು, ಬಾಬು, ಸುಚೇಂದ್ರ ಇತರರಿದ್ದರು.



ಮೈಸೂರಿನ ಪ್ರತಿಭೆ ವೇದಿಕೆ ಹಮ್ಮಿಕೊಂಡಿದ್ದ ಶ್ರೀ ಶಂಕರಾಚಾರ್ಯರ ಜಯಂತಿಯಂದು ಶಂಕರಾಚಾರ್ಯರ ಕುರಿತು ಉಪನ್ಯಾಸವನ್ನು ನೀಡಿದ ಸಾಹಿತಿ ಡಾ.ಪ್ರದೀಪಕುಮಾರ ಹೆಬ್ರಿ ಅವರನ್ನು ಗೌರವಿಸಲಾಯಿತು. ಈ ವೇಳೆ ಮೂಗೂರು ಕರ್ನಾಟಕ ಬ್ರಾಹ್ಮಣ ಸಭಾದ ಅಧ್ಯಕ್ಷ ಎಂ.ವಿಶ್ವನಾಥಯ್ಯ, ಕಾಮಾಕ್ಷಿ ಆಸ್ಪತ್ರೆ ಪ್ರಧಾನ ವ್ಯವಸ್ಥಾಪಕ ಎಸ್.ವಿ.ಪ್ರಸನ್ನಕುಮಾರ್, ವೇದಿಕೆ ಅಧ್ಯಕ್ಷ ಎಸ್.ರಾಜರತ್ನಂ, ಉಪಾಧ್ಯಕ್ಷ ಎಸ್.ನಾಗೇಂದ್ರರಾವ್, ಕಾರ್ಯದರ್ಶಿ ಕೆ.ಇಂದುಮತಿ ಇದ್ದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಒಂದು ವರ್ಷ ಪೂರೈಸಿದ ಹಿನ್ನೆಲೆ; ಶಾಸಕ ಹರೀಶ್‌ಗೌಡರಿಂದ

ಮೈಸೂರಿನ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ

ಮೈಸೂರು, ಮೇ 13(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ಯಶಸ್ವಿಯಾಗಿ ಒಂದು ವರ್ಷ ಅಧಿಕಾರ ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರಿನ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಸೋಮವಾರ ವಿಶೇಷ ಪೂಜೆ ಸಲ್ಲಿಸಲಾಯಿತು.

ನಗರದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಉಪಸ್ಥಿತಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಚಂದ್ರಮೌಳೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದರು. ಇನ್ನು ನಾಲ್ಕು ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರ ಪೂರ್ಣಾವಧಿ ಅಧಿಕಾರ ಪೂರೈಸಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.



ಈ ವೇಳೆ ಮಾತನಾಡಿದ ಹರೀಶ್‌ಗೌಡ, ರಾಜ್ಯ ಕಾಂಗ್ರೆಸ್ ಸರ್ಕಾರ ಒಂದು ವರ್ಷ ಯಶಸ್ವಿಯಾಗಿ ಅಧಿಕಾರ ಪೂರೈಸಿದ್ದು, ನುಡಿದಂತೆ ನಡೆದಿದೆ. ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಪಂಚ ಗ್ಯಾರಂಟಿಗಳನ್ನು ಅನುಷ್ಠಾನ ಮಾಡಿದೆ. ಈ ಮೂಲಕ ಚುನಾವಣಾ ಪೂರ್ವದಲ್ಲಿ ಜನರಿಗೆ ನೀಡಿದ್ದ ಭರವಸೆಯನ್ನು ಈಡೇರಿಸಿದೆ ಎಂದರು.

ಚಾಮರಾಜ ಕ್ಷೇತ್ರದಲ್ಲಿ ಒಂದೇ ವರ್ಷದಲ್ಲಿ ಕಾಂಗ್ರೆಸ್ ಸರ್ಕಾರ 800 ಕೋಟಿ ರೂ. ವಿವಿಧ ಯೋಜನೆಗಳಿಗೆ ಚಾಲನೆ ನೀಡಿದೆ. ಮಹಾರಾಣಿ ಕಾಲೇಜಿನ ಹಾಸ್ಟೆಲ್, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ, ನ್ಯೂರಾಲಜಿ ಘಟಕ ಸೇರಿದಂತೆ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ ಎಂದರು.

ಚಾಮರಾಜ ಕ್ಷೇತ್ರದ ಒಳಚರಂಡಿ ಯೋಜನೆಗೆ ಸರ್ಕಾರ 48 ಕೋಟಿ ರೂ.ನೀಡಿದೆ. ರಸ್ತೆ, ಕುಡಿಯುವ ನೀರು ಸೇರಿದಂತೆ ಇತರೆ ಮೂಲ ಸೌಕರ್ಯಕ್ಕೆ ಪ್ರತ್ಯೇಕವಾಗಿ 25 ಕೋಟಿ ರೂ. ನೀಡಿದೆ ಎಂದು ಹೇಳಿದರು.

"ಇನ್ನು ನಾಲ್ಕು ವರ್ಷದ ಅಧಿಕಾರಾವಧಿಯಲ್ಲಿ ಬಹಳಷ್ಟು ಯೋಜನೆಗಳನ್ನು ಜಾರಿಗೊಳಿಸಲಾಗುವುದು. ಚುನಾವಣಾ ಪೂರ್ವದಲ್ಲಿ ಕ್ಷೇತ್ರದ ಮತದಾರರಿಗೆ ನಾನು ನೀಡಿದ್ದ ಭರವಸೆಗಳನ್ನು ಈಡೇರಿಸುತ್ತೇನೆ. **–ಕೆ.ಹರೀಶ್‌ಗೌಡ, ಶಾಸಕ**

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್ ಪುಷ್ಪಲತಾ, ಚಿಕ್ಕಣ್ಣ, ಮಾಜಿ ಕಾರ್ಪೋರೇಟರ್ ಶಿವಣ್ಣ, ಕಾಂಗ್ರೆಸ್ ಮುಖಂಡ ದಿನೇಶ್ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು. ಕಾಂಗ್ರೆಸ್ ಸರ್ಕಾರ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಸಿಹಿ ಹಾಗೂ ಉಪಾಹಾರ ವಿತರಿಸಿ, ಸಂಭ್ರಮ ಹಂಚಿಕೊಳ್ಳಲಾಯಿತು.

ನಿಷೇಧಾಜ್ಞೆ ಜಾರಿ

ಮೈಸೂರು, ಮೇ 13–2023–24ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ಅಥವಾ ತತ್ಸಮಾನ ವೃಂದದ ನಿರ್ದಿಷ್ಟಪಡಿಸಲಾದ ಹುದ್ದೆಗಳಿಗೆ ಮೇ 14ರಿಂದ 16ರವರೆಗೆ ವಸಂತ ಮಹಲ್‌ನಲ್ಲಿರುವ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಲಿಖಿತ ಪರೀಕ್ಷೆ ನಡೆಯಲಿರುವುದರಿಂದ ಬೆಳಗ್ಗೆ 6 ರಿಂದ ಸಂಜೆ 6ರವರೆಗೆ ಪರೀಕ್ಷಾ ಕೇಂದ್ರದ ಸುತ್ತಲೂ ಕಲಂ 144 ಸಿ.ಆರ್.ಪಿ.ಸಿ. ರೀತ್ಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಈ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್, ಸೈಬರ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಪೊಲೀಸ್ ಆಯುಕ್ತ ರಮೇಶ್.ಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಮಂಗಳವಾರ 14 ಮೇ 2024

ಮಳವಳ್ಳಿಯಲ್ಲಿ ಡಿಕೆಶಿ, ಶಿವರಾಮೇಗೌಡ ವಿರುದ್ಧ ಜೆಡಿಎಸ್ ಪ್ರತಿಭಟನೆ

ಮಳವಳ್ಳಿ,ಮೇ13–ಪೆನ್‌ಡ್ರೈವ್ ಹರಿಬಿಡುವ ಮೂಲಕ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬ ಹಾಗೂ ಜೆಡಿಎಸ್ ವಿರುದ್ಧ ಕಾಂಗ್ರೆಸ್ ಪಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಹುನ್ನಾರ ನಡೆಸಿದ್ದಾರೆಂದು ಆರೋಪಿಸಿ ತಾಲೂಕು ಜೆಡಿಎಸ್ ವತಿಯಿಂದ ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.



ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಂಸದ ಶಿವರಾಮೇಗೌಡರ ವಿರುದ್ಧ ಮಳವಳ್ಳಿಯಲ್ಲಿ ಜೆಡಿಎಸ್ ಪ್ರತಿಭಟನೆ ನಡೆಸಿತು.

ಪಟ್ಟಣದ ಅನಂತ್‌ರಾಂ ವೃತ್ತದಲ್ಲಿ ಜೆಡಿಎಸ್ ವತಿಯಿಂದ ಕಾಂಗ್ರೆಸ್ ಸರ್ಕಾರ, ಡಿಕೆಶಿ ಹಾಗೂ ಎಲ್‌ಆರ್‌ಎಸ್ ವಿರುದ್ಧ ಘೋಷಣೆ ಕೂಗಿ, ಇಬ್ಬರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಜನ ಜಾನುವಾರುಗಳಿಗೆ ಕುಡಿಯಲು ನೀರಿಲ್ಲ, ಕೃಷಿಗೆ ನೀರು ಬಿಡಲು ಯೋಗ್ಯತೆ ಇಲ್ಲದ ಸರ್ಕಾರ ಪೆನ್‌ಡ್ರೈವ್ ವಿಚಾರ ಎತ್ತಿಕೊಂಡು ಜನರ ದಿಕ್ಕು ತಪ್ಪಿಸಲು ಹೊರಟಿದೆ. ಮೇಕೆದಾಟು ಡ್ಯಾಂ ಕಟ್ಟಿಸಿ, ಮಳವಳ್ಳಿ, ಕನಕಪುರ ಗ್ರಾಮಾಂತರ ಪ್ರದೇಶಗಳಿಗೆ ನೀರು, ಬೆಂಗಳೂರಿಗರಿಗೆ ಕುಡಿಯಲು ನೀರು ಕೊಡುವುದನ್ನು ಕಲಿಯಬೇಕು. ಲಕ್ಷಾಂತರ ಪೆನ್‌ಡ್ರೈವ್ ಹಂಚಿದರೂ ದೇವೇಗೌಡರ ಕೂದಲೂ ಅಲುಗಾಡಿಸಲು ಸಾಧ್ಯವಿಲ್ಲ ಎಂದು ಕಿಡಿಕಾರಿದರು.

ಹೆಚ್.ಡಿ.ರೇವಣ್ಣ ವಿರುದ್ಧ ಮಹಿಳೆಯ ಕಿಡ್ನಾಪ್ ಕೇಸ್ ಹಾಕಿ ದೇವೇಗೌಡರ ಕುಟುಂಬವನ್ನು ಜೈಲಿಗಟ್ಟುವ ದುರುದ್ದೇಶದಿಂದ ಕಾಂಗ್ರೆಸ್ ಹುನ್ನಾರ ನಡೆಸಿದೆ. ಆದರೆ ಮಹಿಳೆ ಸತ್ಯವನ್ನು ಹೇಳಿದ್ದಾರೆ, ಸತ್ಯವನ್ನು ಹೇಳಿದ ವಕೀಲ ದೇವರಾಜೇಗೌಡರನ್ನು ಕೂಡ ಹುನ್ನಾರದಿಂದ ಬಂಧಿಸಲಾಗಿದೆ. ಶಿವರಾಮೇಗೌಡನಂತಹ ಕೆಟ್ಟ ರಾಜಕಾರಣಿಯನ್ನು ಜೊತೆ ಯಲ್ಲಿಟ್ಟುಕೊಂಡು ದೇವೇಗೌಡರು, ಕುಮಾರಸ್ವಾಮಿ ಅವರ ಹೆಸರಿಗೆ ಮಸಿ ಬಳಿಯಲು ಮುಂದಾದ ಡಿಕೆಶಿ ರಾಜಕೀಯ ಮಾಡಲು ಅನರ್ಹ ಎಂದು ಟೀಕಿಸಿದರು.

ಜೆಡಿಎಸ್ ಯುವ ಘಟಕದ ಜಿಲ್ಲಾಧ್ಯಕ್ಷ ಕಂಸಾಗರ ರವಿ ಮಾತನಾಡಿ, ಹಿರಿಯ ರಾಜಕಾರಣಿ ಮಾಜಿ ಪ್ರಧಾನಿ ದೇವೇಗೌಡರ ರಾಜಕೀಯ ಜೀವನಕ್ಕೆ ಮಸಿ ಬಳಿಯಲು ಕಾಂಗ್ರೆಸ್ ಸರ್ಕಾರ ಹುನ್ನಾರ ನಡೆಸುತ್ತಿರುವುದು ಜನರಿಗೆ ಅರ್ಥವಾಗುತ್ತದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜನರೇ ಬುದ್ಧಿ ಕಲಿಸಲಿದ್ದಾರೆ, ಅಧಿಕಾರದ ಲಾಭ ಪಡೆದು ಬಾಯಿಗೆ ಬಂದಂತೆ ಮಾತನಾಡಿರುವ ಶಿವರಾಮೇಗೌಡರ ನಡೆಯನ್ನು ಖಂಡಿಸುತ್ತೇವೆಂದು ಹೇಳಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಘಟಕದ ಅಧ್ಯಕ್ಷ ವಿಶ್ವನಾಥ್, ಮುಖಂಡರಾದ ನಂದಕುಮಾರ್, ಮಲ್ಲೇಗೌಡ, ಜಯರಾಂ, ಚಂದಹಳ್ಳಿ ಶ್ರೀಧರ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಮೇಲುಕೋಟೆ ವೈಭವದ ದಶಾವತಾರ ಉತ್ಸವ

ಮೇಲುಕೋಟೆ: ಶ್ರೀ ಚೆಲುವ ನಾರಾಯಣಸ್ವಾಮಿಯವರ ದಶಾವತಾರ ಉತ್ಸವ ಭಾನುವಾರ ಮಧ್ಯರಾತ್ರಿ ನೆರವೇರಿತು. ತಡರಾತ್ರಿಯಾದರೂ ಸಾವಿರಾರು ಭಕ್ತರು ಕಾದಿದ್ದು ಸ್ವಾಮಿಯ ದಶಾವತಾರದ ವೈಭವವನ್ನು ಕಣ್ತುಂಬಿಕೊಂಡರು

ತಿರು ನಕ್ಷತ್ರ ಮಹೋತ್ಸವದಂದು ರಾಮಾನುಜಾಚಾರ್ಯರಿಗೆ ಶ್ರೀಚೆಲುವ ನಾರಾಯಣಸ್ವಾಮಿ ದಶಾವತಾರದರ್ಶನ ನೀಡಿದ ಪ್ರತೀಕವಾಗಿ ಜಯಂತ್ಯುತ್ಸವ ದಿನ ರಾತ್ರಿ ಉತ್ಸವ ನಡೆಯಿತು. ರಾತ್ರಿ 12–30 ಕ್ಕೆ ಆರಂಭವಾದ ಉತ್ಸವ 2–30ರ ತನಕ ಸುಶ್ರಾವ್ಯ ಮಂಗಳವಾದ್ಯದೊಂದಿಗೆ ವೈಭವದಿಂದ ನೆರವೇರಿತು. ಬಲರಾಮ ಸಾಕ್ಷಾತ್ ರಾಮಾನುಜರೇ ಆದ ಕಾರಣ ಉಳಿದ ಅವತಾರಗಳಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ ಪರುಶುರಾಮ, ಶ್ರೀರಾಮ, ಕೃಷ್ಣಾವತಾರದ ಕಪಾಯಿಗಳು ಮತ್ತು ಕುಲಾವಿಗಳನ್ನು ಅಲಂಕಾರ ಮಾಡಿ ದೇವಾಲಯದ ಹೊರಪ್ರಾಕಾರದಲ್ಲಿ ಉತ್ಸವ ನೆರವೇರಿಸಲಾಯಿತು. ಕೊನೆಯಲ್ಲಿ ಚೆಲುವ ನಾರಾಯಣಸ್ವಾಮಿಗೆ ಪುಷ್ಪಕೈಂಕರ್ಯ ಸೇವೆಯೊಂದಿಗೆ ದಶಾವತಾರ ಉತ್ಸವ ಸಂಪನ್ನಗೊಂಡಿತು.

ಇದಕ್ಕೂ ಮುನ್ನ ರಾತ್ರಿ 8ಗಂಟೆಗೆ ರಾಮಾನುಜಾಚಾರ್ಯರಿಗೆ ಶ್ರೀಗಂಧದ ಅಲಂಕಾರದೊಂದಿಗೆ ಬೆಳ್ಳಿ ಪಲ್ಲಕ್ಕಿಯಲ್ಲಿ ಸೀತಾರಣ್ಯ ಸನ್ನಿಧಿಗೆ ಉತ್ಸವ ನೆರವೇರಿತು. ನಂತರ ದೇಶಿಕರ ಸನ್ನಿಧಿಗೆ ಮತ್ತು ಮನವಾಳಮಾಮುನಿ ಜೀಯರ್ ಸನ್ನಿಧಿಗೆ ಆಚಾರ್ಯರ ಉತ್ಸವ ನೆರವೇರಿತು. ದಶಾವತಾರದ ನಂತರ ರಾತ್ರಿ 2–30ಕ್ಕೆ ಪ್ರಾರಂಭವಾದ ಮಹಾಶಾತ್ತುಮೊರೆಯ ಕಾರ್ಯಕ್ರಮಗಳು ಸೋಮವಾರ ಬೆಳಗಿನ 6ಗಂಟೆಗೆ ಮುಕ್ತಾಯವಾದವು. ಮೇ2ರಿಂದ ಆರಂಭವಾದ ರಾಮಾನುಜರ ತಿರು ನಕ್ಷತ್ರದ ಕಾರ್ಯಕ್ರಮಗಳು ಅತ್ಯಂತ ವೈಭವ ಮತ್ತು ಶ್ರದ್ಧಾಭಕ್ತಿಯಿಂದ ಹತ್ತು ದಿನಗಳ ಕಾಲ ನೆರವೇರುವುದರೊಂದಿಗೆ ಮುಕ್ತಾಯವಾದವು.



ಶ್ರೀ ಚೆಲುವನಾರಾಯಣಸ್ವಾಮಿಯ ದಶಾವತಾರ ಉತ್ಸವ ವೈಭವದಿಂದ ನೆರವೇರಿತು

ಟಿ.ಎಸ್.ಪುಟ್ಟಲಿಂಗಮ್ಮ ನಿಧನ

ಭಾರತೀನಗರ,ಮೇ13– ಮನ್ಮುಲ್ ಮಾಜಿ ಅಧ್ಯಕ್ಷ ಕಾರ್ಕಹಳ್ಳಿ ಬಸವೇಗೌಡ ಅವರ ಪತ್ನಿ ಟಿ.ಎಸ್.ಪುಟ್ಟಲಿಂಗಮ್ಮ(67) ಅವರು ಸೋಮವಾರ ಸಂಜೆ ಮೃತಪಟ್ಟಿದ್ದಾರೆ. ಮೃತರು ಪುತ್ರರಾದ ದಂತವೈದ್ಯ ಡಾ.ಶರತ್‌ಬಾಬು, ಕಾಂಗ್ರೆಸ್ ಮುಖಂಡ ಸ್ವರೂಪ್‌ಚಂದ್ರ ಹಾಗೂ ಪುತ್ರಿಯರಾದ ಡಾ.ಶಶಿ, ಶ್ವೇತಾ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.



ಮೃತರ ಅಂತ್ಯಕ್ರಿಯೆ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಅವರ ಸ್ವಗ್ರಾಮವಾದ ಕಾರ್ಕಹಳ್ಳಿ ಗ್ರಾಮದ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸಂತಾಪ: ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಶಾಸಕರಾದ ಮಧು.ಜಿ.ಮಾದೇಗೌಡ, ರಮೇಶ್‌ಬಾಬು ಬಂಡಿಸಿದ್ದೇಗೌಡ, ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು ಸೇರಿದಂತೆ ಹಲವರು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಅಪಘಾತದಲ್ಲಿ ಮೃತಪಟ್ಟ ಕಿರುತೆರೆ ನಟಿ ಪವಿತ್ರ ಜಯರಾಂ ಅಂತ್ಯಕ್ರಿಯೆ



ಮಂಡ್ಯ: ಆಂಧ್ರಪ್ರದೇಶದ ಕರ್ನೂಲು ಬಳಿ ಕಾರು ಅಪಘಾತಕ್ಕೊಳಗಾಗಿ ಭಾನುವಾರ ಸಾವನ್ನಪ್ಪಿದ್ದ ಕನ್ನಡ ಹಾಗೂ ತೆಲುಗಿನ ಖ್ಯಾತ ಕಿರುತೆರೆ ನಟಿ ಪವಿತ್ರ ಜಯರಾಂ ಅಂತ್ಯಕ್ರಿಯೆ ತಾಲ್ಲೂಕಿನ ಉಮ್ಮಡಹಳ್ಳಿಯಲ್ಲಿ ನಡೆಯಿತು.

ಮೂಲತಃ ಮಂಡ್ಯ ತಾಲೂಕಿನ ಉಮ್ಮಡಹಳ್ಳಿ ಗ್ರಾಮದ ಪವಿತ್ರ, ತೆಲುಗು ಹಾಗೂ ಕನ್ನಡದಲ್ಲಿ ಹಲವು ಧಾರಾವಾಹಿಗಳಲ್ಲಿ ನಟಿಸಿದ್ದರು. ಶೂಟಿಂಗ್‌ಗಾಗಿ ಬೆಂಗಳೂರಿನಿಂದ ಹೈದರಾಬಾದ್‌ಗೆ ತೆರಳುತ್ತಿದ್ದ ವೇಳೆ ಕರ್ನೂಲು ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ಆಘಾತಕ್ಕೊಳಗಾಗಿ ಬ್ರೈನ್ ಸ್ಟ್ರೋಕ್‌ನಿಂದ ನಿನ್ನೆ ಸಾವನ್ನಪ್ಪಿದ್ದರು.

ಪಾರ್ಥಿವ ಶರೀರವನ್ನು ಗ್ರಾಮಕ್ಕೆ ತರುತ್ತಲೇ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಪತ್ನಿಯನ್ನು ಕಳೆದುಕೊಂಡ ಪತಿ ಶಿವಕುಮಾರ್, ತಾಯಿಯನ್ನು ಕಳೆದುಕೊಂಡ ಮಕ್ಕಳಾದ ಪ್ರತಿಕ್ಷಾ, ಪ್ರಜ್ವಲ್ ಸೇರಿದಂತೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಪವಿತ್ರ ಜಮೀನಿನಲ್ಲೇ ಅಂತ್ಯಕ್ರಿಯೆ ನೆರವೇರಿತು.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ: ತಾಲೂಕಿನ ಕಸಲಗೆರೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಇರುವುದರಿಂದ ಕಸಲಗೆರೆ, ನಾಗನಹಳ್ಳಿ, ಬಿಂಡೇನಹಳ್ಳಿ, ಐಪಿ ಹಾಗೂ ಮಾವಿನಕೆರೆ, ಹಂಚಿಪುರ, ಐ.ಪಿ. 11 ಕೆ.ವಿ ಮಾರ್ಗಗಳಿಗೆ ಒಳಪಡುವ ಭೀಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿ ಹಾಗೂ ದೇವಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿ ಗ್ರಾಮಗಳಿಗೆ ಬೆಳಿಗ್ಗೆ 9:00ಯಿಂದ ಸಂಜೆ 6:00 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಚೆಸ್ಕಾಂ ಸಹಾಯಕ ಕಾರ್ಯ ಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ಸಾಲಬಾಧೆ: ರೈತ ನೇಣಿಗೆ ಶರಣು

ಕೆ.ಆರ್.ಪೇಟೆ: ಸಾಲಬಾಧೆಯಿಂದ ಮನನೊಂದ ರೈತನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಸೋಮನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಸೋಮನಹಳ್ಳಿ ಗ್ರಾಮದ ನಿವಾಸಿ ರೇವಣ್ಣ (60) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿಯಾಗಿದ್ದು, ಇವರು 1 ಎಕರೆ ಜಮೀನು ಹೊಂದಿದ್ದಾರೆ. ಸಾಲ ಮಾಡಿ ಒಂದು ತಿಂಗಳ ಹಿಂದೆ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿ ನೀರು ಬಾರದ ಕಾರಣ ಮನನೊಂದಿದ್ದರು. ಇವರು ಕೈಸಾಲ, ಧರ್ಮಸ್ಥಳ ಸಂಘದಲ್ಲಿ ಸಾಲ, ಸೊಸೈಟಿಯಲ್ಲಿ ಸಾಲ ಮಾಡಿದ್ದರು. ಸಾಲಕ್ಕೆ ಹೆದರಿ ಜಮೀನಿನ ಬಳಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಮಗ ಎಸ್.ಆರ್. ಸಂತೋಷ್ ನೀಡಿದ ದೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ನಾಗಮಂಗಲದಲ್ಲಿ ಶ್ರೀ ಶಂಕರ ಜಯಂತಿ



ನಾಗಮಂಗಲ,ಮೇ13– ಸ್ಥಳೀಯ ಬ್ರಾಹ್ಮಣ ಸಮಾಜದಿಂದ ಏರ್ಪಡಿಸಿದ್ದ ನಾಲ್ಕು ದಿನಗಳ ಆದಿಗುರು ಶ್ರೀ ಶಂಕರ ಜಯಂತಿ ಕಾರ್ಯಕ್ರಮ ಭಾನುವಾರ ಸಂಪನ್ನಗೊಂಡಿತು.

ಮೇ 9ರಿಂದ ಶ್ರೀ ಶಂಕರರಿಗೆ ರುದ್ರ ಪಠಣ ವೇದೋಪನಿಷತ್ ಮತ್ತು ಲಘುನ್ಯಾಸದೊಂದಿಗೆ ಪ್ರತಿದಿನ ಗುರುಗಳಿಗೆ ಅಭಿಷೇಕವನ್ನು ನೆರವೇರಿಸಲಾಯಿತು. ದಿನನಿತ್ಯ ಸಂಜೆ ಆಚಾರ ವಿರಚಿತ ಶ್ರೀ ಸೌಂದರ್ಯ ಲಹರಿಯನ್ನು ಬ್ರಾಹ್ಮಣ ಸುವಾಸಿನಿಯರಿಂದ ಏರ್ಪಡಿಸಲಾಗಿತ್ತು ನಂತರ ಮದುಸೂದನ್ ಅಡಿಗರವರಿಂದ ಶ್ರೀ ಗುರು ಸೇವಾ ಸಮಿತಿ ಮತ್ತು ಅದ್ವೈತ ಪ್ರತಿಷ್ಠಾನದ ಸಹಯೋಗದಲ್ಲಿ ಪ್ರಶ್ನೋತ್ತರ ಮಾಲಿಕೆ ಮತ್ತು ಪ್ರವಚನವನ್ನು ಏರ್ಪಡಿಸಲಾಗಿತ್ತು..

ಭಾನುವಾರ ಶ್ರೀ ಶಂಕರಾಚಾರ್ಯರಿಗೆ ಅಬಿಷೇಕ ಮಾಡಿ ನಂತರ ವಿವಿಧ ಹೂವುಗಳಿಂದ ಅಲಂಕರಿಸಿ ವೇದ ಪಾರಾಯಣದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯದೊಂದಿಗೆ ಮೆರವಣಿಗೆ ಮಾಡಲಾಯಿತು. ನಂತರ ಮಂಡ್ಯದ ವೇದ ವಿದ್ವಾಂಸ ಶ್ರೀ ಪ್ರಕಾಶ್ ಭಟ್‌ರವರ ಮಾರ್ಗದರ್ಶನದಲ್ಲಿ ನವಗ್ರಹ ಪುರಸ್ಸರ ಹೋಮ, ಮೃತ್ಯುಂಜಯ ಹೋಮ, ಮೇದ ಸೂಕ್ತ ಹೋಮವನ್ನು ಏರ್ಪಡಿಸಲಾಗಿತ್ತು. ನಂತರ ಶ್ರೀ ಶಂಕರರಿಗೆ ಮಹಾಮಂಗಳಾರತಿಯೊಂದಿಗೆ ಬ್ರಾಹ್ಮಣ ಸುವಾಸಿನಿಯರಿಗೆ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಸಂಜೆ ಸಂಸ್ಕೃತ ವಿದ್ವಾಂಸ ಶ್ರೀ ಬಾಸ್ಕರ್ ಭಟ್‌ರವರಿಂದ ಭಜಗೋವಿಂದಮ್ ಗೀತೆಯ ವ್ಯಾಖ್ಯಾನ ಮತ್ತು ಉಪನ್ಯಾಸವನ್ನು ಏರ್ಪಡಿಸಲಾಗಿತ್ತು


ಅರವಿಂದ್

ಪಾಂಡವಪುರ, ಮೇ 13 – ಪಾಂಡವಪುರ ಪಟ್ಟಣದ ಹಳೇ ಬಸ್ ನಿಲ್ದಾಣದ ಬಳಿಯ ನಿವಾಸಿ ಸೀತಾರಾಮರಾವ್ ಅವರ ಪುತ್ರ ಮೈಸೂರು ವಿಭಾಗದ ಬೌದ್ಧಿಕ್ ಪ್ರಮುಖ್‌ರಾದ ಅರವಿಂದ್(45) ಹೃದಯಾಘಾತದಿಂದ ನಿಧನ ಹೊಂದಿದರು. ಮೈಸೂರು ವಿಭಾಗದ ಬೌದ್ಧಿಕ್ ಪ್ರಮುಖರಾಗಿದ್ದ ಇವರು ತಂದೆ, ತಾಯಿ, ಇಬ್ಬರು ಸಹೋದರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಪಾಂಡವಪುರ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸುಬ್ಬೇಗೌಡ

ಕೆಆರ್.ಪೇಟೆ, ಮೇ 13 –ತಾಲೂಕಿನ ಕಸಬಾ ಹೋಬಳಿ ಚೌಡೇನಹಳ್ಳಿ ಗ್ರಾಮದ ಪ್ರಗತಿಪರ ರೈತ ಸುಬ್ಬೇಗೌಡ(62) ಇಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಸಹೋದರರಾದ ಬೆಳ್ಳೇಕೆರೆ ಗ್ರಾಪಂ ಮಾಜಿ ಅಧ್ಯಕ್ಷ ಸಿ.ಆರ್. ನಾಗರಾಜು, ನಿವೃತ್ತ ಶಿಕ್ಷಕ ಸಿ.ಆರ್.ರಾಮಕೃಷ್ಣೇಗೌಡ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚೌಡೇನಹಳ್ಳಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.



ಮಹಿಳೆಗೆ ವಂಚನೆ; ಪ್ರಶ್ನಿಸಿದ್ದಕ್ಕೆ ಹಲ್ಲೆ ಆರೋಪಿಗೆ ನಾಲ್ಕು ವರ್ಷ ಸಜೆ

ಮೈಸೂರು, ಮೇ 13(ಎಸ್‌ಪಿಎನ್)– ಮಹಿಳೆಗೆ ವಂಚಿಸಿ, ಅದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ ಮಾಡಿದ ಆರೋಪಿಗೆ ಮೈಸೂರಿನ ಒಂದನೇ ಅಧಿಕ ಸಿಜೆಎಂ ನ್ಯಾಯಾಲಯ ನಾಲ್ಕು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಮೈಸೂರು ತಿಲಕ್‌ನಗರದ ನಿವಾಸಿ ಮಹೇಶ್ ಶಿಕ್ಷೆಗೆ ಗುರಿಯಾದವ. ಈತ ಮಂಡಿ ಮೊಹಲ್ಲಾದ ನಿವಾಸಿ ನಾಗರತ್ನ ಅವರ ಮನೆಯನ್ನು 7 ಲಕ್ಷ ರೂ.ಗೆ ಅಡವಾನ ಮಾಡಿಸಿ ಜಮೀನು ಖರೀದಿಸಿ ಕೊಡುವುದಾಗಿ ನಂಬಿಸಿ ಒಟ್ಟು 12 ಲಕ್ಷ ರೂ. ಹಣ ಪಡೆದಿದ್ದರು.

ಈ ಬಗ್ಗೆ ಕಳೆದ 2016 ರ ಮೇ 13 ರಂದು ಮೈಸೂರು ಪಶ್ಚಿಮ ಉಪ ನೋಂದಣಾಧಿಕಾರಿಗಳ ಕಚೇರಿ ಬಳಿ ಮಹೇಶ್‌ನನ್ನು ಪ್ರಶ್ನಿಸಿದ್ದಕ್ಕೆ, ನಾಗರತ್ನರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದನು. ಈ ಸಂಬಂಧ ನಾಗರತ್ನ ನೀಡಿದ ದೂರಿನ ಮೇರೆಗೆ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು.

ನಂತರ ಆರೋಪಿ ಮಹೇಶ್ ವಿರುದ್ಧ ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಈ ಪ್ರಕರಣ ಕುರಿತು ವಿಚಾರಣೆ ನಡೆಸಿದ ನ್ಯಾಯಾಧೀಶೆ ಎ.ಜಿ.ಶಿಲ್ಪ, ಮಹೇಶ್ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ 4 ವರ್ಷ ಶಿಕ್ಷೆಯೊಂದಿಗೆ 33 ಸಾವಿರ ದಂಡ ವಿಧಿಸಿದ್ದು, ಜತೆಗೆ ವಂಚಿಸಿದ 12 ಲಕ್ಷ ರೂ. ನೀಡುವಂತೆ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ಹೆಚ್.ಡಿ.ಕೋಟೆಯಲ್ಲಿ ಯಶಸ್ವಿ ರಕ್ತದಾನ ಶಿಬಿರ



ಹೆಚ್.ಡಿ.ಕೋಟೆ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ನಡೆಯಿತು.

ಹೆಚ್.ಡಿ.ಕೋಟೆ, ಮೇ 13– ರಕ್ತದಾನ ಮಾಡುವುದರಿಂದ ಮತ್ತೊಂದು ಜೀವ ಉಳಿಸಬಹುದು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ತಿಳಿಸಿದರು.

ಪಟ್ಟಣದ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸರಗೂರು, ರಕ್ತನಿಧಿ ಕೇಂದ್ರ ಕೆ.ಆರ್.ಆಸ್ಪತ್ರೆ ಮೈಸೂರು, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹೆಚ್.ಡಿ.ಕೋಟೆ, ರೋಟರಿ ಸಂಸ್ಥೆ ಹೆಚ್.ಡಿ.ಕೋಟೆ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹೆಚ್.ಡಿ.ಕೋಟೆ ಸಹಯೋಗದೊಂದಿಗೆ ನಡೆದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ರಕ್ತದಾನ ಮಾಡುವುದರಿಂದ ಸಂಕಷ್ಟದಲ್ಲಿರುವ ಮತ್ತೊಂದು ಜೀವಕ್ಕೆ ನೆರವಾಗುವ ಜೊತೆಗೆ ನಾವು ಕೂಡ ಆರೋಗ್ಯವಾಗಿರಬಹುದು. ಹೀಗಾಗಿ ಪ್ರತಿಯೊಬ್ಬರೂ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿ ಎಂದರು. ಇದೇ ವೇಳೆ ಶಿಬಿರದಲ್ಲಿ 50ಕ್ಕೂ ಮಂದಿ ರಕ್ತದಾನ ಮಾಡಿದರು.

ಈ ವೇಳೆ ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಸೋಮಣ್ಣ, ರಕ್ತನಿಧಿ ಕೇಂದ್ರದ ಅಧಿಕಾರಿ ಡಾ.ಕುಸುಮ, ರೋಟರಿ ಸಂಸ್ಥೆ ಅಧ್ಯಕ್ಷ ಗಂಗಾಧರ್, ಪುರಸಭೆ ಸದಸ್ಯ ನಾಗರಾಜು, ಐಟಿಐ ಉಪನ್ಯಾಸಕರಾದ ನಾಗರಾಜು, ಲೋಕೇಶ್, ವಿವೇಕಾನಂದ ಯೂತ್ ಮೂಮೆಂಟ್ ಸಿಬ್ಬಂದಿಗಳಾದ ಶಿವಲಿಂಗ, ಜಯರಾಂ, ರಾಜೇಶ್, ಚಿನ್ನ ಮಹದೇವ, ಕೆ.ಆರ್‌ಆಸ್ಪತ್ರೆ ಸಿಬ್ಬಂದಿ ವರ್ಗ ಸೇರಿದಂತೆ ಇನ್ನಿತರರಿದ್ದರು.

ಹೆಚ್.ಡಿ. ರೇವಣ್ಣ, ಪ್ರಜ್ವಲ್ ಕ್ವಾರ್ಟರ್ಸ್‌ಗೆ ಎಫ್‌ಎಸ್‌ಎಲ್ ತಂಡ ಭೇಟಿ

ಹೊಳೆನರಸೀಪುರ: ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನ ಜಿಲ್ಲೆ ಹೊಳೆನರಸೀಪುರದ ಹೆಚ್.ಡಿ. ರೇವಣ್ಣ ಅವರ ನಿವಾಸ ಹಾಗೂ ಪ್ರಜ್ವಲ್ ರೇವಣ್ಣ ಕ್ವಾರ್ಟರ್ಸ್‌ಗೆ ಎಸ್‌ಐಟಿಯೊಂದಿಗೆ ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಸೋಮವಾರ ಭೇಟಿ ನೀಡಿದ್ದಾರೆ.

ಎರಡೂ ಮನೆಗಳಿಂದ ಮಾದರಿಗಳನ್ನು ಎಫ್‌ಎಸ್‌ಎಲ್ ತಂಡ ಸಂಗ್ರಹಿಸಿದೆ. ಮಲಗುವ ಕೋಣೆಗಳು, ಅಡುಗೆ ಮನೆಗಳಿಗೆ ಭೇಟಿ ನೀಡಿದ ತಂಡ, ಛಾಯಾ ಚಿತ್ರಗಳನ್ನು ತೆಗೆದುಕೊಂಡಿದೆ. ಹೊಳೆನರಸೀಪುರ ಪಟ್ಟಣದ ಎಚ್.ಡಿ.ರೇವಣ್ಣ ನಿವಾಸದಲ್ಲಿ ಎರಡೂವರೆ ಗಂಟೆ ಕಾಲ ಕಳೆದಿದೆ. ಅಧಿಕಾರಿಗಳು ಕೆಲವು ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲು ವಶಕ್ಕೆ ಪಡೆದರು.

ಇದಕ್ಕೂ ಮುನ್ನಾ ಇತ್ತೀಚೆಗೆ ಸ್ಪಾಟ್ ಮಹಜರ್ ನಂತರ ಸೀಜ್ ಮಾಡಲಾಗಿದ್ದ ಸಂಸದ ಪ್ರಜ್ವಲ್ ರೇವಣ್ಣ ಅವರ ಕ್ವಾರ್ಟರ್ಸ್‌ಗೆ ಎಫ್‌ಎಸ್‌ಎಲ್ ತಂಡ ಭೇಟಿ ನೀಡಿ, ಪರಿಶೀಲನೆ ನಡೆಸಿತು. ಪ್ರಜ್ವಲ್ ರೇವಣ್ಣ ಅವರ ಕ್ವಾರ್ಟರ್ಸ್ ಮತ್ತು ಎಚ್‌ಡಿ ರೇವಣ್ಣ ಅವರ ನಿವಾಸದಲ್ಲಿ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಸಂತ್ರಸ್ತೆ ದೂರು ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಸೆಖೆಗೆ ಬಾಗಿಲು ತೆರೆದು ಮಲಗಿದ ಮನೆಯಲ್ಲಿ 2 ಲಕ್ಷ ಮೌಲ್ಯದ ಲ್ಯಾಪ್‌ಟಾಪ್, ಮೊಬೈಲ್ ಕಳವು



ಮೈಸೂರು, ಮೇ 13(ಎಸ್‌ಪಿಎನ್)– ಮಲಗಿರುವ ವೇಳೆ ಮನೆಗೆ ನುಗ್ಗಿದ ಕಳ್ಳರು 2 ಲಕ್ಷ ಮೌಲ್ಯದ ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಕಳವು ಮಾಡಿದ್ದಾರೆ.

ನಗರದ ಹೆಬ್ಬಾಳು ನಿವಾಸಿಗಳಾದ ಶೈಕ್ ಅಬೂಬಕರ್, ತಾರಕ್ ಹಾಗೂ ಚಂದ್ರಶೇಖರ್ ಖಾಸಗಿ ಕಂಪನಿ ಉದ್ಯೋಗಿಗಳಾಗಿದ್ದು, ಇವರು ಸೆಖೆ ಕಾರಣ ರಾತ್ರಿ ಮನೆಯ ಮುಂಬಾಗಿಲನ್ನು ತೆರೆದು ನಿದ್ರಿಸುತ್ತಿದ್ದರು. ಈ ವೇಳೆ ಕಳ್ಳರು ಮನೆಗೆ ನುಗ್ಗಿ ಲ್ಯಾಪ್‌ಟಾಪ್, ಮೊಬೈಲ್ ಕಳವು ಮಾಡಿ ಪರಾರಿಯಾಗಿದ್ದಾರೆ ಎಂದು ಹೆಬ್ಬಾಳು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಭಾರಿ ಮಳೆ: ತಂಬಾಕು, ಶುಂಠಿ ಬೆಳೆ ಜಲಾವೃತ





ಭಾರಿ ಮಳೆಗೆ ಜಮೀನು ನೀರಿನಿಂದ ಆವೃತವಾಗಿರುವುದು

ಹಿರೀಕ್ಯಾತನಹಳ್ಳಿ, ಮೇ 13– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಹಲವು ಗ್ರಾಮಗಳಲ್ಲಿ ಸೋಮವಾರ ಮುಂಜಾನೆ ಸುರಿದ ಭಾರಿ ಮಳೆಗೆ ತಂಬಾಕು, ಶುಂಠಿ ಸೇರಿದಂತೆ ಇನ್ನಿತರ ತರಕಾರಿ ಬೆಳೆಗಳು ನೀರಿನಿಂದ ಜಲಾವೃತಗೊಂಡಿವೆ.

ಸೋಮವಾರ ಮುಂಜಾನೆ ಸುಮಾರು 3 ಗಂಟೆಗೂ ಹೆಚ್ಚು ಕಾಲ ಸುರಿದ ಭಾರಿ ಮಳೆಯಿಂದ ಹರವೆ ಕಲ್ಲಹಳ್ಳಿ, ರಾಮೇನಹಳ್ಳಿ, ಜಾಬಗೆರೆ, ಮರೂರು, ಗಾವಡಗೆರೆ, ಹಿರೀಕ್ಯಾತನಹಳ್ಳಿ, ಶಿರೇನಹಳ್ಳಿ, ಮುಳ್ಳೂರು, ಮೈಲಾಂಬೂರು ಸೇರಿದಂತೆ ಸುತ್ತಮುತ್ತ ಹಳ್ಳಿಗಳ ಜಮೀನಿನಲ್ಲಿ ನೀರು ತುಂಬಿಕೊಂಡು ನಾಟಿ ಮಾಡಿದ ತಂಬಾಕು ಸಸಿಗಳು ಜೋತು ಬಿದ್ದಿವೆ. ಇನ್ನು, ಮಳೆಯಿಂದಾಗಿ ಈ ಗ್ರಾಮಗಳ ಸಣ್ಣಪುಟ್ಟ ಕೃಷಿ ಹೊಂಡ ಕೆರೆ ಕಟ್ಟೆಗಳಿಗೆ ನೀರು ಬಂದಿದ್ದರೆ, ಮತ್ತೊಂದೆಡೆ ಜಮೀನಿನಲ್ಲಿ ನಿಂತಿದ್ದ ನೀರನ್ನು ಹೊರ ಹಾಕಲು ರೈತರು ಹರಸಾಹಸ ಪಡುತ್ತಿದ್ದ ದೃಶ್ಯ ಕಂಡುಬಂತು. ಮಳೆ ಇಲ್ಲದೆ ಕೊರಗುತ್ತಿದ್ದ ರೈತ ಇದೀಗ ಮಳೆಯಿಂದ ಬೆಳೆ ಕಳೆದುಕೊಳ್ಳುವ ಆತಂಕ ಸೃಷ್ಟಿಯಾಗಿದೆ.

ಮತದಾನಕ್ಕೆ ಸರತಿ ಸಾಲಲ್ಲಿ ಬಾರದ ಶಾಸಕನ ಪ್ರಶ್ನಿಸಿದ ಮತದಾರನ ಮೇಲೆ ಹಲ್ಲೆ; ಪ್ರತಿಯಾಗಿ 'ಕಪಾಳಮೋಕ್ಷ' ಮಾಡಿದ ಮತದಾರ



ಗುಂಟೂರು: ಆಂಧ್ರ ಪ್ರದೇಶ ವಿಧಾನಸಭೆ ಚುನಾವಣೆ ಮತ್ತು ಲೋಕಸಭಾ ಚುನಾವಣೆಯ 4ನೇ ಹಂತದ ಮತದಾನ ಚಾಲ್ತಿಯಲ್ಲಿರುವಂತೆಯೇ ಅತ್ತ ಆಂಧ್ರಪ್ರದೇಶದಲ್ಲಿ ಮತದಾರನೋರ್ವ ಸರತಿ ಸಾಲಲ್ಲಿ ನಿಲ್ಲದ ಶಾಸಕನಿಗೇ ಕಪಾಳ ಮೋಕ್ಷ ಮಾಡಿರುವ ಘಟನೆ ವರದಿಯಾಗಿದೆ.

ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ತೆನಾಲಿ ಮತಗಟ್ಟೆಯೊಂದರಲ್ಲಿ ಈ ಘಟನೆ ನಡೆದಿದ್ದು, ಮತದಾರ ಶಾಸಕನಿಗೆ ಕಪಾಳಮೋಕ್ಷ ಮಾಡಿರುವ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಿದೆ.

ಮೂಲಗಳ ಪ್ರಕಾರ ತೆನಾಲಿ ಶಾಸಕ ಮತ್ತು ವೈಸಿಪಿ ಅಭ್ಯರ್ಥಿ ಅನ್ನಬತುನಿ ಶಿವಕುಮಾರ್ ಇಂದು ಮತದಾನಕ್ಕೆ ಆಗಮಿಸಿದಾಗ ಇತರೆ ಮತದಾರರೊಂದಿಗೆ ಸರತಿ ಸಾಲಲ್ಲಿ ನಿಲ್ಲದೇ ನೇರವಾಗಿ ಮತಗಟ್ಟೆಯೊಳಗೇ ಪ್ರವೇಶ ಮಾಡಲು ಯತ್ನಿಸಿದ್ದಾರೆ. ಇದನ್ನು ಕಂಡ ಮತದಾರರೊಬ್ಬರು ಅದನ್ನು ಪ್ರಶ್ನಿಸಿದ್ದು, ಇದರಿಂದ ಆಕ್ರೋಶಗೊಂಡ ಶಾಸಕ ಶಿವಕುಮಾರ್ ನೋಡ ನೋಡುತ್ತಲೇ ಪ್ರಶ್ನಿಸಿದ ಮತದಾರನ ಕಪಾಳಕ್ಕೆ ಹೊಡೆದಿದ್ದಾರೆ.

ಈ ವೇಳೆ ಮತದಾರ ಕೂಡ ಶಾಸಕ ಶಿವಕುಮಾರ್‌ಗೆ ಕಪಾಳಮೋಕ್ಷ ಮಾಡಿದ್ದು, ಈ ವೇಳೆ ಶಿವಕುಮಾರ್ ಜೊತೆಗಿದ್ದ ಆತನ ಬೆಂಬಲಿಗರು ಹಿಂದೆ ಮುಂದೆ ನೋಡದೆ ಮತದಾರನ ಮೇಲೆ ಮುಗಿಬಿದ್ದು ಸಾಮೂಹಿಕ ಹಲ್ಲೆ ನಡೆಸಿದ್ದಾರೆ. ಅಲ್ಲದೆ ಮತದಾರನನ್ನು ಹೊರಗೆ ಎಳೆದೊಯ್ದಿದ್ದಾರೆ. ಈ ವೇಳೆ ಭದ್ರತೆಗೆ ನಿಯೋಜಿಸಿದ್ದ ಪೊಲೀಸರು ಮಧ್ಯ ಪ್ರವೇಶಿಸಿ ಗಲಾಟೆ ನಿಯಂತ್ರಿಸಿದ್ದಾರೆ. ಇನ್ನು ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಿದ್ದು, ಶಾಸಕನ ನಡೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ.

ಮಾರ್ಕಸ್ ನನಾಲ್ಡ್ ನಿಧನ



ಮೈಸೂರು, ಮೇ 13– ಮೈಸೂರಿನ ರಾಘವೇಂದ್ರನಗರ ನಿವಾಸಿ ಮಾರ್ಕಸ್ ನನಾಲ್ಡ್(61) ಸೋಮವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಮೇ 14) ಸಂಜೆ 4 ಗಂಟೆಗೆ ಮಹದೇವಪುರ ಮುಖ್ಯರಸ್ತೆ (ಗಾಂಧಿನಗರ ಸಮೀಪ) ಯಲ್ಲಿರುವ ಕ್ರೈಸ್ತ ಧರ್ಮಿಯರ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾರ್ಕಸ್ ನನಾಲ್ಡ್ ಅವರ ನಿಧನಕ್ಕೆ ನಗರಪಾಲಿಕೆ ಮಾಜಿ ಸದಸ್ಯ ಎಂ.ಕೆ.ಅಶೋಕ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ವೆಂಕಟೇಶ್



ಹುಣಸೂರು, ಮೇ 13– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ನಿವಾಸಿ ಹಾಗೂ ತಾಲೂಕಿನ ಚಿಟ್ಟೆಕ್ಯಾತನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ವೆಂಕಟೇಶ್(57) ಸೋಮವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ತಾಲೂಕು ಕಚೇರಿ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೆಂಗಳೂರಿನ 6 ಆಸ್ಪತ್ರೆಗಳಿಗೆ ಹುಸಿ ಬಾಂಬ್ ಬೆದರಿಕೆ ಇ–ಮೇಲ್

ಪೊಲೀಸರ ತಪಾಸಣೆ

ಬೆಂಗಳೂರು: ನಗರದ ಆರು ಖಾಸಗಿ ಆಸ್ಪತ್ರೆಗಳಿಗೆ ಇ ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದ್ದು, ಅದು ಸುಳ್ಳು ಎಂದು ಸೋಮವಾರ ಪೊಲೀಸರು ತಿಳಿಸಿದ್ದಾರೆ.

ಬೆದರಿಕೆ ಬಂದ ಆಸ್ಪತ್ರೆಗಳಲ್ಲಿ ಶ್ವಾನ ಮತ್ತು ಬಾಂಬ್ ನಿಷ್ಕ್ರಿಯ ತಂಡಗಳೊಂದಿಗೆ ಪೊಲೀಸರು ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಿದರು. ಆದಾಗ್ಯೂ, ಈ ಆಸ್ಪತ್ರೆಗಳ ಆವರಣದಲ್ಲಿ ಯಾವುದೇ ಅನುಮಾನಾಸ್ಪದ ವಸ್ತು ಕಂಡುಬಂದಿಲ್ಲ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂದು ಅವರು ಹೇಳಿದರು. ಭಾನುವಾರದಂದು ಆಸ್ಪತ್ರೆಗಳಿಗೆ ಇಮೇಲ್ ಬಂದಿದ್ದು, ಅದರಲ್ಲಿ ನಾನು ನಿಮ್ಮ ಕಟ್ಟಡದಲ್ಲಿ ಸ್ಫೋಟಕ ಸಾಧನಗಳನ್ನು ಇರಿಸಿದ್ದೇನೆ. ಮುಂದಿನ ಕೆಲವೇ ಗಂಟೆಗಳಲ್ಲಿ ಅವು ಸ್ಫೋಟಗೊಳ್ಳುತ್ತವೆ.

ಇದು ಕೇವಲ ಹೆದರಿಕೆಯಲ್ಲ ಬಾಂಬ್ ಅನ್ನು ನಿಷ್ಕ್ರಿಯಗೊಳಿಸಲು ನಿಮಗೆ ಕೆಲವು ಗಂಟೆಗಳ ಕಾಲಾವಕಾಶವಿದೆ, ಅಷ್ಟರಲ್ಲಿ ನಿಷ್ಕ್ರಿಯಗೊಳಿಸಿ ಇಲ್ಲದಿದ್ದರೆ ಕಟ್ಟಡದೊಳಗಿನ ಅಮಾಯಕರ ರಕ್ತವು ನಿಮ್ಮ ಕೈಯಲ್ಲಿರುತ್ತದೆ ಎಂದು ಇ ಮೇಲ್ ಬಂದಿತ್ತು ಎನ್ನಲಾಗಿದೆ.

ಪ್ರತಿಕೂಲ ಹವಾಮಾನ: ಬೆಂಗಳೂರು ಬರಬೇಕಾಗಿದ್ದ 11 ವಿಮಾನಗಳು ಚೆನ್ನೈಗೆ ಮಾರ್ಗ ಬದಲಾವಣೆ


ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುಡುಗು, ಮೋಡ, ಕ್ರಾಸ್‌ವಿಂಡ್ ಉಂಟಾದ ಪರಿಣಾಮ ಬೆಂಗಳೂರಿಗೆ ಬರಬೇಕಾಗಿದ್ದ 11 ವಿಮಾನಗಳು ಭಾನುವಾರ ರಾತ್ರಿ ಚೆನ್ನೈ ತಲುಪಿವೆ. ಅವುಗಳಲ್ಲಿ ನಾಲ್ಕು ಅಂತರರಾಷ್ಟ್ರೀಯ ವಿಮಾನಗಳಾಗಿವೆ. ವಿಮಾನ ನಿಲ್ದಾಣದಲ್ಲಿ ಗುಡುಗು ಸಹಿತ ಮೋಡಗಳಿಂದಾಗಿ ಏರ್ ಟ್ರಾಫಿಕ್ ನಿಯಂತ್ರಣದ ಮೇಲೆ ಪರಿಣಾಮ ಉಂಟುಮಾಡಿದವು. ಇದರಿಂದಾಗಿ ಕ್ರಾಸ್ ವಿಂಡ್ ಉಂಟಾಯಿತು. ಇದು ಗಂಟೆಗೆ 20 ರಿಂದ 25 ಕಿ.ಮೀ ವೇಗ ಹೊಂದಿತ್ತು. ಉತ್ತರ ಮತ್ತು ದಕ್ಷಿಣದ ಎರಡೂ ರನ್‌ವೇಗಳು ಏರ್ ಟ್ರಾಫಿಕ್ ಕಂಟ್ರೋಲ್ ಸಮೀಪದಲ್ಲಿವೆ, ಆ ಅವಧಿಯಲ್ಲಿ ಟೈಲ್‌ವಿಂಡ್‌ಗಳ ಕಾರಣದಿಂದಾಗಿ ವಿಮಾನಗಳು ಇಳಿಯುವುದು ಅಥವಾ ಟೇಕ್ ಆಫ್ ಮಾಡುವುದು ಖಂಡಿತವಾಗಿಯೂ ಸುರಕ್ಷಿತವಲ್ಲ ಎಂದು ಏರೋಡ್ರಮ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 14 ಮೇ 2024

ಪರಿಷತ್ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಜಯಭೇರಿ

*** ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿಶ್ವಾಸ * ಪಕ್ಷದ ಅಭ್ಯರ್ಥಿಗಳಾದ ನಾರಾಯಣಸ್ವಾಮಿ, ದೇವೇಗೌಡ ನಾಮಪತ್ರ ಸಲ್ಲಿಕೆ**

ಬೆಂಗಳೂರು, ಮೇ13(ಕೆಎಂಶಿ)- ಬಿಜೆಪಿ-ಜೆಡಿಎಸ್ ಒಟ್ಟಾಗಿ ಲೋಕಸಭಾ ಚುನಾವಣೆ ಎದುರಿಸಿದ್ದು, ಪರಿಷತ್ ಚುನಾವಣೆಯಲ್ಲೂ ಎಲ್ಲ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲುವ ವಿಶ್ವಾಸವಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಅಭ್ಯರ್ಥಿಗಳು ಗೆಲುವು ಸಾಧಿಸುವುದು ಖಚಿತ. ವಿಧಾನಪರಿಷತ್‌ನಲ್ಲಿ ಅಪಾರ ಅನುಭವ ಇರುವ ವೈ.ಎ.ನಾರಾಯಣಸ್ವಾಮಿ ಮತ್ತು ಅ.ದೇವೇಗೌಡ ಮತ್ತೊಮ್ಮೆ ದೊಡ್ಡ ಅಂತರದಲ್ಲಿ ವಿಜಯಶಾಲಿಯಾಗಲಿದ್ದಾರೆ ಎಂದು ತಿಳಿಸಿದರು.

ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಯಾರೇ ಪ್ರಚಾರ ಮಾಡಿದರೂ ಕಾಂಗ್ರೆಸ್ ಗೆಲ್ಲುವುದಿಲ್ಲ, ಎರಡೂ ಪಕ್ಷಗಳು ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ ಎಂದರು. ವೈ.ಎ.ನಾರಾಯಣಸ್ವಾಮಿ ಮತ್ತು ಅ.ದೇವೇಗೌಡ ಪರಿಷತ್‌ಗೆ ಆಯ್ಕೆ ಬಯಸಿ ಇಂದು ನಾಮಪತ್ರ ಸಲ್ಲಿಸಿದರು.

ರೇವಣ್ಣ ಜೈಲಲ್ಲಿದ್ರೂ ಮನಸ್ಸಲ್ಲಿ ಹಾಸನ ಅಭಿವೃದ್ಧಿಯದ್ದೇ ಚಿಂತೆ!

ತನ್ನದಲ್ಲದ ತಪ್ಪಿಗೆ ಶಿಕ್ಷೆಯಾಯ್ತಲ್ಲಾ ಅಂತ ಕಣ್ಣೀರಾಕ್ತಾವರೆ: ರೇವಣ್ಣ ಭೇಟಿ ಬಳಿಕ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆ

ಬೆಂಗಳೂರು: ಏನೂ ತಪ್ಪು ಮಾಡದೇ ಪ್ರಕರಣದಲ್ಲಿ ಸಿಲುಕಿಸಿ, ಜೈಲಿಗೆ ಹಾಕಿದ್ದಾರೆ ಎಂಬ ನೋವಿನಲ್ಲಿ ರೇವಣ್ಣ ಹತ್ತು ನಿಮಿಷಗಳ ಕಾಲ ಕಣ್ಣೀರು ಹಾಕಿದರು ಎಂದು ಜೆಡಿಎಸ್ ಹಿರಿಯ ಮುಖಂಡರೂ ಆದ ಶಾಸಕ ಜಿ.ಟಿ.ದೇವೇಗೌಡರು ಹೇಳಿದ್ದಾರೆ.

ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ರೇವಣ್ಣ ಅವರನ್ನು ಭೇಟಿಯಾದ ಬಳಿಕ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು. ರೇವಣ್ಣ ಜೈಲಿಗೆ ಹೋದ ದಿನದಿಂದ ಅವರ ಭೇಟಿ ಆಗಿರಲಿಲ್ಲ. ಅವರ ಆರೋಗ್ಯ ವಿಚಾರಿಸಲು ಬರಬೇಕೆಂದು ಮೂರು ದಿನದಿಂದ ಮನಸ್ಸಲ್ಲಿತ್ತು. ಭಾನುವಾರ ರಜೆ, ಬಿಡೋದಿಲ್ಲ ಅಂತಾ ಹೇಳಿದ್ದರು. ಅದಕ್ಕೆ ಇಂದು ಅವರನ್ನು ಮಾತನಾಡಿಸಲು ಬಂದಿದ್ದೇನೆ ಎಂದು ಹೇಳಿದರು.



ಅವರು ಆರಾಮಾಗಿ ಕುಳಿತಿದ್ದು, ಜೊತೆಯಲ್ಲಿ ಚಹಾ ಕುಡಿದೆವು. ಹಳೆ ವಿಚಾರಗಳನ್ನೆಲ್ಲ ಮೆಲುಕು ಹಾಕಿದರು. ಅವರಿಗೆ ಈಗಲೂ ಹಾಸನ ಅಭಿವೃದ್ಧಿ ಕಾರ್ಯಕ್ರಮಗಳದ್ದೇ ಚಿಂತೆ. ಅಲ್ಲದೆ ಅವರಿಗೆ ಒಂದೇ ಯೋಚನೆ, ನಾನೇನು ತಪ್ಪು ಮಾಡಿದ್ದೀನಿ. ಸಂತ್ರಸ್ತ ಮಹಿಳೆ ಜೊತೆ ಮಾತನಾಡಿ ಆರು ವರ್ಷವಾಗಿದೆ. ನನ್ನನ್ನ ಈ ಪ್ರಕರಣದಲ್ಲಿ ಸೇರಿಸಿ ಹೀಗೆ ಮಾಡಿದ್ದಾರೆ. ನಾನು ತಪ್ಪು ಮಾಡಿದ್ದರೆ ಶಿಕ್ಷೆ ಕೊಡಲಿ ಅನುಭವಿಸಬಹುದಿತ್ತು. ಏನೂ ತಪ್ಪು ಮಾಡದೇ ಜೈಲಿಗೆ ಹಾಕಿದರಲ್ಲಾ ಎಂಬ ಕೊರಗು ರೇವಣ್ಣನಿಗೆ ಕಾಡುತ್ತಿದೆ. ಅದನ್ನು ನೆನಸಿಕೊಂಡು ದುಃಖ ಪಡುತ್ತಿದ್ದಾರೆ. ಅರಕಲಗೂಡು ಶಾಸಕ ಎ.ಮಂಜುಗೆ ಸುತ್ತಿಕೊಂಡ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಅವರು, ಎಲ್ಲವೂ ಎಸ್‌ಐಟಿ ತನಿಖೆ ಮೂಲಕ ಹೊರಬರುತ್ತೆ ಅಂತಾ ಸಿಎಂ ಹೇಳಿದ್ದಾರೆ. ನಮಗೂ ಕೂಡ ನಂಬಿಕೆ ಇದೆ. ಪೆನ್‌ಡ್ರೈವ್ ರಿಲೀಸ್ ಮಾಡಿದವರ ಬಗ್ಗೆ ತನಿಖೆ ಪ್ರಾರಂಭ ಮಾಡಿದ್ದಾರೆ. ಎಲ್ಲರದೂ ಹೊರಗಡೆ ಬರುತ್ತೆ ಸ್ವಲ್ಪ ದಿನ ಕಾಯಬೇಕು ಎಂದು ಜಿ.ಟಿ. ದೇವೇಗೌಡರು ಹೇಳಿದರು. ಪ್ರಜ್ವಲ್ ರೇವಣ್ಣ ವಿಚಾರವಾಗಿ ಯಾವುದೇ ಚರ್ಚೆ ಮಾಡಲಿಲ್ಲ. ರೇವಣ್ಣ ಕೂಡ ಪ್ರಜ್ವಲ್ ಬಗ್ಗೆ ಏನೂ ಹೇಳಲಿಲ್ಲ ಎಂದರು.

ಎಡಿಜಿಪಿ ಅಲೋಕ್‌ಕುಮಾರ್‌ರಿಂದ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇ ಸಿಸಿ ಕ್ಯಾಮರಾ ಪರಿಶೀಲನೆ

ಇಂದು ಮೈಸೂರು ನಗರದಲ್ಲಿ ಅಳವಡಿಸಿರುವ ಕ್ಯಾಮರಾ, ಟ್ರಾಫಿಕ್ ಸಿಗ್ನಲ್ ಲೈಟ್, ಸಂಚಾರ ವ್ಯವಸ್ಥೆ ವೀಕ್ಷಣೆ

ಮೈಸೂರು, ಮೇ 13(ಆರ್‌ಕೆ)- ಸಂಚಾರ ಮತ್ತು ರಸ್ತೆ ಸುರಕ್ಷತಾ ಎಡಿಜಿಪಿ ಅಲೋಕ್‌ಕುಮಾರ್ ಅವರು ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳ ಕಾರ್ಯವೈಖರಿಯನ್ನು ಸೋಮವಾರ ಪರಿಶೀಲಿಸಿದರು.

ಬೆಳಗ್ಗೆ ಬೆಂಗಳೂರಿನಿಂದ ಹೊರಟು ಬಿಡದಿ, ರಾಮನಗರ, ಚನ್ನಪಟ್ಟಣಗಳ ಬಳಿ ರಾಮನಗರ ಜಿಲ್ಲಾ ಎಸ್ಪಿ, ಅಡಿಷನಲ್ ಎಸ್ಪಿ, ಡಿವೈಎಸ್ಪಿ, ಸಂಚಾರ ವಿಭಾಗದ ಅಧಿಕಾರಿಗಳು ಹಾಗೂ ಕ್ಯಾಮರಾ ಅಳವಡಿಸಿರುವ ಏಜೆನ್ಸಿ, ತಾಂತ್ರಿಕ ಸಿಬ್ಬಂದಿಗಳೊಂದಿಗೆ ವೀಕ್ಷಿಸಿ ಸಂಚಾರ ಸುರಕ್ಷತೆಗೆ ಕ್ಯಾಮರಾಗಳು ಯಾವ ರೀತಿ ಕಾರ್ಯನಿರ್ವಹಿಸುತ್ತವೆ ಎಂಬುದರ ಬಗ್ಗೆ ಮಾಹಿತಿ ಪಡೆದುಕೊಂಡರು.

ಪ್ರಯಾಣ ಮುಂದುವರಿಸಿದ ಎಡಿಜಿಪಿಯವರು ಮದ್ದೂರು, ಮಂಡ್ಯ ಭಾಗದಲ್ಲೂ ಎಕ್ಸ್‌ಪ್ರೆಸ್‌ವೇಯಲ್ಲಿ ಅಳವಡಿಸಿರುವ ಕ್ಯಾಮರಾಗಳನ್ನು ವೀಕ್ಷಿಸಿದರು. ವಾಹನಗಳ ವೇಗ, ಅಜಾಗರೂಕತೆಯ ಚಾಲನೆ, ಈ ಹೈಟೆಕ್ ಕ್ಯಾಮರಾಗಳು ನಿಖರವಾಗಿ ಕಾರ್ಯನಿರ್ವಹಿಸಲಿವೆ ಎಂಬುದನ್ನು ಏಜೆನ್ಸಿ ಟೆಕ್ನೀಷಿಯನ್‌ಗಳು ಅಲೋಕ್ ಕುಮಾರ್ ಅವರಿಗೆ ವಿವರಿಸಿದರು.



ನಂತರ ಮೈಸೂರು ಜಿಲ್ಲೆಗೆ ಪ್ರವೇಶಿಸಿದ ಅವರನ್ನು, ಸಿದ್ಧಲಿಂಗಪುರ ಬಳಿ ಇಂದು ಸಂಜೆ 4 ಗಂಟೆಗೆ ಭೇಟಿಯಾದ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್.ಜಾಹ್ನವಿ, ಸಂಚಾರ ಅಪಘಾತ, ಸುಲಿಗೆ, ದರೋಡೆ, ಟೋಲ್ ಫೀಯಿಂದ ತಪ್ಪಿಸಿಕೊಳ್ಳಲು ಮೇನ್ ಕಾರಿ ಡಾರ್‌ನಿಂದ ಸರ್ವೀಸ್ ರಸ್ತೆಗೆ ಹಾಗೂ ಸರ್ವೀಸ್ ರಸ್ತೆಯಿಂದ ಮೇನ್ ಕಾರಿಡಾರ್‌ಗೆ ಬರುವ ವಾಹನಗಳ ದೃಶ್ಯ ಸೆರೆಹಿಡಿದು ಪೊಲೀಸ್ ಘಟಕ, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಜ್ಯ ಕಂಟ್ರೋಲ್ ರೂಂ, ಆಂಬುಲೆನ್ಸ್, ಅಗ್ನಿಶಾಮಕ ಠಾಣೆಗಳಿಗೆ ಮಾಹಿತಿ ರವಾನಿಸುವುದಲ್ಲದೆ, ನಿಯಮ ಉಲ್ಲಂಘಿಸಿದ ವಾಹನಗಳ ಮಾಲೀಕರಿಗೆ ನೋಟಿಸ್ ತಲುಪಿಸುವಲ್ಲಿ ವಿಭಾಗದ ಎಸಿಪಿ ಪರಶುರಾಮಪ್ಪ ಹಾಗೂ ಇತರ ಅಧಿಕಾರಿಗಳು, ತಮ್ಮ ಸರಹದ್ದಿನ ಎಕ್ಸ್‌ಪ್ರೆಸ್‌ವೇಯಲ್ಲಿ ಅಪಘಾತ ಮತ್ತು ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ಬಗ್ಗೆ ಹಾಗೂ ಟ್ರಾಫಿಕ್ ಎನ್‌ಫೋರ್ಸ್‌ಮೆಂಟ್ ಕುರಿತಂತೆ ಮಾಹಿತಿ ನೀಡಿದರು.

ನಜರ್‌ಬಾದ್‌ನ ಎಸ್ಪಿ ಕಚೇರಿ ಎದುರಿನ ಡಿಜಿ ಸೂಟ್‌ನಲ್ಲಿ ಕೆಲಕಾಲ ವಿಶ್ರಾಂತಿ ಪಡೆದ ಎಡಿಜಿಪಿ ಅಲೋಕ್ ಕುಮಾರ್, ಸಂಜೆ 5.30 ಗಂಟೆಗೆ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ)ಯಲ್ಲಿ ಬುನಾದಿ ತರಬೇತಿ ಪಡೆಯುತ್ತಿರುವ ಪ್ರೊಬೇಷನರಿ ಡಿವೈಎಸ್ಪಿಗಳೊಂದಿಗೆ ಸಂವಾದ ನಡೆಸಿದರು. ಇಂದು ರಾತ್ರಿ ಮೈಸೂರಿನಲ್ಲಿ ವಾಸ್ತವ್ಯ ಹೂಡಿರುವ ಅವರು, ನಾಳೆ (ಮೇ 14) ನಗರದಾದ್ಯಂತ ಸಂಚಾರ, ಅಪರಾಧ ಪ್ರಕರಣಗಳ ವಿವರ ನೀಡಲಿದ್ದಾರೆ. ಮಧ್ಯಾಹ್ನದ ನಂತರ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸುವ ಅವರು, ಸಂಜೆ ಬೆಂಗಳೂರಿಗೆ ಹಿಂದಿರುಗುವರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 13- 2023-24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.



ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ www.ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಲು ಮೇ 20 ಅಂತಿಮ ದಿನಾಂಕವಾಗಿದ್ದು, ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು NPCI (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ) ನಲ್ಲಿ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ದೂ.ಸಂ: 0821-2520910 ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್-1 ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಂಗೋತ್ರಿ ಪಬ್ಲಿಕ್ ಶಾಲೆಗೆ ಶೇ.94ರಷ್ಟು ಫಲಿತಾಂಶ



ಅಮೃತ ವಿಜಯ್ ಅನುಷಾ ಅಭಿಷೇಕ್ ಪ್ರತೀಕ್ಷಾ ಸ್ತುತಿ ಮರೀನಾ

ಮೈಸೂರು, ಮೇ 13- 2023-24ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗಂಗೋತ್ರಿ ಪಬ್ಲಿಕ್ ಶಾಲೆಗೆ ಶೇ.94ರಷ್ಟು ಉತ್ತಮ ಫಲಿತಾಂಶ ಬಂದಿದೆ. ಅಮೃತ 625ಕ್ಕೆ 605 (ಲೋಕೇಶ್‌ರವರ ಪುತ್ರಿ), ವಿಜಯ್ 625ಕ್ಕೆ 600 (ಶರವನ್‌ರವರ ಪುತ್ರ), ಅನುಷಾ 625ಕ್ಕೆ 596 (ನಾಗರಾಜಪ್ಪರವರ ಪುತ್ರಿ), ಅಭಿಷೇಕ್ 625ಕ್ಕೆ 575 (ಪ್ರಕಾಶ್‌ರವರ ಪುತ್ರ), ಪ್ರತೀಕ್ಷಾ ದೇವ್ 625ಕ್ಕೆ 570 (ದೇವರಾಜ್‌ರವರ ಪುತ್ರಿ), ಸ್ತುತಿ ಮರೀನಾ ಡಿ.ಸೋಜ಼ 625ಕ್ಕೆ 569 (ಸಂದೇಶ್ ಡಿ.ಸೋಜ಼ ರವರ ಪುತ್ರಿ). ಈ ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಅಂಕಗಳನ್ನು ಪಡೆದಿದ್ದಾರೆ.



ಮೈಸೂರಿನ ಗೀತಾ ರಸ್ತೆಯ ಪ್ರಸನ್ನ ವಿಶ್ವೇಶ್ವರ ದೇವಸ್ಥಾನದ ಶ್ರೀ ಶಂಕರ ಜಯಂತಿ ಸಭಾ ವತಿಯಿಂದ ಕೃಷ್ಣಮೂರ್ತಿಪುರಂ, ಚಾಮರಾಜಪುರಂನ ವಿವಿಧ ರಸ್ತೆಗಳಲ್ಲಿ ಶ್ರೀ ಶಂಕರಾಚಾರ್ಯರ ಮೂರ್ತಿ ಮೆರವಣಿಗೆ ನಡೆಯಿತು.

ವಸತಿ ಶಾಲಾ-ಕಾಲೇಜಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 13- ಮೈಸೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವರಕೋಡಿನ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜು, ಹೊಸಕೋಟೆಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜು, ತಗಡೂರಿನ ಅಟಲ್ ಬಿಹಾರಿ ವಾಜಪೇಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜು ಮತ್ತು ಸೊಳ್ಳೇಪುರದ ಏಕಲವ್ಯ ಮಾದರಿ ವಸತಿ ವಿಜ್ಞಾನ ಕಾಲೇಜು (PCMB ಮತ್ತು EBCA) ಕೋರ್ಸ್‌ಗಳ ವಿಭಾಗದ ದಾಖಲಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಮೇ 13 ರಿಂದ ವಿತರಿಸಲಾಗುತ್ತಿದ್ದು, ಅರ್ಜಿ ಸಲ್ಲಿಸಲು ಮೇ 21 ಕೊನೆಯ ದಿನಾಂಕವಾಗಿರುತ್ತದೆ. ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ವಸತಿ, ಪಠ್ಯಪುಸ್ತಕ, ಸಮವಸ್ತ್ರ ಮತ್ತು ಇನ್ನಿತರೆ ಸೌಲಭ್ಯಗಳನ್ನು ನೀಡಲಾಗುವುದು. JEE/CET/NEET ಕೋರ್ಸ್‌ಗಳಿಗೆ ಉಚಿತ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821-2344661 ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜ ಲಭ್ಯ



ಮೈಸೂರು, ಮೇ 13- ಮೈಸೂರು ತಾಲೂಕಿನ ಕಸಬಾ, ವರುಣ, ಜಯಪುರ ಮತ್ತು ಇಲವಾಲ ರೈತ ಸಂಪರ್ಕ ಕೇಂದ್ರಗಳಲ್ಲಿ ಅಲಸಂದೆ, ಹೆಸರು ಮತ್ತು ಉದ್ದು ಬೆಳೆಗಳ ಬಿತ್ತನೆ ಬೀಜಗಳನ್ನು ದಾಸ್ತಾನೀಕರಿಸಲಾಗಿದ್ದು, ರೈತರು ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಅಗತ್ಯ ಬಿತ್ತನೆ ಬೀಜಗಳನ್ನು ಪಡೆದುಕೊಳ್ಳಬಹುದು. ಉದ್ದು, ಅಲಸಂದೆ ಮತ್ತು ಹೆಸರುಕಾಳು ಪ್ರತಿ ಕೆ.ಜಿಗೆ ಸಾಮಾನ್ಯ ವರ್ಗದವರಿಗೆ ರೂ.25 ಹಾಗೂ ಪ.ಜಾತಿ, ಪ.ಪಂ. ವರ್ಗದವರಿಗೆ ರೂ.37.50 ಸಹಾಯಧನವಿದ್ದು, ಉದ್ದು ಪ್ರತಿ ಕೆ.ಜಿಗೆ ಸಾಮಾನ್ಯ ವರ್ಗಕ್ಕೆ ರೂ.132 ಹಾಗೂ ಪ.ಜಾತಿ, ಪ.ಪಂ. ವರ್ಗಕ್ಕೆ ರೂ.119.50, ಅಲಸಂದೆ ಬೆಳೆಗೆ ಸಾಮಾನ್ಯ ವರ್ಗದವರಿಗೆ 110 ಹಾಗೂ ಪ.ಜಾತಿ, ಪ.ಪಂ. ವರ್ಗದವರಿಗೆ ರೂ. 97.50, ಮತ್ತು ಹೆಸರು ಬೆಳೆಗೆ ಸಾಮಾನ್ಯವರ್ಗದವರಿಗೆ ರೂ. 161 ಹಾಗೂ ಪ.ಜಾತಿ, ಪ.ಪಂ ವರ್ಗದವರಿಗೆ ರೂ.148.50ಕ್ಕೆ ರೈತರ ವಂತಿಕೆಯನ್ನು ನೀಡಲಾಗುವುದು. ಇತರ ಪರಿಕರಗಳಾದ ಅಪ್ಸೆಣಬು ಬೀಜ ಮತ್ತು ಟರ್ಪಾಲಿನ್‌ಗಳನ್ನು ಸಹಾಯಧನದಡಿ ಪಡೆದುಕೊಳ್ಳಬಹುದು ಎಂದು ಮೈಸೂರಿನ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಕೃತಿಕ ವಿಕೋಪ ಸಮಸ್ಯೆಗೆ ಸಹಾಯವಾಣಿ ಕೇಂದ್ರ ಸ್ಥಾಪನೆ

ಮೈಸೂರು, ಮೇ 13-ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಅತಿಯಾದ ಮಳೆಯಿಂದ ಮನೆಗಳಿಗೆ ಹಾನಿ, ಕುಡಿಯುವ ನೀರು, ಬೀದಿದೀಪಗಳು ಹಾಗೂ ಒಳಚರಂಡಿ ಸಂಪರ್ಕದ ಸಮಸ್ಯೆಗಳು, ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ, ಮರ ಹಾಗೂ ವಿದ್ಯುತ್ ಕಂಬಗಳು ಉರುಳುವುದು ಸೇರಿದಂತೆ ಇತರ ಪ್ರಾಕೃತಿಕ ವಿಕೋಪಗಳು ಸಂಭವಿಸಿದಲ್ಲಿ ಕಚೇರಿ ಸಹಾಯವಾಣಿ: 0821-2001931 ಅನ್ನು ಸಂಪರ್ಕಿಸಿ ಜನರು ತಮ್ಮ ಅಹವಾಲುಗಳನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆಯಿಂದ ಮೇಧಾ ಯೋಗ ಶಿಬಿರ

ಮೈಸೂರು, ಮೇ 13-ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಮೇ 15ರಿಂದ 18ರವರೆಗೆ ಬೆಳಗ್ಗೆ 9ರಿಂದ 12ರವರೆಗೆ ಮೇಧಾ ಯೋಗ ಶಿಬಿರ (12ರಿಂದ 17 ವರ್ಷ ವಯಸ್ಸಿನವರಿಗೆ) ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9845685892, 9845963387 ಸಂಪರ್ಕಿಸಬಹುದು.

ಮೂಲ ವಿಜ್ಞಾನ, ಗಣಿತ ಸೇರಿ ನಾನಾ ವಿಷಯಗಳ ಬಗ್ಗೆ ಆಸಕ್ತಿಯಿಂದ ಮನವರಿಕೆ ಮಾಡಿಕೊಂಡ ಮಕ್ಕಳು




ಮೈಸೂರು ಸೈನ್ಸ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಕ್ಕಳು ಸೂಕ್ಷ್ಮದರ್ಶಕದ ಬಳಕೆ ಕುರಿತು ಮಾಹಿತಿ ಪಡೆಯುತ್ತಿರುವುದು.

ಮೈಸೂರು,ಮೇ 13(ಎಂಟಿವೈ)- ಮೈಸೂರು ಸೈನ್ಸ್ ಫೌಂಡೇಷನ್ ವತಿಯಿಂದ ಜ್ಞಾನೋದಯ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ವಿಜ್ಞಾನ-ತಂತ್ರಜ್ಞಾನ, ಗಣಿತ, ಬಾಹ್ಯಾಕಾಶ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಮಾಹಿತಿ ಪಡೆದ ಚಿಣ್ಣರು ಕುತೂಹಲಭರಿತರಾದರು. ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಜ್ಞಾನೋದಯ ಕಾಲೇಜಿನ ಆವರಣದಲ್ಲಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಶಾಲಾ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಮೂಲ ವಿಜ್ಞಾನ, ಮೂಲ ಗಣಿತ, ಎಲೆಕ್ಟ್ರಾನಿಕ್ಸ್ ವಿಷಯಗಳಲ್ಲಿ ಹೆಚ್ಚಿನ ಮಾಹಿತಿ ಪಡೆದರು.

ಕಳೆದ 10ದಿನ ನಡೆದ ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ 30ಕ್ಕೂ ಹೆಚ್ಚು ಮಕ್ಕಳು ಮೂಲ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿವಿಧ ಪ್ರಯೋಗ, ಕ್ಲಿಷ್ಟ ಗಣಿತವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವ ಬಗೆ, ಸರಳ ಎಲೆಕ್ಟ್ರಾನಿಕ್ಸ್ ಮಾದರಿಗಳ ರಚನೆ, ಗುರುತ್ವಾಕರ್ಷಣ ಶಕ್ತಿ, ಬೆಳಕಿನ ಪ್ರತಿಫಲನ, ನ್ಯೂಟನ್‌ನ ಉಂಗುರ ಭೌತಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಇನ್ನಿತರ ವಿಷಯಗಳ ಆಧಾರಿತ ಮಾಹಿತಿ ಪಡೆದರು. ಇದೇ ವೇಳೆ, ಪಕ್ಷಿ ವೀಕ್ಷಣೆ, ಉರಗಗಳ ಸಂರಕ್ಷಣೆ ಇನ್ನಿತರ ವಿಷಯಗಳನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಲಾಗಿದೆ. ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಜಿ.ಬಿ.ಸಂತೋಷ್ ಕುಮಾರ್, ಎಚ್.ವಿ.ಮುರಳೀಧರ್, ಹೆಚ್.ಎಸ್.ಮಂಜುಳಾ, ಸಿ.ಪುರಂದರ್, ಜಿ.ಕೆ. ಕಾಂತರಾಜು, ನಿರಂಜನ್ ಹಾಗೂ ಸಿ.ಎನ್.ಗೀತಾ ಇನ್ನಿತರರು ಮಕ್ಕಳಿಗೆ ಮಾರ್ಗದರ್ಶನ ನೀಡಿದರು.

ಇಂದು, ನಾಳೆ ವಿದ್ಯುತ್ ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಮೇ 13- ದೇವನೂರು ಸಬ್‌ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್ ಮೊದಲನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದರಿಂದ ಮೇ 14 ಮತ್ತು 15ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಾರ್ಡ್ ನಂ.9ರಿಂದ 16, 28ರಿಂದ 39, 52, 53ರ ವ್ಯಾಪ್ತಿಯ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್. ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ನಿಲುಗಡೆಯಾಗಲಿದೆ.



ರಾಜೀವ್‌ನಗರ, ಕಲ್ಯಾಣಗಿರಿ ಸೇರಿ ಹಲವೆಡೆ ವಿದ್ಯುತ್ ವ್ಯತ್ಯಯ

ವಿದ್ಯುತ್ ನಿರ್ವಹಣಾ ಕಾಮಗಾರಿ ಹಿನ್ನೆಲೆ ನಾಳೆ (ಮೇ 14) ಕಲ್ಯಾಣಗಿರಿ, ರಾಜೀವ್‌ನಗರ, ಅಜೀಜ್‌ಸೇಠ್ ನಗರ ಸೇರಿದಂತೆ ಹಲವು ಬಡಾವಣೆಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ನಾಳೆ ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆ ತನಕ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಬಿ.ಡಿ.ಕಾಲೋನಿ, ಅಜೀಜ್‌ಸೇಠ್ ನಗರ, 320 ಮನೆ, ಮಹದೇವಪುರ ಮುಖ್ಯ ರಸ್ತೆ, ಶಕ್ತಿನಗರ, ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿ, ಅಕ್ಷಯಭಂಡಾರ್, ರಮ್ಮನಹಳ್ಳಿ, ಕಾಳಿಸಿದ್ದನಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರಹುಂಡಿ, ನೆಹರುನಗರ, ಸಾತಗಳ್ಳಿ, ಡಿಟಿಎಸ್ ರಾವ್‌ನಗರ, ವಿ.ಟಿ.ಯು ಕಾಲೇಜು ಎದುರು, ಸನ್‌ಫ್ಲ್ಯಾರ್ ಬಡಾವಣೆ, ಸಾತಗಳ್ಳಿ ಬಿ ಝೋನ್, ವಿಟಿಯು ಕಾಲೇಜು, ಭಾರತ್‌ನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳು.

ರಾಜೀವ್ ನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜೀದ್, ಎಸ್. ಬಡಾವಣೆ, ಸೂರ್ಯನಾರಾಯಣ ದೇವಸ್ಥಾನ, ಆಲ್ ಬಜಾರ್ ಮಸ್ಜೀದ್, ಅಂಬೇಡ್ಕರ್ ಭವನ ರಸ್ತೆ, ಕ್ಯೂಬಾ ಮಸ್ಜೀದ್, ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆ ಹುಂಡಿ, ಕೆಹೆಚ್‌ಬಿ ಬಡಾವಣೆ, ಆರ್‌ಟಿಓ-55, ಆಸೀನಾ ಬಡಾವಣೆ, ರಾಜೀವ್‌ನಗರ 3ನೇ ಹಂತ ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಚೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಡಿಡಿಪಿಐ ಹೆಚ್.ಕೆ.ಪಾಂಡು ಅವರಿಗೆ ಮೈಸೂರು ಜಿಲ್ಲಾ ಲಿಪಿಕಾ ನೌಕರರ ಸಂಘದಿಂದ ಅಭಿನಂದನೆ



ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಮೈಸೂರು ಜಿಲ್ಲೆ 7ನೇ ಸ್ಥಾನ ಪಡೆಯಲು ಶ್ರಮಿಸಿದ ಉಪನಿರ್ದೇಶಕ ಹೆಚ್.ಕೆ.ಪಾಂಡು ಅವರನ್ನು ಮೈಸೂರು ಜಿಲ್ಲಾ ಲಿಪಿಕಾ ನೌಕರರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಶಿಕ್ಷಣಾಧಿಕಾರಿ ಎಂ.ಆರ್. ಅನಂತರಾಜು, ಶ್ರೀಮತಿ ನಿರೂಪಾ ವೆಸ್ಲಿ, ಜಿಲ್ಲಾ ಲಿಪಿಕಾ ನೌಕರರ ಸಂಘದ ಅಧ್ಯಕ್ಷ ಆನಂದ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇವಣ್ಣ, ಡಿವೈಪಿಸಿ ಶ್ರೀಮತಿ ಪುಷ್ಪ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎಸ್.ಸಿದ್ದರಾಜು, ಎಪಿಸಿ ಸುರೇಶ್ ಮತ್ತು ಇನ್ನಿತರ ಸಿಬ್ಬಂದಿ ಉಪಸ್ಥಿತರಿದ್ದರು.

ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಶಾಲೆಗೆ ಉತ್ತಮ ಫಲಿತಾಂಶ

ಮೈಸೂರು, ಮೇ 13- ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ 'ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್' ಶಾಲೆಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶ್ರವಣದೋಷವುಳ್ಳ ವಿದ್ಯಾರ್ಥಿಗಳಾದ ಆರ್.ಎಲ್.ರೋಹಿತ್-78% (CBSE) ಶ್ರೀದೀಪ್ತಿ ಮುಲ್ಲಗೊಲ್ಲ-68%, ಡಿ ಆರ್ ವೇದ-65%, ಕೆ ಸಿ ಚರಣ್-61%, ಬಿ ಜೆ ಅನನ್ಯ-60%, ಎ ಹರ್ಷಿತ-52% ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ.

ಮಣ್ಣು, ಬಣ್ಣದೊಂದಿಗೆ ಆಡುವಾಗ ಮಕ್ಕಳಲ್ಲಿ ಕ್ರಿಯಾಶೀಲತೆ ಬೆಳೆಯುತ್ತದೆ

ಬೇಸಿಗೆ ಶಿಬಿರದ ಸಮಾರೋಪದಲ್ಲಿ ಹಿರಿಯ ರಂಗಕರ್ಮಿ ಇಂದಿರಾ ನಾಯರ್ ಅಭಿಮತ

ಮೈಸೂರು,ಮೇ 13(ಎಂಟಿವೈ)- ಮಕ್ಕಳನ್ನು ಮಣ್ಣು ಹಾಗೂ ಬಣ್ಣಗಳೊಂದಿಗೆ ಆಟವಾಡಲು ಬಿಟ್ಟಾಗ ಮಾತ್ರ ಕ್ರಿಯಾಶೀಲತೆ ಹೆಚ್ಚಾಗುತ್ತದೆ ಎಂದು ಹಿರಿಯ ರಂಗಕರ್ಮಿ ಇಂದಿರಾ ನಾಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಹಾರ್ಡ್ವಿಕ್ ಶಾಲಾ ಆವರಣದಲ್ಲಿ ಭಾರತೀಯ ಶೈಕ್ಷಣಿಕ ರಂಗಭೂಮಿ, ವರ್ಣ ಕಲೆಕ್ಟಿವ್ ಹಾಗೂ ಆರ್ಟ್ ಸೆಂಟರ್ ಸಹಯೋಗದಲ್ಲಿ ನಡೆದ ಆರ್ಟ್ ಇಂಟ್ರೋ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಕಾಲದಲ್ಲಿ ಚಿಕ್ಕಂದಿನಲ್ಲಿ ಮಣ್ಣು, ಬಣ್ಣಗಳ ಜೊತೆಗೆ ಆಟ ಆಡುವ ಅವಕಾಶವಿತ್ತು. ಆದರೆ, ಇದೀಗ ಮಕ್ಕಳು ಮಣ್ಣು ಮುಟ್ಟಲು ಬಿಡುತ್ತಿಲ್ಲ. ಮಣ್ಣು ಮತ್ತು ಬಣ್ಣಗಳಲ್ಲಿ ಮಕ್ಕಳು ಆಟವಾಡಿದರೆ ಕ್ರಿಯಾತ್ಮಕತೆ, ಸೃಜನಶೀಲತೆ ಸೃಷ್ಟಿಯಾಗುತ್ತದೆ. ಈಗಿನ ಮಕ್ಕಳಿಗೆ ಅದನ್ನು ಕಲಿಸಬೇಕು. ಮಕ್ಕಳಲ್ಲಿರುವ ಕ್ರಿಯಾಶೀಲತೆಯನ್ನು ಇನ್ನಷ್ಟು ಬೆಳೆಸುವುದು ಪಾಲಕರ ಕರ್ತವ್ಯ ಎಂದು ತಿಳಿಸಿದರು.



ಭಾರತೀಯ ಶೈಕ್ಷಣಿಕ ರಂಗಭೂಮಿ ವತಿಯಿಂದ ನಡೆದ ಬೇಸಿಗೆ ಶಿಬಿರ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿರುವ ಮಕ್ಕಳು.

ಶಿಬಿರದಲ್ಲಿ ಮಕ್ಕಳಿಗೆ ಸಂಗೀತದ ತಾಳಗಳ ಬಗ್ಗೆ ತಿಳಿಸಿಕೊಟ್ಟ ಸಂಗೀತ ಸಂಯೋಜಕ ಶ್ರೀಕಂಠ ಮಾತನಾಡಿ, ತಾಳ ಜ್ಞಾನ ಸಹಜವಾಗಿಯೇ ಮಕ್ಕಳಲ್ಲಿ ಇರುತ್ತದೆ. ಆದರೆ, ಅದನ್ನು ಬೆಳೆಸುವ ನಿಟ್ಟಿನಲ್ಲಿ ಪೋಷಕರು ಯೋಚನೆ ಮಾಡಬೇಕು. ಆರ್ಟ್ ಇಂಟ್ರೋ ಕೇವಲ ಬೇಸಿಗೆ ಶಿಬಿರ ಮಾತ್ರವಲ್ಲದೆ, ಮುಂದುವರೆದ ದಿನಗಳಲ್ಲಿ ಕಲೆಗೆ ಸಂಬಂಧಿಸಿದ ಇನ್ನಷ್ಟು ಕಲಾ ತರಗತಿಗಳನ್ನು ವಿದ್ಯಾರ್ಥಿಗಳು ಹಾಗೂ ಕಲಾ ಶಿಕ್ಷಕರಿಗೆ ಉಪಯೋಗವಾಗುವ ತರಗತಿಗಳನ್ನು ನಡೆಸುವ ಯೋಚನೆಯಿದೆ. ಉಳಿದೆಲ್ಲ ವಿಭಾಗದ ವೃತ್ತಿಯಂತೆ ಕಲಾ ವಿಭಾಗದಲ್ಲೂ ಬೇಕಾದಷ್ಟು ಹೊಸ ಆಯ್ಕೆಗಳಿವೆ ಎಂದರು.

ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಸಾಹಿತ್ಯ, ಸಂಗೀತದೊಂದಿಗೆ ರಾಗ್ ಸರಾಗ್ ವೈವಿಧ್ಯದ ಕಾರ್ಯಕ್ರಮವನ್ನು ಶಿಬಿರಾರ್ಥಿಗಳು ಪ್ರಸ್ತುತಪಡಿಸಿದರು.

ಬೆಟ್ಟತ್ತೂರು ಕೆರೆ ಕಾಮಗಾರಿಗೆ ಅಡ್ಡಿ

● ಅರಣ್ಯ ಇಲಾಖೆ ವಿರುದ್ಧ ರೈತ ಸಂಘ ಅಸಮಾಧಾನ ● ಒತ್ತಾಯಕ್ಕೆ ಮಣಿದು ಕಾಮಗಾರಿಗೆ ಸೂಚನೆ

ಮಡಿಕೇರಿ, ಮೇ 13–ಬಾಳೆಲೆ ಹೋಬಳಿಯ ದೇವನೂರಿನ ಸುಮಾರು 8 ದಶಕಗಳ ಇತಿಹಾಸ ಹೊಂದಿರುವ ಕೆರೆಯ ದಂಡೆ ಕಾಮಗಾರಿಗೆ ಅರಣ್ಯ ಇಲಾಖೆ ಅಡ್ಡಿ ಪಡಿಸುತ್ತಿದೆ ಎಂದು ಆರೋಪಿಸಿ ರೈತ ಸಂಘದ ಕಾರ್ಯಕರ್ತರು ಅರಣ್ಯ ಇಲಾಖೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಬಾಳೆಲೆ ಗ್ರಾಮದ ದೇವನೂರಿನ ಬೆಟ್ಟತ್ತೂರು ಕೆರೆ ಎಂದೇ ಹೆಸರುವಾಸಿಯಾಗಿರುವ ಪೈಸಾರಿ ಕೆರೆ ಅಂದಾಜು 12.5 ಎಕರೆ ವಿಸ್ತೀರ್ಣವಿದ್ದು, ಸುಮಾರು 80 ವರ್ಷದ ಇತಿಹಾಸವಿರುವ ಈ ಕೆರೆ ಬಾಳೆಲೆ ಗ್ರಾಮ ಪಂಚಾಯಿತಿಗೆ ಒಳಪಡುತ್ತದೆ. ಮಳೆಗಾಲದಲ್ಲಿ ಕೆರೆ ನೀರು ತುಂಬಿ ಹೆಚ್ಚುವರಿ ನೀರು ಹರಿದು ಹೋಗಲು ಕೆರೆಯ ಎರಡೂ ಕಡೆಗಳಲ್ಲಿ ನಾಲೆಗಳ ವ್ಯವಸ್ಥೆಗಳಿವೆ. ಕೆರೆ ದಂಡೆಗೆ ಈ ವರ್ಷ ಸಣ್ಣ ನೀರಾವರಿ ಇಲಾಖೆ ಮೂಲಕ 1 ಕೋಟಿ 50 ಲಕ್ಷ ರೂ. ವೆಚ್ಚದಲ್ಲಿ ತಡೆಗೋಡೆ ಕಾಮಗಾರಿ ನಡೆಸಲಾಗುತ್ತಿದೆ.

ಈ ನಾಲೆಯಲ್ಲಿ ಸುಮಾರು 5–6 ವರ್ಷದಿಂದ ಬಿದಿರು ಹಾಗೂ ಇನಿತರ ಕುರುಚಲು ಕಾಡುಗಳು ಬೆಳೆದಿದ್ದು, ಇವುಗಳನ್ನು ಹಿಟಾಚಿ ಮೂಲಕ ತೆರವುಗೊಳಿಸಲು ಅರಣ್ಯ ಇಲಾಖೆ ಅಧಿಕಾರಿಗಳು ತಡೆಯೊಡ್ಡಿದ್ದರು. ಇದರಿಂದಾಗಿ ಕೆರೆಯ ತಡೆಗೋಡೆ ಕಾಮಗಾರಿಗೂ ತೊಡಕುಂಟಾಗಿತ್ತು ಅರಣ್ಯ ಇಲಾಖೆ ಧೋರಣೆ ಖಂಡಿಸಿ ಅಲ್ಲಿನ ಗ್ರಾಮಸ್ಥರು ರಾಜ್ಯ ರೈತ ಸಂಘದ ಪದಾಧಿಕಾರಿಗಳ ಗಮನ ಸೆಳೆದಿದ್ದರು.



ಬೆಟ್ಟತ್ತೂರು ಕೆರೆ ಕಾಮಗಾರಿ ವೀಕ್ಷಣೆ ವೇಳೆ ರೈತ ಸಂಘದ ಪದಾಧಿಕಾರಿಗಳು ಆರ್‌ಎಫ್‌ಓ ದೇವರಾಜು ಬಳಿ ಅಸಮಾಧಾನ ವ್ಯಕ್ತಪಡಿಸಿದರು.

ರೈತ ಸಂಘದ ಪದಾಧಿಕಾರಿಗಳು ಸೋಮವಾರ ಸ್ಥಳಕ್ಕೆ ಭೇಟಿ ನೀಡಿ, ಕೆರೆ ಹಾಗೂ ದಂಡೆಯ ತಡೆಗೋಡೆ ಕಾಮಗಾರಿಗಳನ್ನು ವೀಕ್ಷಿಸಿದರು. ಬಳಿಕ ಅರಣ್ಯ ಇಲಾಖೆಯ ಆನೆ ಚೌಕೂರು ವಿಭಾಗದ ಆರ್‌ಎಫ್‌ಓ ದೇವರಾಜು ಅವರನ್ನು ಸ್ಥಳಕ್ಕೆ ಬರಮಾಡಿಕೊಂಡ ರೈತ ಸಂಘದ ಪ್ರಮುಖರು, ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕೆರೆಯ 100 ಮೀಟರ್ ದೂರದಲ್ಲಿ ಅರಣ್ಯ ಕಂದಕದ ಮೂಲಕ ಗಡಿ ಗುರುತಿಸಲಾಗಿದೆ. ನಾಲೆ ಹಾಗೂ ಕೆರೆ ಕಂದಾಯ ಇಲಾಖೆಗೆ ಒಳಪಟ್ಟಿದ್ದು, ಅರಣ್ಯ ಇಲಾಖೆ ಅದರ ಮೇಲೆ ಹಕ್ಕು ಸ್ಥಾಪಿಸುತ್ತಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ ರೈತ ಸಂಘದ ಜಿಲ್ಲಾಧ್ಯಕ್ಷ ಮನು ಸೋಮಯ್ಯ, ಮಳೆಗಾಲ ಪ್ರಾರಂಭಕ್ಕೂ ಮುನ್ನ ಕಾಮಗಾರಿ ಮುಕ್ತಾಯವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕಾಮಗಾರಿಗಳಿಗೆ ವಿನಾಃ ಕಾರಣ ಅಡ್ಡಿ ಪಡಿಸದಂತೆ ಮನವಿ ಮಾಡಿದರು.

ಬಳಿಕ ರೈತ ಸಂಘದ ಒತ್ತಾಯಕ್ಕೆ ಮಣಿದ ಅರಣ್ಯಾಧಿಕಾರಿಗಳು, ಕಾಮಗಾರಿ ನಡೆಸುವಂತೆ ಸಣ್ಣ ನೀರಾವರಿ ಇಲಾಖೆಯ ಇಂಜಿನಿಯರ್ ಅರುಣ್ ಕುಮಾರ್ ಅವರಿಗೆ ಸೂಚಿಸಿದರು.

ಇದೇ ವೇಳೆ ರಾಜ್ಯ ರೈತ ಸಂಘದ ಕೊಡಗು ಜಿಲ್ಲಾ ಸಂಚಾಲಕ ಪುಚ್ಚಿಮಾಡ ಸುಭಾಸ್ ಸುಬ್ಬಯ್ಯ, ಮಾಯಾಮುಡಿ ಗ್ರಾಮದ ಅಧ್ಯಕ್ಷ ಪುಚ್ಚಿಮಾಡ ರಾಯ್ ಮಾದಪ್ಪ, ಪುಚ್ಚಿಮಾಡ ಸಂತೋಷ್, ಬಾಳಲೆ ಹೋಬಳಿ ಅಧ್ಯಕ್ಷ ಮೇಚ್ಚಮಾಡ ಕಿಸಾ ಮಾಚ್ಚಯ್ಯ, ಸಂಚಾಲಕ ಲೆಹರ್ ಬಿದ್ದಪ್ಪ, ಗ್ರಾಮಸ್ಥರಾದ ರಾಜು, ಮುದ್ದಿಯಡ ಪಿ.ದಿನೇಶ್, ಎಂ.ಎನ್.ಮುತ್ತಪ್ಪ, ಕೆ.ಎಂ.ಜಯ, ಕೆ.ಎಂ.ಗಣಪತಿ ಉಪಸ್ಥಿತರಿದ್ದರು.

ಮೊದಲು ಕಿರುಕುಳ ನಿಲ್ಲಿಸಬೇಕು:

ಅರಣ್ಯ ಗಡಿ ಪ್ರದೇಶಗಳ ನಿವಾಸಿಗಳಿಗೆ ವಿವಿಧ ಕಾನೂನುಗಳ ನೆಪ ಹೇಳಿ ಕಿರುಕುಳ ನೀಡುವುದನ್ನು ಮೊದಲು ನಿಲ್ಲಿಸಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಮನು ಸೋಮಯ್ಯ ಒತ್ತಾಯಿಸಿದರು.

ಬಾಳಲೆ ಗ್ರಾಮದ ದೇವನೂರಿನ ನಿವಾಸಿಗಳಿಗೆ ಹಿಂದೆಯೇ ಹಕ್ಕುಪತ್ರ ನೀಡಲಾಗಿದ್ದು, ಆರ್‌ಟಿಸಿಯಲ್ಲಿ ಅರಣ್ಯ ಎಂದು ನಮೂದು ಮಾಡುವ ಮೂಲಕ ಅಲ್ಲಿನ ನಿವಾಸಿಗಳಿಗೆ ಸರ್ಕಾರದಿಂದ ಯಾವುದೇ ಸೌಲಭ್ಯಗಳು ದೊರಕದಂತಾಗಿದೆ. ಅಲ್ಲದೇ ಕುಡಿಯುವ ನೀರಿಗೂ ಅಡ್ಡಿಪಡಿಸಿದ ಘಟನೆ ನಡೆದಿದೆ. ಇಂತಹ ಗೊಂದಲಗಳನ್ನು ಪರಿಹರಿಸಲು ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳು ಸ್ಥಳಕ್ಕಾಗಮಿಸಿ, ವಸ್ತು ಸ್ಥಿತಿಯನ್ನು ಅರಿಯಬೇಕು. ಇಲ್ಲವಾದಲ್ಲಿ ಅರಣ್ಯ ಇಲಾಖೆ ಮತ್ತು ಗ್ರಾಮಸ್ಥರ ನಡುವೆ ಸಮಸ್ಯೆ ಕಾಡುತ್ತದೆ ಎಂದು ಎಚ್ಚರಿಸಿದರು.


ಗಾಳಿ, ಮಳೆಗೆ ಹಾರಿ ಹೋದ ಮನೆ ಛಾವಣಿ

ಸಿದ್ದಾಪುರ: ಚೆನ್ನಂಗಿ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಭಾರಿ ಗಾಳಿ ಮಳೆಗೆ ಮನೆಯೊಂದರ ಛಾವಣಿ ಹಾರಿ ಹೋಗಿದ್ದು, ಮನೆಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಚೆನ್ನಯ್ಯನ ಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೆನ್ನಂಗಿ ಚಿಕ್ಕರೇಷ್ಮೆ ಹಾಡಿಯ ನಿವಾಸಿ ಮಂಜುನಾಥ್ ಅವರ ಮನೆಯ ಛಾವಣಿ ಹಾರಿ ಹೋಗಿದ್ದು, ಮಂಜುನಾಥ್, ತಮ್ಮ ಪತ್ನಿ ಹಾಗೂ ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮನೆಯಲ್ಲಿ ಎಲ್ಲರೂ ಮಲಗಿದ್ದಾಗ ಜೋರಾಗಿ ಗಾಳಿಯೊಂದಿಗೆ ಮಳೆ ಸುರಿಯಲಾರಂಭಿಸಿದೆ. ಈ ವೇಳೆ ಗಾಳಿಗೆ ಶೀಟುಗಳು ಹಾರಿ ಹೋಗಿವೆ. ನಂತರ ಎಲ್ಲರೂ ಮನೆಯಿಂದ ಹೊರ ಬಂದಿದ್ದಾರೆ.

ಸೋಮವಾರ ಗ್ರಾಮ ಪಂಚಾಯಿತಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಮೂರು ಲಕ್ಷ ರೂ.ನಷ್ಟ ಉಂಟಾಗಿದೆ ಎಂದು ಅಂದಾಜು ಪಡಿಸಿದರು. ಸೂಕ್ತ ಪರಿಹಾರ ನೀಡುವ ಮೂಲಕ ಮನೆ ದುರಸ್ತಿ ಪಡಿಸಬೇಕು ಎಂದು ಆದಿವಾಸಿ ಮುಖಂಡ ಸಿದ್ದಪ್ಪ ಒತ್ತಾಯಿಸಿದ್ದಾರೆ.



ಚೆನ್ನಂಗಿ ಚಿಕ್ಕರೇಷ್ಮೆ ಹಾಡಿಯ ಮಂಜುನಾಥ್ ಅವರ ಮನೆಯ ಛಾವಣಿ ಗಾಳಿಗೆ ಹಾರಿ ಹೋಗಿರುವುದು.

ಇಲಿಜಿಂಕೆ ಹತ್ಯೆ ಆರೋಪಿಗಳ ಬಂಧನ

ಸಿದ್ದಾಪುರ, ಮೇ 13– ಅಪರೂಪದ ಕಾಡುಪ್ರಾಣಿ ಇಲಿಜಿಂಕೆಯನ್ನು ಹತ್ಯೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಅರಣ್ಯಾಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ.

ತಟ್ಟಳ್ಳಿ ಹಾಡಿ ಮಾಲ್ದಾರೆಯ ಜೆ.ಎಂ.ಮಂಜು (31) ಹಾಗೂ ಪಿರಿಯಾಪಟ್ಟಣ ತಾಲೂಕಿನ ಹಬ್ಬಳತಿ ಗ್ರಾಮದ ಮೋಹನ್ ಅಲಿಯಾಸ್ ತಮ್ಮಣ್ಣ(19)ನನ್ನು ಬಂಧಿಸಲಾಗಿದ್ದು, ದಿಡ್ಡಳ್ಳಿ ಹಾಡಿಯ ಜಯಂತ್ ಅಲಿಯಾಸ್ ಪುಟ್ಟಣ್ಣ(50) ತಲೆ ಮರೆಸಿಕೊಂಡಿದ್ದಾನೆ.

ಮೂವರು ಆರೋಪಿಗಳು ಆನೆಚೌಕೂರು ವನ್ಯಜೀವಿ ವಲಯದ ಬಫರ್ ಝೋನ್ ವ್ಯಾಪ್ತಿಯ ದೇವಮಚ್ಚಿ ಮೀಸಲು ಅರಣ್ಯದ ಅಣ್ಣೆಕೆರೆ ಗಸ್ತಿನ ಕರ್ಲುಬಾಣಿ ಅರಣ್ಯ ಪ್ರದೇಶದಲ್ಲಿ ಗುಂಡು ಹಾರಿಸಿ 4–5 ವರ್ಷದ ಇಲಿಜಿಂಕೆಯನ್ನು ಬೇಟೆಯಾಡಿ ಸಾಗಿಸುತ್ತಿದ್ದಾಗ ಇಬ್ಬರು ಸಿಕ್ಕಿ ಬಿದ್ದಿದ್ದಾರೆ. ನಂತರ ಬಂಧಿತ ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಇಂದಿನಿಂದ ಕಾಡಾನೆ ಸೆರೆ ಕಾರ್ಯಾಚರಣೆ ಆರಂಭ

ವಿರಾಜಪೇಟೆ, ಮೇ 13(ಎಂಟಿವೈ)– ಕೊಡಗು ಜಿಲ್ಲೆಯ ವಿರಾಜಪೇಟೆ ವಿಭಾಗದ ತಿತಿಮತಿ ವಲಯ ವ್ಯಾಪ್ತಿಯ ಕಾಫಿ ಎಸ್ಟೇಟ್‌ಗಳಲ್ಲಿ ಬೀಡು ಬಿಟ್ಟಿರುವ ಮೂರು ಕಾಡಾನೆ ಸೆರೆ ಹಿಡಿದು ಸ್ಥಳಾಂತರಿಸುವ ಕಾರ್ಯಾಚರಣೆ ನಾಳೆ (ಮೇ 14)ಯಿಂದ ಆರಂಭವಾಗಲಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಮನವಿ ಮಾಡಿದೆ.

ತಿತಿಮತಿ ವಲಯದ ಬಾಡಗ ಬಾಣಂಗಾಲ ಕಾಫಿ ಎಸ್ಟೇಟ್‌ಗಳಲ್ಲಿ ಕಳೆದ ಕೆಲವು ದಿನಗಳಿಂದ ಕಾಣಿಸಿಕೊಂಡು ಸ್ಥಳೀಯರಲ್ಲಿ ಆತಂಕ ಉಂಟು ಮಾಡುತ್ತಿರುವ 3 ಕಾಡಾನೆ ಸೆರೆ ಹಿಡಿದು, ರೇಡಿಯೋ ಕಾಲರ್ ಅಳವಡಿಸಿ ಸ್ಥಳಾಂತರಿಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಬಾಡಗ ಬಾಣಂಗಾಲ, ಮೇಕೂರು, ಹೊಸ್ಕೇರಿ, ಮಾಲ್ದಾರೆ, ಚೆನ್ನಯ್ಯನಕೋಟೆ, ಕರಡಿಗೋಡು, ಪುಲಿಯೇರಿ, ಹೊಸೂರು, ಇಂಜಿಲಗೆರೆ ಗ್ರಾಮಸ್ಥರು, ಸಾರ್ವಜನಿಕರು, ತೋಟದ ಮಾಲೀಕರು, ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಎಚ್ಚರದಿಂದ ಇರುವಂತೆ ಅರಣ್ಯ ಇಲಾಖೆ ಕೋರಿದೆ.

ಮೂರ್ನಾಡಲ್ಲಿ ಶ್ರೀ ರಾಮಮಂದಿರ ಮರು ನಿರ್ಮಾಣಕ್ಕೆ ಶಿಲಾನ್ಯಾಸ



ಮೂರ್ನಾಡುವಿನ ಶ್ರೀರಾಮಮಂದಿರ ಮರು ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಲಾಯಿತು.

ಮಡಿಕೇರಿ, ಮೇ 13– ಸುಮಾರು 100 ವರ್ಷಗಳ ಇತಿಹಾಸವಿರುವ ಮೂರ್ನಾಡು ಪಟ್ಟಣದ ಶ್ರೀ ರಾಮಮಂದಿರವನ್ನು ಮರು ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಲಾಯಿತು.

ವಿಶ್ವ ಹಿಂದೂ ಪರಿಷತ್ ವತಿಯಿಂದ ಅಯೋಧ್ಯೆ, ತಲಕಾವೇರಿ, ಇರ್ಪುವಿನ ಮೃತ್ತಿಕೆ (ಮಣ್ಣು), ಕಾವೇರಿ, ಗಂಗಾ ಮತ್ತು ಕಾಶಿ ತೀರ್ಥವನ್ನು ಶಿಲಾನ್ಯಾಸದ ಸಂದರ್ಭ ಸಮರ್ಪಿಸಲಾಯಿತು.

ಮೊದಲ ಹಂತದಲ್ಲಿ ಸುಮಾರು 1.50 ಕೋಟಿ ರೂ. ವೆಚ್ಚದಲ್ಲಿ ರಾಮಮಂದಿರ ನಿರ್ಮಾಣಗೊಳ್ಳಲಿದ್ದು, 2ನೇ ಹಂತದಲ್ಲಿ ಸಭಾಭವನ ಹಾಗೂ 3ನೇ ಹಂತದಲ್ಲಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲಾಗುವುದು. ಒಟ್ಟು 4 ಕೋಟಿ ರೂ. ಯೋಜನಾ ವೆಚ್ಚವಾಗಿದೆ ಎಂದು ಶ್ರೀರಾಮ ಮಂದಿರ ಜೀರ್ಣೋದ್ಧಾರ ಸಮಿತಿ ತಿಳಿಸಿದೆ.

ಇದೇ ವೇಳೆ ಮೂರ್ನಾಡು ಶ್ರೀರಾಮಮಂದಿರ ಟ್ರಸ್ಟ್, ಶ್ರೀರಾಮಮಂದಿರ ಜೀರ್ಣೋದ್ಧಾರ ಸಮಿತಿ, ವಿಶ್ವ ಹಿಂದೂ ಪರಿಷತ್, ಮೂರ್ನಾಡುವಿನ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಗ್ರಾಮಸ್ಥರು ಹಾಗೂ ಭಕ್ತರು ಹಾಜರಿದ್ದರು.

ಮೇ 18, ಕ್ಯಾನ್ಸರ್ ತಪಾಸಣೆ

ಮಡಿಕೇರಿ: ವಿರಾಜಪೇಟೆ ರೋಟರಿ ಸಂಸ್ಥೆ ವತಿಯಿಂದ ಮೇ 18ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 3 ಗಂಟೆವರೆಗೆ ವಿರಾಜಪೇಟೆ ರೋಟರಿ ಶಾಲೆಯಲ್ಲಿ (ತಾಲೂಕು ಕಚೇರಿ ಬಳಿ) ಕ್ಯಾನ್ಸರ್ ತಪಾಸಣಾ ಉಚಿತ ಶಿಬಿರ ಆಯೋಜಿಸಲಾಗಿದೆ.

ಶಿಬಿರಕ್ಕೆ ಬರುವವರು ಅವರಿಗೆ ಸಂಬಂಧಿಸಿದ ವೈದ್ಯಕೀಯ ಮಾಹಿತಿ ಕಡತ ತರಬೇಕು. ಮಾಹಿತಿ ಮತ್ತು ನೋಂದಣಿಗಾಗಿ ಮೊ.ಸಂ: 7022924860, 9448448780 ಅನ್ನು ಸಂಪರ್ಕಿಸಬಹುದು ಎಂದು ವಿರಾಜಪೇಟೆ ರೋಟರಿ ಅಧ್ಯಕ್ಷ ಎಂ.ಎಂ.ಬನ್ನಿ ಪೂವಣ್ಣ, ಬೆಂಗಳೂರಿನ ಗ್ಲೋಬಲ್ ಫೌಂಡೇಷನ್ ಟ್ರಸ್ಟಿ ಕರ್ನಲ್ ಸಿ.ಎ.ಅಯ್ಯಪ್ಪ ತಿಳಿಸಿದ್ದಾರೆ.

ಬೃಂದಾ, ಸಾತ್ವಿಕಾಗೆ ಪದಕ

ಮಡಿಕೇರಿ, ಮೇ 13–ಕೇರಳದ ಕ್ಯಾಲಿಕಟ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಮಾದಾಪುರದ ಇಗ್ಗೋಡ್ಲು ಗ್ರಾಮದ ಎಚ್.ಎಸ್.ರಾಘವೇಂದ್ರ ಅವರ ಪುತ್ರಿ ಎಚ್.ಆರ್.ಬೃಂದಾ ಬೆಳ್ಳಿ ಪದಕ ಹಾಗೂ ಸತೀಶ್ ಕುಮಾರ್ ಅವರ ಪುತ್ರಿ ಬಿ.ಎಸ್.ಸಾತ್ವಿಕಾ ಕಂಚಿನ ಪದಕ ಗೆದ್ದಿದ್ದಾರೆ.

ಈ ಇಬ್ಬರು ವಿದ್ಯಾರ್ಥಿನಿಯರಿಗೆ ಸುದರ್ಶನ್ ಮಕ್ಕಂದೂರು ತರಬೇತಿ ನೀಡಿದ್ದಾರೆ.



ಎರೆಹುಳು ಗೊಬ್ಬರದಲ್ಲಿ ಜೇಡಿ ಮಣ್ಣು

ಮಡಿಕೇರಿ: ಕೃಷಿ ಇಲಾಖೆ ಮತ್ತು ನಬಾರ್ಡ್ ಸಂಸ್ಥೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕೃಷಿಕರಿಗೆ ಇತ್ತೀಚೆಗೆ ಉಚಿತವಾಗಿ ವಿತರಿಸಿರುವ ಎರೆಹುಳು ಗೊಬ್ಬರ ಕಳಪೆಯಾಗಿದೆ ಎಂದು ಬಸವನತ್ತೂರು ಗ್ರಾಮದ ರೈತರು ಆರೋಪಿಸಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕೃಷಿಕರಿಗೆ 18 ಬಗೆಯ ಹಣ್ಣಿನ ಗಿಡಗಳು ಹಾಗೂ 2 ಚೀಲ ಎರೆಹುಳು ಗೊಬ್ಬರ ವಿತರಿಸಲಾಗಿದೆ. ಕುಶಾಲನಗರ, ಕೂಡಿಗೆ, ಬಸವನತ್ತೂರು, ಚಿಕ್ಕತ್ತೂರು, ದೊಡ್ಡತ್ತೂರು, ಮದಲಾಪುರ, ಸೀಗೆಹೊಸೂರು, ಕಣಿವೆ, ಭುವನಗಿರಿ ವ್ಯಾಪ್ತಿಯ ರೈತರಿಗೆ ಕಳಪೆ ಗುಣಮಟ್ಟದ ಎರೆಹುಳು ಗೊಬ್ಬರ ನೀಡಲಾಗಿದೆ ಎಂದು ಆರೋಪಿಸಿದ್ದಾರೆ.



ಎರೆಹುಳು ಗೊಬ್ಬರದ ಚೀಲದಲ್ಲಿ ಜೇಡಿಮಣ್ಣು ಪತ್ತೆ.

ಇದೀಗ ಕಳೆದ ಒಂದು ವಾರದಿಂದ ಎರಡು ಬಾರಿ ಮಳೆಯಾದ ಹಿನ್ನೆಲೆಯಲ್ಲಿ ಹಣ್ಣಿನ ಗಿಡಗಳನ್ನು ನೆಡಲು ಸಿದ್ಧತೆ ಮಾಡಿಕೊಂಡ ರೈತರು, ಎರೆಹುಳು ಗೊಬ್ಬರದ ಚೀಲಗಳನ್ನು ತೆರೆದು ನೋಡಿದಾಗ ಚೀಲದಲ್ಲಿ ಜೇಡಿ ಮಣ್ಣು, ಬಳೆ ಹಾಗೂ ಕಲ್ಲಿನ ಚೂರುಗಳು ಸಿಕ್ಕಿವೆ. ಇದರಿಂದ ಪರಿಶಿಷ್ಟ ಜಾತಿಯ ಕೃಷಿಕರಿಗೆ ಮೋಸವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಕೃಷಿಕ ವರದರಾಜ್ ದಾಸ್ ಹಾಗೂ ಚಿಕ್ಕತ್ತೂರು ಗ್ರಾಮದ ರೈತ ಸುರೇಶ್ ಕುಮಾರ್, ಬದಲಿ ಗೊಬ್ಬರ ವಿತರಿಸಬೇಕೆಂದು ಒತ್ತಾಯಿಸಿದ್ದಾರೆ.

ತೊಂಡೆಹಣ್ಣು ಹಾಡಿಯಲ್ಲಿ ರೊಟ್ಟಿ ಹಬ್ಬ ಆಚರಣೆ



ಸೋಲಿಗರು ತೊಂಡೆಹಣ್ಣು ಪೋಡಿಯ ಕುಂಬೇಶ್ವರ ದೇವರಿಗೆ ರಾಗಿ ರೊಟ್ಟಿಯನ್ನು ನೈವೇದ್ಯಕ್ಕೆ ಇಟ್ಟು ಪೂಜೆ ಸಲ್ಲಿಸಿದರು.

ಯಳಂದೂರು: ತಾಲೂಕಿನ ಬಿಳಿಗಿರಿರಂಗನಬೆಟ್ಟದ ಮುತ್ತುಗದಗದ್ದೆ ಪೋಡು ಬಳಿಯ ತೊಂಡೆಹಣ್ಣು ಹಾಡಿಯಲ್ಲಿ ಸೋಲಿಗರು ರೊಟ್ಟಿ ಹಬ್ಬವನ್ನು ಸೋಮವಾರ ಸಂಭ್ರಮದಿಂದ ಆಚರಿಸಿದರು.

ಮೊದಲು ಸೋಲಿಗರು ಹತ್ತಿರದ ತೊಂಡೆಹಣ್ಣು ಪೋಡಿಗೆ ತೆರಳಿ ಕುಂಬೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ತಾವು ಬೆಳೆದ ಮೊದಲ ಫಸಲಿನ ರಾಗಿಯಿಂದ ತಯಾರಿಸಿದ ರೊಟ್ಟಿಯನ್ನು ನೈವೇದ್ಯಕ್ಕೆ ಇಟ್ಟು ಪೂಜೆ ಸಲ್ಲಿಸಿದರು. ಬಳಿಕ ಎಲ್ಲರೂ ಸಹಪಂಕ್ತಿ ಭೋಜನ ಮಾಡಿದರು.

ಮೊದಲ ರಾಗಿ ಫಸಲನ್ನು ದೇವರಿಗೆ ಅರ್ಪಿಸಿ, ಹರಕೆ ಸಲ್ಲಿಸುವ ತನಕ ಮೊದಲ ಫಸಲಿನ ರಾಗಿಯನ್ನು ಸೋಲಿಗರು ಉಪಯೋಗಿಸುವುದಿಲ್ಲ. ಬೇರೆಯವರು ಕೂಡ ಅದನ್ನು ತೆಗೆದುಕೊಂಡು ಹೋಗದಂತೆ ನೋಡಿಕೊಳ್ಳುತ್ತಾರೆ. ಪ್ರತಿ ಕುಟುಂಬ ತಲಾ ಒಂದು ಕೆಜಿಯಷ್ಟು ರಾಗಿಯನ್ನು ಸಂಗ್ರಹಿಸಿದ ಬಳಿಕ ಸ್ವಚ್ಛಗೊಳಿಸಿ ಹಿಟ್ಟು ತಯಾರಿಸುತ್ತಾರೆ. ಹಿಟ್ಟನ್ನು ಚೆನ್ನಾಗಿ ಕಲಸಿ ಮುತ್ತುಗದ ಎಲೆಯಲ್ಲಿ ರೊಟ್ಟಿಯನ್ನು ತಟ್ಟುತ್ತಾರೆ. ಬಳಿಕ ಅದನ್ನು ಹರಡಿದ್ದ ಕೆಂಡದ ಮೇಲಿಟ್ಟು ಬೇಯಿಸಿ, ಒಂದೆಡೆ ಗುಡ್ಡೆ ಹಾಕುತ್ತಾರೆ.

ಬಳಿಕ ರೊಟ್ಟಿಯನ್ನು ದೇವರಿಗೆ ಅರ್ಪಿಸಿ, ಪೂಜೆ ಸಲ್ಲಿಸಿ ಮುಂಬರುವ ದಿನಗಳಲ್ಲಿ ಉತ್ತಮ ಮಳೆ, ಬೆಳೆಯಾಗಲಿ, ಹಾಡಿಗಳಲ್ಲಿ ರೋಗರುಜಿನಗಳು ದೂರಾಗಲಿ ಎಂದು ಪ್ರಾರ್ಥಿಸುತ್ತಾರೆ. ನಂತರ ಪ್ರಸಾದ ಪಡೆದು ಒಟ್ಟಿಗೆ ಕುಳಿತು ಆಹಾರ ಸೇವಿಸುತ್ತಾರೆ.

ಅರಣ್ಯಕ್ಕೆ ಕಳೆ ತಂದ ಮುಂಗಾರು ಮಳೆ

● ಚಿಗುರೊಡೆಯುತ್ತಿರುವ ಗಿಡ-ಮರ ● ನಿಟ್ಟುಸಿರು ಬಿಟ್ಟ ವನ್ಯಜೀವಿಗಳು

ಚಾಮರಾಜನಗರ, ಮೇ 13– ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ಉತ್ತಮವಾಗಿ ಪೂರ್ವ ಮುಂಗಾರು ಹಂಗಾಮಿನ ಮಳೆಯಾಗಿದ್ದು, ರಣ ಬಿಸಿಲಿನಿಂದ ಕಂಗೆಟ್ಟಿದ್ದ ಅರಣ್ಯ ಪ್ರದೇಶಗಳ ವನ್ಯಜೀವಿಗಳು ಹಾಗೂ ಅರಣ್ಯಾಧಿಕಾರಿಗಳು ನಿಟ್ಟುಸಿರು ಬಿಡುವಂತಾಗಿದೆ.

ಈ ಬಾರಿ ಜಿಲ್ಲೆಯಲ್ಲಿ 35 ರಿಂದ 40 ಡಿಗ್ರಿ ಸೆಲಿಯಸ್ಸ್‌ನಷ್ಟು ಬಿಸಿಲಿನ ತಾಪಮಾನ ದಾಖಲಾಗಿ ರಣ ಬಿಸಿಲಿಗೆ ವನ್ಯ ಸಂಪತ್ತು ಒಣಗಿ ಬೆಂಡಾಗಿತ್ತು. ಇದರಿಂದ ಕಾಳ್ಗಿಚ್ಚಿನ ಆತಂಕ ಎದುರಾಗಿತ್ತು. ಮತ್ತೊಂದೆಡೆ ವನ್ಯಜೀವಿಗಳು ಜೀವ ಜಲಕ್ಕಾಗಿ ಅಲೆದಾಡುವಂತ ಪರಿಸ್ಥಿತಿ ನಿರ್ಮಾಣವಾಗಿತ್ತು.

ಆದರೆ, ಜಿಲ್ಲೆಯಲ್ಲಿ ವಾರದಿಂದ ಆಗಾಗ್ಗೆ ಉತ್ತಮ ಮಳೆ ಆಗುತ್ತಿರುವುದರಿಂದ ಅರಣ್ಯ ಪ್ರದೇಶದಲ್ಲಿ ಒಣಗಿ ನಿಂತಿದ್ದ ಗಿಡ ಮರಗಳು ಚಿಗುರೊಡೆಯುತ್ತಿದ್ದು, ಕೆರೆಕಟ್ಟೆಗಳಲ್ಲಿ ನೀರು ಸಂಗ್ರಹವಾಗುತ್ತಿದೆ. ಇದರಿಂದ ಆತಂಕ ದೂರವಾಗಿ ಮತ್ತೆ ವನ್ಯಸಂಪತ್ತಿನಲ್ಲಿ ಜೀವ ಕಳೆ ಬರುತ್ತಿದೆ.

ಕಾಡಿಗೂ ಖುಷಿ ತಂದ ಮಳೆ: ಜಿಲ್ಲೆಯ ಬಂಡೀಪುರ, ಬಿಳಿಗಿರಿರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತಾರಣ್ಯ, ಮಲೆಮಹದೇಶ್ವರಬೆಟ್ಟ ಹಾಗೂ ಕಾವೇರಿ ವನ್ಯಜೀವಿಧಾಮಗಳಲ್ಲಿ ನಾಲ್ಕೈದು ತಿಂಗಳಿಂದ ಮಳೆ ಇಲ್ಲದೇ ಈ ಕಾಡುಗಳು ಆತಂಕ ಎದುರಿಸುತ್ತಿದ್ದವು. ಬಿಆರ್‌ಟಿ ವ್ಯಾಪ್ತಿಯಲ್ಲಂತೂ ಸಾಕಷ್ಟು ಬೆಂಕಿ ಅವಘಡಗಳು ನಡೆದು ನೂರಾರು ಎಕರೆ ಅರಣ್ಯ ಪ್ರದೇಶ ಭಸ್ಮವಾಗಿತ್ತು. ಒಣಗಿ ಬೆಂಡಾಗಿದ್ದ ಕಾಡಿಗೆ ದುಷ್ಕರ್ಮಿಗಳು ಬೆಂಕಿ ಹಾಕಿ ತಮ್ಮ ಬೇಳೆ ಬೇಯಿಸಿಕೊಂಡರು. ಆದರೆ, ಅದರಿಂದ ವನ್ಯಜೀವಿಗಳಿಗೆ ಆದ ನಷ್ಟ, ಆತಂಕ ಅಷ್ಟಿಷ್ಟಲ್ಲ. ಇತ್ತ ಅಧಿಕಾರಿಗಳಿಗೂ ಈ ದುರ್ಘಟನೆಗಳು ತಲೆನೋವಾಗಿ, ನೆಮ್ಮದಿಗೆ ಭಂಗ ತಂದಿದ್ದವು. ಒಂದು ವಾರದಿಂದೀಚೆಗೆ ಮಳೆ ಆಗುತ್ತಿರುವುದು ನಾಡಿಗೆ ಅಷ್ಟೆಯಲ್ಲ, ಕಾಡಿಗೂ ಖುಷಿ ನೀಡಿದೆ. ಇದರಿಂದ ವನ್ಯಜೀವಿಗಳು ಸಹ ನಿಟ್ಟುಸಿರು ಬಿಡುವಂತಾಗಿದೆ.



ಆತಂಕ ದೂರ: ಜಿಲ್ಲೆಯ ವ್ಯಾಪ್ತಿಯ ಬಂಡೀಪುರ, ಬಿಆರ್‌ಟಿ, ಮಲೆಮಹದೇಶ್ವರಬೆಟ್ಟ, ಕಾವೇರಿ ವನ್ಯಜೀವಿ ಧಾಮಗಳಲ್ಲಿ ಮಳೆ ಆಗುತ್ತಿದೆ. ಇದರಿಂದ ಅರಣ್ಯದಲ್ಲಿ ಬೆಂಕಿ ಅವಘಡಕ್ಕೆ ಸದ್ಯದ ಮಟ್ಟಿಗೆ ತಪ್ಪಲಿದೆ. ನಿಜಕ್ಕೂ ಇದು ಖುಷಿ ವಿಚಾರ. ಇನ್ನು ಹೆಚ್ಚಿನ ಮಳೆಯಾಗುವ ಸಾಧ್ಯತೆ ಇರುವುದರಿಂದ ಆತಂಕ ಮತ್ತಷ್ಟು ದೂರವಾಗಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಕೆರೆಕಟ್ಟೆಯಲ್ಲಿ ನೀರು ಸಂಗ್ರಹ

ಕಳೆದ ವಾರದಿಂದ ಅರಣ್ಯ ಪ್ರದೇಶದಲ್ಲೂ ಉತ್ತಮ ಮಳೆ ಆಗುತ್ತಿರುವುದರಿಂದ ಕೆರೆಕಟ್ಟೆಗಳಲ್ಲಿ ನೀರು ಸಂಗ್ರಹವಾಗುತ್ತಿದೆ. ಇತ್ತ ಹಳ್ಳ ಕೊಳ್ಳಗಳಲ್ಲೂ ನೀರು ಹರಿಯುತ್ತಿದೆ. ಇದರಿಂದ ವನ್ಯಜೀವಿಗಳಿಗೆ ತಲೆದೋರಿದ್ದ ಕುಡಿಯುವ ನೀರಿನ ಸಮಸ್ಯೆ ಕೊಂಚ ನೀಗಿದಂತಿದೆ. ಇತ್ತ ಸಂಪೂರ್ಣವಾಗಿ ಒಣಗಿ ನಿಂತಿದ್ದ ಮರಗಳು ಚಿಗುರೊಡೆಯಲು ಆರಂಭಿಸಿವೆ. ಇದರಿಂದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗೆ ಕೊಂಚ ನಿರಾಳ ಮೂಡಿಸಿದೆ.

ಕಾಡಿನಲ್ಲಿ ಉತ್ತಮವಾಗಿ ಮಳೆ ಬಿದ್ದಿರುವುದರಿಂದ ಹಸಿರು ಚಿಗುರಲಾರಂಭಿಸಿದ್ದು, ಪ್ರಾಣಿಗಳಿಗೆ ಮೇವು ಸಿಗುತ್ತಿದೆ. ಬಿದಿರು ಶೀಘ್ರವಾಗಿ ಬೆಳೆಯುತ್ತದೆ. ಕೆಲವೆಡೆ ಕೆರೆಗಳು ಬೇಸಿಗೆ ಕಾಲದಲ್ಲಿ ಬರಿದಾಗಿ ನೀರಿನ ಸಮಸ್ಯೆಯಿಂದ ಜಿಂಕೆಗಳು ರೈತರ ಜಮೀನುಗಳತ್ತ ಬರುತ್ತಿದ್ದವು. ವಾರದಿಂದ ಉತ್ತಮ ಮಳೆಯಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಮಳೆಗೆ ಕೆರೆಗಳು ತುಂಬಿ ನೀರಿನ ಸಮಸ್ಯೆ ದೂರವಾಗಲಿದೆ.

ರೈತರ ಸಮಸ್ಯೆ ಬಗೆಹರಿಸುವ ಭರವಸೆ



ಕೊಳ್ಳೇಗಾಲ ಪಟ್ಟಣದಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಹಲವಾರು ರೈತ ಮುಖಂಡರು.

ಕೊಳ್ಳೇಗಾಲ, ಮೇ 13–ಜೋಳ, ಬಾಳೆ ಸೇರಿದಂತೆ ಕೆಲ ಬೆಳೆಗಳು ಫಸಲ್ ಬೀಮಾ ಯೋಜನೆಗೆ ಸೇರುವುದಿಲ್ಲ ಎಂಬ ರೈತರ ಮನವಿಯನ್ನು ಪರಿಗಣಿಸಲಾಗಿದ್ದು, ಈ ಸಂಬಂಧ ರೈತರ ಸಮಸ್ಯೆ ಬಗೆಹರಿಸುವಂತೆ ಜಿಲ್ಲಾಧಿಕಾರಿ ಗಮನಕ್ಕೆ ತರಲಾಗುವುದು ಎಂದು ಉಪವಿಭಾಗಾಧಿಕಾರಿ ಶಿವಮೂರ್ತಿ ಭರವಸೆ ನೀಡಿದರು.

ಪಟ್ಟಣದಲ್ಲಿ ನಡೆದ ರೈತ ಮುಖಂಡರು ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಲಕ್ಷಾಂತರ ರೂ. ಖರ್ಚು ಮಾಡಿ ಕಬ್ಬು, ಬಾಳೆ ಬೆಳೆದ ರೈತರಿಗೆ ನಷ್ಟವಾಗಿದೆ. ಈ ವಿಚಾರವೂ ನನ್ನ ಗಮನದಲ್ಲಿದೆ. ರೈತರ ಬೆಳೆಗಳು ಹಾಳಾದರೆ ಫಸಲ್ ಬೀಮಾ ಯೋಜನೆಯ ವಿಮೆಗೆ ಸೇರಿಸಿದರೆ, ಅವರಿಗೆ ಸಾಕಷ್ಟು ಅನುಕೂಲಗಳಾಗಲಿವೆ ಎಂದು ತಿಳಿಸಿದರು.

ಫಸಲ್ ಬೀಮಾ ಯೋಜನೆಯಲ್ಲಿ ರೈತರಿಗೆ ಅನ್ಯಾಯವಾಗುತ್ತಿರುವ ಕುರಿತು ಕ್ರಮ ವಹಿಸಲಾಗುವುದು. ರೈತರ ಬೇಡಿಕೆಯಂತೆ ಹಲವು ಬಸ್‌ಗಳು ದೊಡ್ಡಿಂದುವಾಡಿ ಗ್ರಾಮ ಪ್ರವೇಶಿಸಿ ತೆರಳುವಂತೆ ಡಿಪೋ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅದೇ ರೀತಿ ನಾನ್‌ಸ್ಟಾಪ್ ಬಸ್‌ಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಬಸ್‌ಗಳು ಎಂದಿನಂತೆ ಸತ್ತೇಗಾಲ ಗ್ರಾಮಕ್ಕೆ ತೆರಳುವಂತೆ ಸೂಚಿಸಲಾಗಿದೆ ಎಂದರು.

ಸಭೆಯಲ್ಲಿ ರೈತ ಮುಖಂಡ ಶೈಲೇಂದ್ರ ಹಾಗೂ ಮತ್ತಿತರರು ಹಾಜರಿದ್ದರು.

ಕಬ್ಬಹಳ್ಳಿ ವಿದ್ಯಾರ್ಥಿನಿಲಯಕ್ಕೆ ಶೇ.95ರಷ್ಟು ಫಲಿತಾಂಶ

ಬೇಗೂರು, ಮೇ 13– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಮೀಪದ ಕಬ್ಬಹಳ್ಳಿ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಶೇ.95 ರಷ್ಟು ಫಲಿತಾಂಶ ಬಂದಿದೆ.

ವಿದ್ಯಾರ್ಥಿನಿಲಯದ ಒಟ್ಟು 17 ವಿದ್ಯಾರ್ಥಿಗಳಲ್ಲಿ 16 ವಿದ್ಯಾರ್ಥಿಗಳು ಪಾಸಾಗಿದ್ದು, ಎಸ್.ಜಿ.ಮಂಜುನಾಥ್ 532 ಅಂಕ ಗಳಿಸಿದ್ದಾನೆ. ಕನ್ನಡ ಭಾಷೆಯಲ್ಲಿ 125ಕ್ಕೆ 125 ಅಂಕ ಪಡೆದಿದ್ದಾನೆ. 6 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ 9 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಹಾಗೂ ಮೇಲ್ವಿಚಾರಕ ಎಚ್.ಎಂ.ಪೃಥ್ವಿರಾಜ್ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಚನ್ನಬಸವೇಶ್ವರ ಶಾಲೆಗೆ ಶೇ.96 ಫಲಿತಾಂಶ

ಚಾ.ನಗರ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನ ಹರವೆ ಗ್ರಾಮದ ಚನ್ನಬಸವೇಶ್ವರ ಆಂಗ್ಲ ಮಾಧ್ಯಮ ಶಾಲೆಗೆ ಶೇ.96ರಷ್ಟು ಫಲಿತಾಂಶ ಬಂದಿದೆ.

ಶಾಲೆಯ ಒಟ್ಟು 22 ವಿದ್ಯಾರ್ಥಿಗಳು ಪರೀಕ್ಷೆ ಹಾಜರಾಗಿದ್ದು, ಇದರಲ್ಲಿ 21 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳನ್ನು ಚನ್ನಬಸವೇಶ್ವರ ವಿದ್ಯಾಸಂಸ್ಥೆ ಅಧ್ಯಕ್ಷ ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣಸ್ವಾಮೀಜಿ, ಕಾರ್ಯದರ್ಶಿ ಎಚ್.ಎಸ್.ಗಿರೀಶ್, ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಅಭಿನಂದಿಸಿದ್ದಾರೆ.

ಇಂಡಿಗನತ್ತ ಗ್ರಾಮಸ್ಥರ ಆರೋಗ್ಯ ವಿಚಾರಿಸಿದ ಡಿಸಿ

ಹನೂರು, ಮೇ 13–ಮಲೆಮಹದೇಶ್ವರಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಡಿಗನತ್ತ ಗ್ರಾಮಕ್ಕೆ ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳೊಂದಿಗೆ ಸೋಮವಾರ ಭೇಟಿ ನೀಡಿ, ಗ್ರಾಮಸ್ಥರ ಆರೋಗ್ಯ ವಿಚಾರಿಸಿ, ಸಮಸ್ಯೆ ಆಲಿಸಿದರು.

ಇಂಡಿಗನತ್ತ, ತೊಳಸಿಕೆರೆ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಮೂಲಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಈ ಬಾರಿಯ ಲೋಕಸಭೆ ಚುನಾವಣೆ ಬಹಿಷ್ಕರಿಸಿದ್ದರು. ಆದರೆ, ಏ.26ರಂದು ನಡೆದ ಮತದಾನ ವೇಳೆ ಕೆಲ ಗ್ರಾಮಸ್ಥರು ಮತಗಟ್ಟೆ ಧ್ವಂಸಗೊಳಿಸಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿದ್ದರು. ಈ ಸಂಬಂಧ 250ಕ್ಕೂ ಹೆಚ್ಚು ಜನರ ವಿರುದ್ಧ ಪ್ರಕರಣ ದಾಖಲಾಗಿ, 40ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿತ್ತು.

ಮತ್ತೆ ಕೆಲವರು ಬಂಧನದ ಭೀತಿಯಿಂದ ಮನೆಗಳಿಗೆ ಬೀಗ ಜಡಿದು, ತಮ್ಮ ಮಕ್ಕಳು, ಬಾಣಂತಿಯರು, ಗರ್ಭಿಣಿಯರು ಹಾಗೂ ವೃದ್ಧರನ್ನು ಗ್ರಾಮದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಇದರಿಂದ ಅವರಿಗೆ ಒಪ್ಪತ್ತಿನ ಊಟಕ್ಕೂ ಪರಿತಪಿಸುವಂತಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಭೇಟಿ ನೀಡಿ, ಪರಿಶೀಲಿಸಿ ಗ್ರಾಮಸ್ಥರ ಆರೋಗ್ಯ ಹಾಗೂ ಸಮಸ್ಯೆ ವಿಚಾರಿಸಿದರು. ಮಕ್ಕಳು, ವೃದ್ಧರು, ಬಾಣಂತಿಯರು ಹಾಗೂ ಗರ್ಭಿಣಿಯರಿಗೆ ಆಹಾರದ ನೀಡಲು ಜಿಲ್ಲಾಡಳಿತ ಮುಂದಾಗಿದೆ. ಈಗಾಗಲೇ ನಿಮ್ಮ ನೋವು ನನಗೆ ತಿಳಿದಿದೆ. ರಸ್ತೆ, ವಿದ್ಯುತ್ ಸೌಕರ್ಯ ಕಲ್ಪಿಸುವ ದಿಸೆಯಲ್ಲಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗಿದೆ. ನಿಮ್ಮ ಸಮಸ್ಯೆಗಳು ಏನೇ ಇದ್ದರೂ ಬಗೆಹರಿಸಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದರು.



ಇಂಡಿಗನತ್ತ ಗ್ರಾಮಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಶಿಲ್ಪನಾಗ್ ಗ್ರಾಮಸ್ಥರ ಆರೋಗ್ಯ ವಿಚಾರಿಸಿದರು.

ಇದೇ ವೇಳೆ ಜಿಲ್ಲಾಧಿಕಾರಿ ಶಿಲ್ಪನಾಗ್, ಮೆಂದಾರೆ ಗ್ರಾಮದ ಸೋಲಿಗ ಸಮುದಾಯದವರನ್ನು ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಲ್ಲಾ ಪಂಚಾಯಿತಿ ಸಿಇಓ ಆನಂದ್ ಪ್ರಕಾಶ್ ಮೀನಾ, ತಾಪಂ ಇಓ ಉಮೇಶ್, ಟಿಹೆಚ್‌ಓ ಪ್ರಕಾಶ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಬ್ರಹ್ಮ ರಥೋತ್ಸವ

ಮೈಸೂರು, ಮೇ 13– ಮೈಸೂರಿನ ಗೋಕುಲಂ, ಮೂರನೇ ಹಂತದಲ್ಲಿನ ಶ್ರೀ ಕೃಷ್ಣ ದೇವಾಲಯದ ಮೂರನೇ ವಾರ್ಷಿಕೋತ್ಸವ ಪ್ರಯುಕ್ತ ಬ್ರಹ್ಮರಥೋತ್ಸವ ಜರುಗಲಿದೆ. ಮಂಗಳವಾರ(ಮೇ 14)ದಿಂದ ಮೇ 20ರವರೆಗೆ ಗರುಡೋತ್ಸವ, ಸುದರ್ಶನ ಹೋಮ, ಬ್ರಹ್ಮ ರಥೋತ್ಸವ ಮುಂತಾದ ಪೂಜಾ ಮಹೋತ್ಸವಗಳು ನೆರವೇರಲಿದ್ದು, ಮೇ 20, 25 ಹಾಗೂ 26ರಂದು ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್‌ನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಿಟಕಿ ಮೂಲಕ ಡೋರ್‌ಲಾಕ್ ತೆಗೆದು 14 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಮೈಸೂರು, ಮೇ 13(ಎಸ್‌ಬಿಡಿ)– ಕಿಟಕಿ ಮೂಲಕ ಡೋರ್ ಲಾಕ್ ತೆಗೆದು ಲಕ್ಷಾಂತರ ಮೌಲ್ಯದ ಚಿನ್ನಾಭರಣ ಕಳವು ಮಾಡಿರುವುದಾಗಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಕ್ತಿನಗರ ನಿವಾಸಿ ಅಶೋಕ್ ಕುಮಾರ್, ತಮ್ಮ ಮನೆಯಲ್ಲಿದ್ದ 14 ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ಕಳ್ಳತನ ಮಾಡಿದ್ದಾರೆ ಎಂದು ದೂರು ನೀಡಿದ್ದಾರೆ.

ಗಾಂಧಿನಗರದಲ್ಲಿರುವ ಅತ್ತೆಗೆ ಆರೋಗ್ಯ ಸರಿಯಿಲ್ಲದ ಕಾರಣ ಪತ್ನಿ ಹಾಗೂ ಮಕ್ಕಳನ್ನು ಅವರ ಮನೆಗೆ ಕಳುಹಿಸಿದ್ದೆ. ಮೇ 11ರಂದು ರಾತ್ರಿ ಮನೆಗೆ ಡೋರ್ ಲಾಕ್ ಮಾಡಿಕೊಂಡು ನಾನೂ ಕೂಡ ಅತ್ತೆ ಮನೆಗೆ ಹೋಗಿ, ಅಲ್ಲಿಯೇ ಉಳಿದುಕೊಂಡಿದ್ದೆ. ಮರುದಿನ ಬೆಳಗ್ಗೆ 10 ಗಂಟೆಗೆ ನಮ್ಮ ಮನೆಗೆ ವಾಪಸ್ ಬಂದಾಗ ಮನೆಯ ಮುಂಬಾಗಿಲು ತೆರೆದಿತ್ತು. ಒಳಹೋದಾಗ ಬೆಡ್ ರೂಂನ ಬೀರುವಿನಲ್ಲಿದ್ದ ಚಿನ್ನಾಭರಣದ ಬಾಕ್ಸ್‌ಗಳು ಹಾಸಿಗೆ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕಳ್ಳರು ಕಿಟಕಿಯ ಮೂಲಕ ಕೈ ಹಾಕಿ ಮುಂಬಾಗಿಲಿನ ಲಾಕ್ ತೆಗೆದು ಮನೆಯೊಳಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಉದಯಗಿರಿ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕರ್ತವ್ಯನಿರತ ಪೊಲೀಸರ ಮೇಲೆ ಹಲ್ಲೆ: ಆರು ಮಂದಿ ವಿರುದ್ಧ ಕೇಸ್

ಮೈಸೂರು, ಮೇ 13– ಕರ್ತವ್ಯನಿರತ ಪೊಲೀಸರ ಮೇಲೆ ಹಲ್ಲೆ ನಡೆಸಿರುವ ಆರೋಪದಡಿ ಆರು ಮಂದಿ ವಿರುದ್ಧ ಮೈಸೂರಿನ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೀರ್ತಿರಾಜ್, ಸುರೇಶ್, ಶರತ್, ಮದನ್, ಆದರ್ಶ್, ಚಿದಾನಂದ ವಿರುದ್ಧ ವಿದ್ಯಾರಣ್ಯಪುರಂ ಠಾಣೆ ಸಿಬ್ಬಂದಿ ಕೆಂಪರಾಜು ದೂರು ನೀಡಿದ್ದಾರೆ. ಸಹೋದ್ಯೋಗಿ ಕರಿಯಪ್ಪ ಅವರೊಂದಿಗೆ ಮೇ 11ರಂದು ಮಧ್ಯರಾತ್ರಿ 12 ಗಂಟೆ ಸಮಯದಲ್ಲಿ ಬೀಟ್‌ನಲ್ಲಿದ್ದಾಗ ಶಿವಣ್ಣ ಪಾರ್ವತಿ ಬೀಗರ ಊಟಣ ಕೂಟ ಚೌಲ್ಟ್ರಿ ಎದುರಿನ ರಸ್ತೆಯಲ್ಲಿ ಐದಾರು ಜನ ಮದ್ಯಪಾನ ಮಾಡುತ್ತಾ ಜೋರಾಗಿ ಕೂಗಾಡುತ್ತಿದ್ದರು. ಅವರ ಬಳಿ ಹೋಗಿ ಹೆಸರು, ವಿಳಾಸ ತಿಳಿದುಕೊಂಡು ಕೂಗಾಡದಂತೆ ತಿಳಿ ಹೇಳಿದೆವು. ಅಷ್ಟಕ್ಕೆ ಅವರು ಏಕಾಏಕಿ ಅವಾಚ್ಯ ಶಬ್ದಗಳಿಂದ ನಮ್ಮನ್ನು ನಿಂದಿಸಿದ್ದಲ್ಲದೆ ಕೊಲೆ ಬೆದರಿಕೆ ಹಾಕಿದರು. ಈ ಬಗ್ಗೆ ಕರಿಯಪ್ಪ ಗರುಡಾ ಕರ್ತವ್ಯದಲ್ಲಿದ್ದವರು ಹಾಗೂ ಠಾಣಾಧಿಕಾರಿಗೆ ಮಾಹಿತಿ ನೀಡಿ ಸ್ಥಳಕ್ಕೆ ಸಿಬ್ಬಂದಿ ಕಳುಹಿಸುವಂತೆ ಹೇಳಿದರು. ಆಗ ಒಬ್ಬ ನನ್ನ ಕೊರಳಪಟ್ಟಿ ಹಿಡಿದು, ಕೈಯಲ್ಲಿ ತಲೆಗೆ ಹೊಡೆದ. ಮತ್ತೊಬ್ಬ ಕಾಲಿನಿಂದ ಒದ್ದ. ರಕ್ಷಣೆಗೆ ಬಂದ ಕರಿಯಪ್ಪನ ಮೇಲೂ ಹಲ್ಲೆ ಮಾಡಿದರು. ಅಷ್ಟರಲ್ಲಿ ಅಕ್ಕಪಕ್ಕದ ಬೀಟ್ ಸಿಬ್ಬಂದಿ ಹಾಗೂ ಸಾರ್ವಜನಿಕರು ಬಂದು ಅವರಿಂದ ಬಿಡಿಸಿದರು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಒಂದನೇ ಪುಟದಿಂದ

ರೇವಣ್ಣಗೆ ಜಾಮೀನು

ನಾನು ಪುನರಾವರ್ತನೆ ಮಾಡುವುದಿಲ್ಲ. ಹೀಗಾಗಿ ತಾವು ಕೂಡ ವಾದ ಮಂಡಿಸಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ಕೊನೆಗೆ ನ್ಯಾಯಾಧೀಶರು ಇಬ್ಬರು ಎಸ್‌ಪಿಪಿಗಳ ವಾದಕ್ಕೆ ಅನುಮತಿ ನೀಡಿದರು.

ಆರೋಪಗಳೆಲ್ಲಾ ಅಪ್ರಸ್ತುತ: ಪ್ರತಿವಾದ ಮಂಡಿಸಿದ ಎಸ್.ವಿ.ನಾಗೇಶ್, ರೇವಣ್ಣ ಅವರ ವಿರುದ್ಧ ಭಾರತೀಯ ದಂಡ ಸಂಹಿತೆ 364ಎ ಮತ್ತು 365 ಸೆಕ್ಷನ್ ಹಾಕಿರುವುದೇ ಕಾನೂನುಬಾಹಿರ. ಸೆಕ್ಷನ್ 364ಎ ಅಂದರೆ, ಯಾರನ್ನಾದರೂ ಅಪಹರಿಸಿ, ಹಣ ಅಥವಾ ಇನ್ನಾವುದಕ್ಕಾದರೂ ಬೇಡಿಕೆ ಇಡಬೇಕು. ಅಪಹರಿಸಲ್ಪಟ್ಟವರನ್ನು ಹತ್ಯೆ ಮಾಡಬೇಕು ಅಥವಾ ಗಾಯಗೊಳಿಸಬೇಕು. ಇಲ್ಲವೇ ಬೆದರಿಕೆ ಹಾಕಿರಬೇಕು. ಈ ಪ್ರಕರಣದಲ್ಲಿ ಇದ್ಯಾವುದೂ ನಡೆಯದೇ ಇರುವುದರಿಂದ ರೇವಣ್ಣ ಅವರ ವಿರುದ್ಧ ಹಾಕಿರುವ ಸೆಕ್ಷನ್ 364ಎ ಅವರ ಮೇಲಿನ ಆರೋಪಕ್ಕೆ ಅನ್ವಯಿಸುವುದಿಲ್ಲ. ಸಂತ್ರಸ್ತೆಯನ್ನು ಪ್ರಕರಣದ 2ನೇ ಆರೋಪಿ ಕರೆದುಕೊಂಡು ಹೋದ ನಂತರ ಆಕೆ ಚುನಾವಣೆಯ ದಿನ ಬಂದು ಮತ ಹಾಕಿದ್ದಾರೆ. ಕೆಲ ದಿನದ ನಂತರ ಮತ್ತೇ ಆತನ ಜೊತೆ ಹೋಗಿದ್ದಾರೆ. ಹೀಗಿರುವಾಗ ಇದನ್ನು ಅಪಹರಣ ಎಂದು ಕರೆಯಲು ಸಾಧ್ಯವೇ? ಎಂದು ಪ್ರಶ್ನಿಸಿದರಲ್ಲದೇ, ಅಪಹರಿಸಲ್ಪಟ್ಟಿದ್ದಾರೆ ಎನ್ನಲಾದ ಮಹಿಳೆಯನ್ನು ಎಸ್‌ಐಟಿ ರಕ್ಷಿಸಿದ ನಂತರ ಈವರೆಗೂ ಕಲಂ 164ರಡಿ ಹೇಳಿಕೆ ದಾಖಲಿಸಿಲ್ಲ. ಆದರೆ, ಕಲಂ 161ರಡಿ ತನಿಖಾಧಿಕಾರಿಗೆ ಹೇಳಿಕೆ ದಾಖಲಿಸುವ ಇರುವ ಅಧಿಕಾರವನ್ನು ಉಪಯೋಗಿಸಿಕೊಂಡು ಆಕೆಯ ಹೇಳಿಕೆ ದಾಖಲಿಸಲಾಗಿದೆ ಎಂದು ಹೇಳುವುದು ಸರಿಯಲ್ಲ ಎಂದರು. ಜಾಮೀನು ನಿರಾಕರಣೆಗೆ ಎಸ್‌ಪಿಪಿಗಳು ಉಲ್ಲೇಖಿಸಿರುವ ಎಲ್ಲಾ ಪ್ರಕರಣಗಳಲ್ಲೂ ವ್ಯಕ್ತಿಗಳನ್ನು ಅಪಹರಿಸಿದ ನಂತರ ಹಣ, ಚಿನ್ನ ಅಥವಾ ಇನ್ನಾವುದಕ್ಕಾದರೂ ಬೇಡಿಕೆ ಇಡಲಾಗಿತ್ತು. ಹೀಗಾಗಿ ಆ ಪ್ರಕರಣಗಳಲ್ಲಿ ಸೆಕ್ಷನ್ 364ಎ ಪ್ರಕಾರ ಜಾಮೀನು ನಿರಾಕರಿಸಲ್ಪಟ್ಟಿದೆ. ಆದರೆ, ಈ ಪ್ರಕರಣದಲ್ಲಿ ಮಹಿಳೆ ಅಪಹರಿಸಲ್ಪಟ್ಟಿದ್ದಾಳೆ ಎಂದು ದೂರಿನಲ್ಲಿ ತಿಳಿಸಲಾಗಿದ್ದರೂ, ಅಪಹರಣದ ನಂತರ ಆಕೆಯ ಪುತ್ರನಿಗಾಗಲೀ, ಇನ್ಯಾರಿಗೇ ಆಗಲೀ ಯಾವುದೇ ರೀತಿಯ ಬೇಡಿಕೆ ಇಟ್ಟಿರುವುದರ ಬಗ್ಗೆ ದೂರಿನಲ್ಲಿ ಉಲ್ಲೇಖವೇ ಇಲ್ಲ. ಹೀಗಾಗಿ ರೇವಣ್ಣ ಅವರಿಗೆ ಸೆಕ್ಷನ್ 364ಎ ಮತ್ತು 365 ಅನ್ವಯಿಸುವುದಿಲ್ಲ ಎಂದು ವಾದಿಸಿದರಲ್ಲದೇ, ಹೈದರಾಬಾದ್‌ನ ಧೀರಜ್ ಸಿಂಗ್ ಪ್ರಕರಣದಲ್ಲಿ 364ಎಗೆ ಸಂಬಂಧಪಟ್ಟ ಆರೋಪಿಗೆ ಜಾಮೀನು ನೀಡಿರುವ ತೀರ್ಪೊಂದನ್ನು ಸಿ.ವಿ. ನಾಗೇಶ್ ಉಲ್ಲೇಖಿಸಿದರು.

ಈ ಸಂದರ್ಭದಲ್ಲಿ ಎಸ್‌ಪಿಪಿ ಜಯ್ನಾ ಕೊಠಾರಿ ಅವರು, ಆ ತೀರ್ಪಿನ ಪ್ರತಿ ತಮಗೆ ನೀಡಿಲ್ಲ ಎಂದು ಆಕ್ಷೇಪಿಸಿದ್ದಲ್ಲದೇ, ಪ್ರತಿ ಕೊಡುವಂತೆ ಕೇಳಿದರು. ಅವರಿಗೂ ಉತ್ತರಿಸಿದ ನಾಗೇಶ್ ಅವರು, ನನ್ನ ಬಳಿ ಇರುವುದು ಒಂದೇ ಒಂದು ಕಾಪಿ ಅಷ್ಟೇ. ಅದನ್ನು ನಿಮಗೆ ಕೊಡುವುದಿಲ್ಲ. ನೀವೇ ಇಂತಹ ತೀರ್ಪುಗಳನ್ನು ಓದಿಕೊಂಡು ಬರಬೇಕಾಗಿತ್ತು. ಈಗ ನೀವು ಅದನ್ನು ಓದುವುದಕ್ಕೆ ಬೇಕಾದರೆ ಕೊಡುತ್ತೇನೆಯೇ ಹೊರತು, ತೀರ್ಪಿನ ಕಾಪಿ ಕೊಡುವುದಿಲ್ಲ. ಅದೂ ಕೂಡ ನೀವು ಆಕ್ಷೇಪಿಸಿ ಕೇಳಿದರೆ ಓದುವುದಕ್ಕೂ ಸಹ ಕೊಡುವುದಿಲ್ಲ ಎಂದು ಹೇಳಿದರು. ನಂತರ ಎಸ್‌ಪಿಪಿಗಳು ತಮ್ಮ ವಾದ ಮಂಡನೆಗೆ ಇನ್ನಷ್ಟು ಕಾಲಾವಕಾಶ ಕೋರಿದಾಗ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಿ.ವಿ. ನಾಗೇಶ್, ಈ ಜಾಮೀನು ಅರ್ಜಿ ವಿಚಾರದಲ್ಲಿ ಈಗಾಗಲೇ ಮೂವರು ಎಸ್‌ಪಿಪಿಗಳು ಸುದೀರ್ಘವಾಗಿ ವಾದ ಮಂಡಿಸಿದ್ದಾರೆ. ಹೀಗಾಗಿ ಮತ್ತೆ ವಾದ ಮಂಡನೆಗೆ ಅವಕಾಶ ಕೊಡುವುದು ಸರಿಯಲ್ಲ. ನಮ್ಮ ಕಕ್ಷಿದಾರರು ಯಾವುದೇ ಷರತ್ತು ವಿಧಿಸಿದರೂ ಅದನ್ನು ಪಾಲಿಸಲು ಬದ್ಧರಾಗಿದ್ದಾರೆ. ಆದ್ದರಿಂದ ಅವರಿಗೆ ಜಾಮೀನು ನೀಡಬೇಕು ಎಂದು ಮನವಿ ಮಾಡಿದರು. ನಾಗೇಶ್ ಅವರ ವಾದವನ್ನು ಪುರಸ್ಕರಿಸಿದ ನ್ಯಾಯಾಧೀಶರು, ಎಸ್‌ಪಿಪಿಗಳಿಗೆ ಮತ್ತೇ ವಾದ ಮಂಡಿಸುವ ಅವಕಾಶ ನೀಡದೇ ಆದೇಶವನ್ನು ಕೆಲಕಾಲ ಮುಂದೂಡಿ, ಸುಮಾರು ಒಂದೂವರೆ ಗಂಟೆ ಬಳಿಕ ರೇವಣ್ಣ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದರು.

ಆರೋಗ್ಯ ಸ್ಥಿರ: ಮುಂದುವರೆದ ಚಿಕಿತ್ಸೆ

ತಂಡದಿಂದ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ವಯೋಸಹಜ ಅನಾರೋಗ್ಯದ ಸಮಸ್ಯೆಯಿಂದ ಬಳಲುತ್ತಿರುವ ಎಸ್‌ಎಂ. ಕೃಷ್ಣ ಅವರನ್ನು ಚಿಕಿತ್ಸೆಗಾಗಿ ಮೊದಲಿಗೆ ವೈದೇಹಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಏಪ್ರಿಲ್ 29ರಂದು ಮಣಿಪಾಲ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಸತತ 15 ದಿನಗಳಿಂದಲೂ ಆಸ್ಪತ್ರೆಯಲ್ಲಿಯೇ ಎಸ್.ಎಂ ಕೃಷ್ಣಾ ಅವರಿಗೆ ಚಿಕಿತ್ಸೆ ಮುಂದುವರಿದಿದೆ. ಅವರ ಪತ್ನಿ, ಮಕ್ಕಳು, ಮೊಮ್ಮಕ್ಕಳು ಎಸ್.ಎಂ.ಕೃಷ್ಣ ಅವರ ಆರೈಕೆಯಲ್ಲಿ ತೊಡಗಿದ್ದಾರೆ.

ನಮ್ಮ ಶಾಸಕರು ಖರೀದಿಗಿಲ್ಲ

ಕರ್ನಾಟಕದಲ್ಲಿ ಆಗುವುದಿಲ್ಲ, ಲೋಕಸಭಾ ಚುನಾ ವಣೆಯಲ್ಲೂ ಇಂಡಿಯಾ ಮೈತ್ರಿಕೂಟ ಗೆಲ್ಲುತ್ತದೆ ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದರು. ಕನಾಟಕದಲ್ಲಿ ನಾವು 20 ಸ್ಥಾನ ಗೆಲ್ಲುತ್ತೇವೆ, ಅವರು ಚುನಾವಣೆಯಲ್ಲಿ ಸೋಲುತ್ತಾರೆ. ಅದಕ್ಕೆ ಹತಾಶರಾಗಿ ಸರ್ಕಾರ ಬೀಳಿಸುವ ಹೇಳಿಕೆ ನೀಡುತ್ತಿದ್ದಾರೆ ಎಂದರು. ಮತ್ತೊಂದೆಡೆ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಹಾರಾಷ್ಟ್ರ ಸರ್ಕಾರ ಉಳಿಯುವುದೇ ಸಂಶಯ ಇದೆ. ಅಲ್ಲಿನ ಶಾಸಕರೇ ಯು–ಟರ್ನ್ ಹೊಡೆಯುತ್ತಿದ್ದಾರೆ. ಶಿವಸೇನೆ, ಎನ್‌ಸಿಪಿ ಶಾಸಕರು ಮನೆಗೆ ಮರಳುತ್ತಿದ್ದಾರೆ. ಲೋಕಸಭಾ ಚುನಾವಣೆ ನಂತರ ಅಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರ ಹಿಡಿಯಲಿದೆ. ಆ ಭಯದಿಂದ ಶಿಂಧೆ ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಗುಜರಿ ನೀತಿಯಿಂದ ಇಕ್ಕಟ್ಟಿಗೆ ಸಿಲುಕಿರುವ ಅಗ್ನಿ ಶಾಮಕ ಇಲಾಖೆ

●15 ವರ್ಷ ಮೇಲ್ಪಟ್ಟ ಅಗ್ನಿ ಶಾಮಕ ವಾಹನಗಳಿಗೆ ಎಫ್‌ಸಿ ನೀಡದ ಆರ್‌ಟಿಓ ●ಮೈಸೂರು ಜಿಲ್ಲೆಯಲ್ಲಿ 18; ರಾಜ್ಯದಲ್ಲಿ 284 ಹಳೆಯ ವಾಹನಗಳಿವೆ ●ಎಫ್‌ಸಿ ಸಿಗದಿದ್ದರೂ ಓಡುತ್ತಲೇ ಇವೆ! ●ಹೊಸ ವಾಹನಗಳ ಖರೀದಿಗೆ ಸರ್ಕಾರದ ನಿರಾಸಕ್ತಿ ; ಅನಗತ್ಯ ಖರ್ಚಿಗೆ ಕಡಿವಾಣ ಹಾಕಿ, ಅವಶ್ಯ ವಲಯಕ್ಕೆ ಹಣ ನೀಡದೇ ನಿರ್ಲಕ್ಷ್ಯ

ಬಾಪುಲಿಂಗರಾಜ್ ಅರಸ್



ಮೈಸೂರು, ಮೇ 13– 15 ವರ್ಷ ಮೇಲ್ಪಟ್ಟ ಎಲ್ಲಾ ಮೋಟಾರು ವಾಹನಗಳ ಬಳಕೆ ನಿಷೇಧಿಸಿ, ಅವುಗಳ ಗುಜರಿಗೆ ಹಾಕಬೇಕೆಂಬ ಕೇಂದ್ರ ಸರ್ಕಾರದ ಗುಜರಿ ನೀತಿ (ಸ್ಕ್ರ್ಯಾಪೇಜ್ ಪಾಲಿಸಿ) ಯಿಂದ ಅಗ್ನಿಶಾಮಕ ಇಲಾಖೆ ಇಕ್ಕಟ್ಟಿಗೆ ಸಿಲುಕಿದೆ. ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಈಗಿರುವ ಶೇಕಡ 75 ರಷ್ಟು ವಾಹನಗಳನ್ನು ಗುಜರಿಗೆ ಹಾಕಬೇಕಾಗುತ್ತದೆ. ರಾಜ್ಯ ಸರ್ಕಾರ ಹೊಸ ಅಗ್ನಿ ಶಾಮಕ ವಾಹನ ಒದಗಿಸುವವರೆಗೆ ಏನು ಮಾಡುವುದು ಎಂದು ಅಧಿಕಾರಿಗಳು ದಿಕ್ಕು ತೋಚದೆ ಕುಳಿತಿದ್ದಾರೆ.

ಕೇಂದ್ರ ಸರ್ಕಾರ 2021 ರ ಬಜೆಟ್‌ನಲ್ಲಿ ಗುಜರಿ ನೀತಿಯನ್ನು ಘೋಷಣೆ ಮಾಡಿತು. ಅದರ ಪ್ರಕಾರ 15 ವರ್ಷ ಮೇಲ್ಪಟ್ಟ ಹಾಗೂ ಅಸುರಕ್ಷಿತ ವಾಹನಗಳ ಕಾರ್ಯಾಚರಣೆ ನಿಷಿದ್ಧ.

ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಮಾರ್ಚ್ 18, 2021 ರಂದು ಗುಜರಿ ನೀತಿಯ ಕುರಿತಂತೆ ವ್ಯಾಪಕ ಮಾಹಿತಿ ಹೊರ ಹಾಕಿದ್ದರು. ನಂತರ ಗುಜರಿ ನೀತಿ–ನಿಯಮಗಳನ್ನು ರೂಪಿಸಿ, ಸೆಪ್ಟೆಂಬರ್ 22 ಮತ್ತು ಅಕ್ಟೋಬರ್ 4 ರಂದು ಎರಡು ಪ್ರತ್ಯೇಕ ಅಧಿಸೂಚನೆಗಳನ್ನು ಹೊರಡಿಸಲಾಯಿತು. ಈ ಮೂಲಕ 2022 ರ ಏಪ್ರಿಲ್ 1 ರಂದು ಕೇಂದ್ರ ಸರ್ಕಾರ ಗುಜರಿ ನೀತಿಯನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಿದೆ.

ಮಾಲಿನ್ಯ ತಡೆಗಟ್ಟಿ, ಹಸಿರು ಭಾರತ ನಿರ್ಮಾಣಕ್ಕಾಗಿ ಇಂತಹ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಗಡ್ಕರಿ ಸ್ಪಷ್ಟಪಡಿಸಿದ್ದರು.

ಈ ಹಿನ್ನೆಲೆಯಲ್ಲಿ 15 ವರ್ಷ ಮೇಲ್ಪಟ್ಟ ವಾಹನಗಳಿಗೆ ಆರ್‌ಟಿಓನಲ್ಲಿ ಎಫ್‌ಸಿ ನೀಡುವಂತಿಲ್ಲ ಎಂದು ಕೇಂದ್ರ ಸರ್ಕಾರ ಸಾರಿಗೆ ಇಲಾಖೆಗೆ ತಾಕೀತು ಮಾಡಿತ್ತು ಇದರ ಪರಿಣಾಮ ಈಗ 15 ವರ್ಷ ಮೇಲ್ಪಟ್ಟ ಅಗ್ನಿಶಾಮಕ ವಾಹನ, ಸಾರಿಗೆ ಸಂಸ್ಥೆಯ ವಾಹನ, ಕಾರುಗಳು ಸೇರಿದಂತೆ ಸರ್ಕಾರದ 9 ಲಕ್ಷ ಮಾತ್ರವಲ್ಲ. ಖಾಸಗಿ ವಾಹನಗಳನ್ನು ಗುಜರಿ ನೀತಿಗೆ ಒಳಪಡಿಸಬೇಕು ಎಂದು ಸ್ಪಷ್ಟಪಡಿಸಿತು.

ಈಗ ಮೈಸೂರು ಜಿಲ್ಲೆಯಲ್ಲಿ 28 ಅಗ್ನಿ ಶಾಮಕ ವಾಹನಗಳಿವೆ. ಇದರಲ್ಲಿ 18 ವಾಹನಗಳು 15 ವರ್ಷ ಮೀರಿವೆ. ಉಳಿದ 10 ವಾಹನಗಳಿಗೆ ವಾಯಿದೆ ಇದೆ.

ಕೇಂದ್ರ ಸರ್ಕಾರದ ಗುಜರಿ ನೀತಿಯ ಪ್ರಕಾರ ಈಗ 18 ಅಗ್ನಿ ಶಾಮಕ ವಾಹನಗಳನ್ನು ಬಳಕೆ ಮಾಡದೆ ಗುಜರಿಗೆ ಹಾಕಬೇಕಿದೆ. ಆದರೆ ರಾಜ್ಯ ಸರ್ಕಾರ ಹೊಸ ಅಗ್ನಿ ಶಾಮಕ ವಾಹನಗಳನ್ನು ಇನ್ನು ನೀಡಿಲ್ಲ. ಇದರಿಂದ ಈಗಿರುವ 18 ಅಗ್ನಿ ಶಾಮಕ ವಾಹನಗಳನ್ನು ಗುಜರಿಗೆ ಹಾಕಿದರೆ ಕೊರತೆ ಎದುರಾಗುವ ಆತಂಕ ಅಧಿಕಾರಿಗಳಲ್ಲಿದೆ.

ಕೇಂದ್ರ ಸರ್ಕಾರದ ಗುಜರಿ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವ ಆರ್‌ಟಿಓದವರು 15 ವರ್ಷ ಮೇಲ್ಪಟ್ಟ ಅಗ್ನಿ ಶಾಮಕ ದಳದ 18 ವಾಹನಗಳಿಗೆ ಎಫ್‌ಸಿ(ಫಿಟ್ನೆಸ್ ಸರ್ಟಿಫಿಕೇಟ್) ನೀಡುತ್ತಿಲ್ಲ. ಎಫ್‌ಸಿ ಇಲ್ಲದ ವಾಹನಗಳ ಬಳಕೆ ಮಾಡುವುದು ಕಾನೂನಿನ ಪ್ರಕಾರ ಅಕ್ಷಮ್ಯ ಅಪರಾಧ. ಆದರೆ ಬೇರೆ ವಾಹನ ಇಲ್ಲದಿರುವ ಕಾರಣ ಎಫ್‌ಸಿ ಇಲ್ಲದೆಯೂ ವಾಹನಗಳನ್ನು ಬಳಕೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ.

ಒಂದು ವೇಳೆ ಅಸುರಕ್ಷಿತ ವಾಹನಗಳ ಬಳಕೆಯಿಂದ ಅವಘಡಗಳು ಸಂಭವಿಸಿದರೆ ಯಾರು ಹೊಣೆ ಎಂಬ ಪ್ರಶ್ನೆ ಅಗ್ನಿ ಶಾಮಕ ಇಲಾಖೆಯ ಅಧಿಕಾರಿಗಳನ್ನು ಕಾಡುತ್ತಿದೆ.

ಮೈಸೂರು ಸೇರಿದಂತೆ ಕರ್ನಾಟಕದ 31 ಜಿಲ್ಲೆಗಳಲ್ಲಿ 400 ಅಗ್ನಿ ಶಾಮಕ ವಾಹನಗಳಿವೆ. ಆದರೆ ಇದರಲ್ಲಿ 284 ವಾಹನಗಳು 15 ವರ್ಷದಾಟಿವೆ. ಇಷ್ಟು ವಾಹನಗಳನ್ನು ಗುಜರಿಗೆ ಹಾಕಿದರೆ ಕೊರತೆಯಾಗುವ ವಾಹನಗಳನ್ನು ಹೇಗೆ ತುಂಬುವುದು ಎಂದು ಅಧಿಕಾರಿಗಳು ಇಕ್ಕಟ್ಟಿಗೆ ಸಿಲುಕಿದ್ದಾರೆ.

ಅಗ್ನಿ ಅವಘಡಗಳು ಸಂಭವಿಸಿದ ಸಂದರ್ಭದಲ್ಲಿ ಅಗ್ನಿ ಶಾಮಕ ವಾಹನಗಳ ಅನಿವಾರ್ಯತೆ ಮನವರಿಕೆ ಆಗುತ್ತದೆ. ಇನ್ನು ಹತ್ತಾರು ವರ್ಷ ಹಳೆಯದಾದ ಅಗ್ನಿ ಶಾಮಕ ವಾಹನಗಳನ್ನು ಬಳಸಲಾಗುತ್ತಿದೆಯೇ ಹೊರತು ಹೊಸ ಹೊಸ ತಂತ್ರಜ್ಞಾನ ಆದರಿತ ಹೊಸ ವಾಹನಗಳ ಖರೀದಿಗೆ ಮುಂದಾಗಿಲ್ಲ.

ಸರ್ಕಾರದ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ಸೇರಿದಂತೆ ಬಹಳಷ್ಟು ಕಾರ್ಯಕ್ರಮಗಳನ್ನು ಅದ್ದೂರಿಯಾಗಿ ನಡೆಸಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡುವ ಸರ್ಕಾರ, ತುರ್ತು ಸೇವೆ ಅಗ್ನಿ ಶಾಮಕ ವಾಹನಗಳ ಖರೀದಿಗೆ ಆಸಕ್ತಿ ತೋರುತ್ತಿಲ್ಲ.

ಭಾರೀ ಸಾಧನೆ ಮಾಡಿದ್ದೇವೆ, ಜನಪರ ಕಾರ್ಯಕ್ರಮ ರೂಪಿಸಿದ್ದೇವೆ, ಅವಿಸ್ಮರಣೀಯ ಯೋಜನೆ ಜಾರಿಗೊಳಿಸಿದ್ದೇವೆ ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವ ಸರ್ಕಾರದ ಪ್ರತಿನಿಧಿಗಳು ಅತ್ಯವಶ್ಯ ವಲಯಕ್ಕೆ ಮೂಲಸೌಕರ್ಯ ಕಲ್ಪಿಸದೇ ಇರುವುದು ನಾಚಿಕೆಗೇಡಿನ ಸಂಗತಿ ಎಂದು ಜನರೇ ದೂರುತ್ತಿದ್ದಾರೆ.

ಅಗ್ನಿ ಶಾಮಕ ಇಲಾಖೆ ವಾಹನ ಬಳಕೆ ವಿನಾಯಿತಿಗೆ ಮನವಿ

ಮೈಸೂರು: ಗುಜರಿ ನೀತಿಯಿಂದ ಅಗ್ನಿ ಶಾಮಕ ವಾಹನಗಳ ಬಳಕೆಗೆ ವಿಶೇಷ ವಿನಾಯಿತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಮೈಸೂರು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ. ಗುರುರಾಜ್ ತಿಳಿಸಿದ್ದಾರೆ.

ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಅಗ್ನಿ ಶಾಮಕ ಇಲಾಖೆಯಲ್ಲಿ ಬಹಳಷ್ಟು ಹಳೆಯ ವಾಹನಗಳಿದ್ದು, ಸದ್ಯಕ್ಕೆ ಹೊಸ ವಾಹನಗಳ ಖರೀದಿ ಕಷ್ಟವಾಗಿದೆ. ಆದ ಕಾರಣ 15 ವರ್ಷ ಮೇಲ್ಪಟ್ಟ ವಾಹನಗಳ ಬಳಕೆಗೆ ಅವಕಾಶ ನೀಡಬೇಕು. ಜೊತೆಗೆ ಆರ್‌ಟಿಓನಲ್ಲಿ ಈ ವಾಹನಗಳಿಗೆ ಎಫ್‌ಸಿ ನೀಡುವಂತೆ ಕೋರಲಾಗಿದೆ. ಈ ಸಂಬಂಧ ರಾಜ್ಯ ಅಗ್ನಿ ಶಾಮಕ ಇಲಾಖೆ ಹಾಗೂ ಕೇಂದ್ರ ಸಾರಿಗೆ ಇಲಾಖೆ ನಡುವೆ ಪತ್ರ ವ್ಯವಹಾರ ನಡೆದಿದೆ ಎಂದರು.

ಕೇಂದ್ರ ರಕ್ಷಣಾ ಇಲಾಖೆಯನ್ನು ವಿಶೇಷ ಸೇವೆ ಎಂದು ಪರಿಗಣಿಸಿ ಹೊಸ ವಾಹನಗಳನ್ನು ನೀಡಲಾಗಿದೆ. ಆದರೆ ರಾಜ್ಯ ಸರ್ಕಾರದ ವ್ಯಾಪ್ತಿಗೊಳಪಡುವ ಅಗ್ನಿ ಶಾಮಕ ಇಲಾಖೆಗೆ ಹೊಸ ವಾಹನಗಳ ಭಾಗ್ಯವಿಲ್ಲ.

ಕೇಂದ್ರ ಸರ್ಕಾರದ ಗುಜರಿ ನೀತಿಯಂತೆ 15 ವರ್ಷ ಮೇಲ್ಪಟ್ಟ ವಾಹನಗಳನ್ನು ತಕ್ಷಣವೇ ಗುಜರಿಗೆ ಹಾಕುವುದು ಕಷ್ಟದ ಕೆಲಸ. ಈಗ ವಾಹನ ತಯಾರಿಕೆ ಕಂಪನಿಯಿಂದ ಚಾಸಿಸ್ ಖರೀದಿಸಿದರೆ, ನಮಗೆ ಬೇಕಾದಂತೆ ರೂಪುರೇಷೆ ರೂಪಿಸಲು ಹಲವು ತಿಂಗಳ ಕಾಲಾವಕಾಶ ಬೇಕು. ಈ ವಿಚಾರವನ್ನೆಲ್ಲಾ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಆದರೆ ಕೇಂದ್ರ ಸರ್ಕಾರದಿಂದ ಈ ತನಕ ಸಕರಾತ್ಮಕ ಪ್ರತಿಕ್ರಿಯೆ ಬಂದಿಲ್ಲ ಎಂದು ಗುರುರಾಜ್ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಅಗ್ನಿ ಶಾಮಕ ವಾಹನಗಳಿಗೆ ಬೇಡಿಕೆ ಇದೆ. ಅರಣ್ಯದಲ್ಲಿ ಕಾಡ್ಗಿಚ್ಚು ಸಂಭವಿಸಿದರೆ ತಕ್ಷಣವೇ ಅಗ್ನಿ ಶಾಮಕ ವಾಹನ ಕಳುಹಿಸಲು ನಮ್ಮ ವಾಹನಗಳ ಕೊರತೆ ಇದೆ. ಒಂದು ವೇಳೆ ಅರಣ್ಯಕ್ಕೆ ಕಳುಹಿಸಿದರೆ ಇಲ್ಲಿ ಅಗ್ನಿ ಅವಘಡ ಸಂಭವಿಸಿದರೆ ಏನು ಮಾಡುವುದು ಎಂಬ ಪ್ರಶ್ನೆ ಎದುರಾಗುತ್ತದೆ.

ಏಕ ಕಾಲಕ್ಕೆ ಅಗ್ನಿ ಅವಘಡಗಳು ಸಂಭವಿಸಿದಾಗ ವಾಹನಗಳ ಕೊರತೆ ಎದುರಾಗುತ್ತದೆ. ಅಗ್ನಿ ಶಾಮಕ ವಾಹನಗಳು ಸ್ವಲ್ಪ ವಿಳಂಬವಾಗಿ ಹೋದರೂ ಭಾರೀ ಅನಾಹುತ ಸಂಭವಿಸುತ್ತದೆ. ಈ ಹಿನ್ನೆಲೆಯಲ್ಲಿ ಹೆಚ್ಚು ಅಗ್ನಿ ಶಾಮಕ ವಾಹನಗಳಿಗೆ ಬೇಡಿಕೆ ಸಲ್ಲಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಹೊಸ ತಾಲೂಕುಗಳಾದ ಸರಗೂರು ಹಾಗೂ ಸಾಲಿಗ್ರಾಮಕ್ಕೆ ಪ್ರತ್ಯೇಕ ಅಗ್ನಿ ಶಾಮಕ ಠಾಣೆಗಳಿಲ್ಲ. ಜೊತೆಗೆ ಕಡಕೊಳ ಕೈಗಾರಿಕಾ ಪ್ರದೇಶಕ್ಕೂ ಅಗ್ನಿ ಶಾಮಕ ಠಾಣೆ ಇಲ್ಲ. ಈ ಹಿನ್ನೆಲೆಯಲ್ಲಿ ಹೆಚ್ಚು ಅಗ್ನಿ ಶಾಮಕ ಠಾಣೆ ನಿರ್ಮಾಣಕ್ಕೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಪೋಷಕರ ಸುಲಿಗೆ

ಆಮ್ ಆದ್ಮಿ ಪಕ್ಷ ಆರೋಪ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಮ್ ಆದ್ಮಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಾಲವಿಕ ಗುಬ್ಬಿವಾಣಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಮೇ 13(ಎಂಟಿವೈ)– ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮಿತಿ ಮೀರಿ ಶುಲ್ಕ ಸಂಗ್ರಹಿಸುವ ದಂಧೆ ನಡೆಸುತ್ತಿದ್ದು, ಸರ್ಕಾರ ಇದಕ್ಕೆ ಕಡಿವಾಣ ಹಾಕಿ ವಿದ್ಯಾರ್ಥಿಗಳ ಹಿತಕಾಯಬೇಕು ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಾಲವಿಕ ಗುಬ್ಬಿವಾಣಿ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆ ಹದಗೆಟ್ಟಿದ್ದು, ಇದನ್ನೇ ಬಂಡವಾಳವಾಗಿಸಿಕೊಂಡು ಖಾಸಗಿ ಶಿಕ್ಷಣ ಸಂಸ್ಥೆಗಳು ಪೋಷಕರನ್ನು ಸುಲಿಗೆ ಮಾಡುತ್ತಿವೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳ ಅವ್ಯವಸ್ಥೆಯೂ ಖಾಸಗಿ ಶಿಕ್ಷಣ ಸಂಸ್ಥೆಗಳ ಸುಲಿಗೆಗೆ ಕಾರಣವಾಗಿವೆ. ಮೊದಲಿನಿಂದಲೂ ಸರ್ಕಾರಿ ಶಾಲೆಗಳಿಗೆ ಉತ್ತಮ ಸೌಲಭ್ಯ ಒದಗಿಸದೇ ಇರುವ ಕಾರಣದಿಂದ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಲು ಮುಂದಾಗುತ್ತಿದ್ದಾರೆ. ಇದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶುಲ್ಕ ದಂಧೆ ಮಿತಿ ಮೀರಿದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರತಿ ವರ್ಷ ಶೇ.15ರಷ್ಟು ಶುಲ್ಕ ಹೆಚ್ಚಳ ಮಾಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ರಾಜ್ಯದಲ್ಲಿ ಶುಲ್ಕ ನಿಯಂತ್ರಣ ಪ್ರಾಧಿಕಾರ ಇದೆಯಾ ಎನ್ನುವ ಪ್ರಶ್ನೆ ಮೂಡುತ್ತಿದೆ. ಖಾಸಗಿ ಶಾಲೆಗಳಿಗೆ ಶುಲ್ಕ ನಿಗದಿ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ ಎಂದು ಕರ್ನಾಟಕ ಹೈಕೋರ್ಟ್ ಆದೇಶಿಸಿದೆ. ಈ ಪ್ರಕರಣದ ವಿಚಾರಣೆ ವೇಳೆ ರಾಜ್ಯ ಸರ್ಕಾರ ಸಮರ್ಪಕ ವಾದ ಮಂಡಿಸದೇ ಇರುವುದರಿಂದ ಹಿನ್ನಡೆಯಾಗಿದೆ. ಇದರಿಂದ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾದಿಸಿದರು. ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಈ ಶೈಕ್ಷಣಿಕ ವರ್ಷದಲ್ಲಾದರೂ ಖಾಸಗಿ ಶಾಲೆಗಳ ಶುಲ್ಕ ದಂಧೆಯಿಂದ ಪೋಷಕರನ್ನು ರಕ್ಷಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ಜಿಲ್ಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರತಿ ಶಾಲೆಗೆ ಭೇಟಿ ನೀಡಿ ಎಷ್ಟು ಶುಲ್ಕ ಹೆಚ್ಚಿಸಲಾಗಿದೆ ಎಂಬುದರ ಮೇಲೆ ನಿಗಾ ಇಡಬೇಕು. ಹೆಚ್ಚು ಶುಲ್ಕ ಏರಿಕೆ ಕಂಡು ಬಂದಲ್ಲಿ ಅಂತಹ ಶಾಲೆಗಳೊಂದಿಗೆ ಚರ್ಚಿಸಿ ಶುಲ್ಕ ಏರಿಕೆಯನ್ನು ಕಡಿಮೆ ಮಾಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ರಂಗಯ್ಯ, ಮುಖಂಡರಾದ ವಿಶ್ವನಾಥ ಕುಲಕರ್ಣಿ, ಉಷಾ ಸಂಪತ್ ಕುಮಾರ್, ಐಶ್ವರ್ಯ ಇದ್ದರು.

ಮಳೆ ನೀರು ಚರಂಡಿಗಳನ್ನು ಸುಸ್ಥಿತಿಯಲ್ಲಿಡಿಸಲು ಪಾಲಿಕೆ ಆಯುಕ್ತರಿಗೆ ಎಂಜಿಪಿ ಮನವಿ



ಮೈಸೂರು, ಮೇ 13(ಎಂಕೆ)– ಮೈಸೂರು ನಗರದ ಮಳೆ ನೀರು ಚರಂಡಿಗಳು ಹಾಗೂ ರಾಜ ಕಾಲುವೆಗಳನ್ನು ಸ್ವಚ್ಛಗೊಳಿಸಿ, ಮಳೆ ನೀರು ಸರಾಗವಾಗಿ ಹರಿಯುವಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ನಗರ ಪಾಲಿಕೆ ಆಯುಕ್ತರಿಗೆ ಮೈಸೂರು ಗ್ರಾಹಕರ ಪರಿಷತ್ ವತಿಯಿಂದ ಸೋಮವಾರ ಮನವಿ ಸಲ್ಲಿಸಲಾಯಿತು.

ನಗರಪಾಲಿಕೆ ಕೇಂದ್ರ ಕಚೇರಿಗೆ ಭೇಟಿ ನೀಡಿದ ಎಂಜಿಪಿ ಪದಾಧಿಕಾರಿಗಳು ಜಿಲ್ಲಾಧಿಕಾರಿ ಡಾ.ಕೆವಿ.ರಾಜೇಂದ್ರ ಅವರ ಸಮ್ಮುಖದಲ್ಲಿ ನಗರಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ಅವರಿಗೆ ಮನವಿ ಸಲ್ಲಿಸಿದರು. ಮೈಸೂರು ನಗರದ ರಸ್ತೆ ಬದಿಗಳಲ್ಲಿ ಮಳೆ ನೀರು ಹರಿಯಲು ಇರುವ ಚರಂಡಿಗಳು ಹಾಗೂ ರಾಜಕಾಲುವೆಗಳಲ್ಲಿ ಹೂಳು ಹೆಚ್ಚಾಗಿದ್ದು, ಬಿದ್ದ ಮಳೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ. ಇದರ ಪರಿಣಾಮವಾಗಿ ಮಳೆ ನೀರು ಬಡಾವಣೆಗಳಿಗೆ ಹಾಗೂ ಅಲ್ಲಿನ ಮನೆಗಳಿಗೆ ನುಗ್ಗಿ ಸಾರ್ವಜನಿಕ ಜನ ಜೀವನ ಹಾಗೂ ಆಸ್ತಿಪಾಸ್ತಿಗಳಿಗೆ ಹಾನಿಯಾಗುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ.

ಅಲ್ಲದೆ ಮಳೆ ಬಂದಾಗ ಪಾಲಿಕೆ ವಹಿಸುವ ಕ್ರಮಗಳು ಫಲಪ್ರದವಾಗುತ್ತಿಲ್ಲ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿ, ಆಸ್ತಿ ರಕ್ಷಣೆಗಾಗಿ ಮಳೆಗಾಲದ ಮುಂಬರುವ ದಿನಗಳಲ್ಲಿ ಸಂಭವನೀಯ ನೈಸರ್ಗಿಕ ವಿಕೋಪಗಳನ್ನು ಗಮನದಲ್ಲಿಟ್ಟುಕೊಂಡು ಮಳೆ ನೀರು ಹರಿಸುವ ಚರಂಡಿಗಳು ಹಾಗೂ ರಾಜಕಾಲುವೆಗಳಲ್ಲಿ ತುಂಬಿರುವ ಹೂಳು ಮತ್ತು ಕಸ ತ್ಯಾಜ್ಯವನ್ನು ತೆರವುಗೊಳಿಸುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಪಾಲಿಕೆ ಕೂಡಲೇ ಕಾರ್ಯಕ್ರಮ ವಹಿಸುವಂತೆ ಮನವಿ ಮಾಡಲಾಯಿತು.

ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಭೋಜೇಗೌಡ ನಾಮಪತ್ರ ಸಲ್ಲಿಕೆ

ಇಂದು ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಮರಿತಿಬ್ಬೇಗೌಡ ನಾಮಪತ್ರ ಸಲ್ಲಿಕೆ

ಮೈಸೂರು, ಮೇ 13– ವಿಧಾನಪರಿಷತ್‌ಗೆ ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಹಾಲಿ ಎಂಎಲ್‌ಸಿ ಎಸ್.ಎಲ್. ಭೋಜೇಗೌಡ ಇಂದು ಜೆಡಿಎಸ್ ಅಭ್ಯರ್ಥಿಯಾಗಿ ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ನೈರುತ್ಯ ಪದವೀಧರರ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಧನಂಜಯ್ ಸರ್ಜಿ ಮತ್ತು ದಕ್ಷಿಣ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ರಾಜು ಕೆ.ಆರ್. ನಾಮಪತ್ರ ಸಲ್ಲಿಸಿದ್ದಾರೆ.

ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡರು ನಾಳೆ (ಮೇ 14) ಬೆಳಗ್ಗೆ 10.30ಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲಿದ್ದಾರೆ.

ಎನ್‌ಡಿಎ ಮೈತ್ರಿಕೂಟದಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲಾಗಿದ್ದು, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಮತ್ತು ವಿವೇಕಾನಂದ ನಡುವೆ ಟಿಕೆಟ್‌ಗೆ ತೀವ್ರ ಪೈಪೋಟಿ ನಡೆಯುತ್ತಿದೆ. ನಾಮಪತ್ರ ಸಲ್ಲಿಸಲು ಮೇ 16 ಕೊನೆ ದಿನವಾಗಿದ್ದು, ಮೇ 17ರಂದು ನಾಮಪತ್ರ ಪರಿಶೀಲನೆ ಕಾರ್ಯ ನಡೆಯಲಿದೆ. ಮೇ 20ಕ್ಕೆ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದ್ದು, ಜೂನ್ 3ರಂದು ಮತದಾನ ನಡೆದು, ಜೂನ್ 6ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.4

ತನ್ನದೇ ದಾಖಲೆ ಮುರಿದ ಕಮಿ ರೀಟಾ ಶೆರ್ಪಾ

ಕಠ್ಮಂಡು: ನೇಪಾಳದ ಖ್ಯಾತ ಪರ್ವತಾರೋಹಿ ಕಮಿ ರೀಟಾ ಶೆರ್ಪಾ ಬರೊಬ್ಬರಿ 29ನೇ ಬಾರಿಗೆ ಮೌಂಟ್ ಎವರೆಸ್ಟ್ ಏರಿ ತನ್ನದೇ ದಾಖಲೆಯನ್ನು ಮುರಿದಿದ್ದಾರೆ.

ವಿಶ್ವದ ಅತೀ ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನುನೇಪಾಳದ ಹಿರಿಯ ಪರ್ವತಾರೋಹಿ ಕಮಿ ರಿಟಾ ಶೆರ್ಪಾ ಅವರು 29ನೇ ಬಾರಿಗೆ ಏರುವ ಮೂಲಕ ಭಾನುವಾರ ತಮ್ಮದೇ ದಾಖಲೆಯನ್ನು ಮುರಿದು ಹೊಸ ಇತಿಹಾಸ ನಿರ್ಮಿಸಿದ್ದಾರೆ.

54 ವರ್ಷ ವಯಸ್ಸಿನ ಕಾಮಿ ಅವರು ನೇಪಾಳದ ಸ್ಥಳೀಯ ಕಾಲಮಾನ ಬೆಳಗ್ಗೆ 7.25 ಗಂಟೆಗೆ, 8,849 ಮೀಟರ್ ಎತ್ತರದ ಶಿಖರವನ್ನು ಏರಿ ಈ ದಾಖಲೆ ನಿರ್ಮಿಸಿದ್ದಾರೆ ಎಂದು ನೇಪಾಳ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ರಾಕೇಶ್ ಗುರೂಂಗ್ ತಿಳಿಸಿದ್ದಾರೆ.

ಸಂತ್ರಸ್ತೆ ಅಪಹರಣ ಪ್ರಕರಣ ದಾಖಲಿಗೂ ಮುನ್ನ ಎಸ್‌ಐಟಿಯಿಂದ ಸತೀಶ್‌ಬಾಬು ಬಂಧನ

ಮಾಜಿ ಸಚಿವ ಸಾರಾ ಮಹೇಶ್ ಆರೋಪ

ಮೈಸೂರು: ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಸಂತ್ರಸ್ತ ಮಹಿಳೆ ಅಪಹರಣ ಪ್ರಕರಣದ ಎಫ್‌ಐಆರ್ ದಾಖಲಾಗುವ ಮುನ್ನವೇ ಸತೀಶ್ ಬಾಬು ಅವರನ್ನು ಎಸ್‌ಐಟಿ ಬಂಧಿಸಿತ್ತು ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಹೇಳಿದ್ದಾರೆ.

ಪ್ರಾದೇಶಿಕ ಆಯುಕ್ತರ ಕಚೇರಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೆ.ಆರ್ ನಗರದ ಮಹಿಳೆ ಅಪಹರಣಕ್ಕೆ ಸಂಬಂಧಿಸಿದಂತೆ ರಾತ್ರಿ 9.50 ಗಂಟೆಗೆ ಎಫ್‌ಐಆರ್ ದಾಖಲಾಗಿದೆ. ಆದರೆ, ಅದಕ್ಕೂ ಮುನ್ನ ಮಧ್ಯಾಹ್ನ 12ರ ಸಮಯದಲ್ಲಿ ಬೇಕರಿಯೊಂದರ ಮುಂಭಾಗದಿಂದ ಸತೀಶ್ ಬಾಬು ಅವರನ್ನು ಪೊಲೀಸರು ಕರೆದುಕೊಂಡು ಹೋಗಿದ್ದಾರೆ. ಈ ದೃಶ್ಯ ಬೇಕರಿಯ ಸಿಸಿ ಕ್ಯಾಮರಾದಲ್ಲಿ ದಾಖಲಾಗಿದೆ ಎಂಬ ಕಾರಣಕ್ಕಾಗಿ ಅದರ ಹಾರ್ಡ್‌ಡಿಸ್ಕ್ ಅನ್ನು ಪೊಲೀಸರು ತೆಗೆದುಕೊಂಡು ಹೋಗಿ ಸತೀಶ್ ಬಾಬುವನ್ನು ಕರೆದುಕೊಂಡು ಹೋದ ದೃಶ್ಯಾವಳಿಯನ್ನು ಡಿಲೀಟ್ ಮಾಡಿಕೊಟ್ಟಿದ್ದಾರೆ.

ಯುವಕನೊಬ್ಬ ಮೊಬೈಲ್ ವಿಡಿಯೋ ಮಾಡಿದ್ದನ್ನು ಕೂಡ ಪೊಲೀಸರು ಡಿಲೀಟ್ ಮಾಡಿದ್ದು, ಬೇಕರಿ ಎದುರಿಗಿನ ತರಕಾರಿ ಅಂಗಡಿಯಲ್ಲಿದ್ದ ಸಿಸಿ ಕ್ಯಾಮರಾದಲ್ಲಿ ದೃಶ್ಯಾವಳಿಗಳು ಸೆರೆಯಾಗಿವೆ. ಅದನ್ನು ನಾವು ಪಡೆದುಕೊಂಡಿದ್ದು, ನಮ್ಮ ವಕೀಲರಿಗೆ ಕೊಟ್ಟಿದ್ದೇವೆ. ಅವರು ನ್ಯಾಯಾಲಯಕ್ಕೆ ಅದನ್ನು ಸಲ್ಲಿಸಲಿದ್ದಾರೆ ಎಂದು ವಿವರಿಸಿದರು. ಮಹಿಳೆ ಅಪ ಹರಣಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿದ ಹುಡುಗ ಅಮಾಯಕನಾಗಿದ್ದು, ಆತನಿಗೆ ಹಣ ನೀಡಿ ಖಾಲಿ ಪೇಪರ್‌ನಲ್ಲಿ ಸಹಿ ಪಡೆದುಕೊಂಡಿದ್ದಾರೆ. ಈಗ ಆತ ಎಲ್ಲಿ ಹೋಗಿದ್ದಾನೆ ಎಂದು ಯಾರಿಗೂ ಗೊತ್ತಿಲ್ಲ. ಆ ಮಹಿಳೆ ಬಳಿಯೂ ಈವರೆಗೆ ನಿಯಮ 164 ಅಡಿ ಹೇಳಿಕೆ ಏಕೆ ದಾಖಲಿಸಿಲ್ಲ. ಆಕೆ ತೋಟದ ಮನೆಗೆ ಹೋಗಿದ್ದು ಸತ್ಯ. ಇದಕ್ಕೆ ಅಲ್ಲಿರುವವರು ಸಾಕ್ಷಿ ಇದ್ದಾರೆ. ಅವರು ಹೇಳುವಂತೆ ಆಕೆ ಕುರಿ ಕಾಯುವ ಕೆಲಸ ಮಾಡುತ್ತಿದ್ದಳು. ಮಹಿಳೆ ಕುರಿ ಕಾಯುತ್ತಿದ್ದಳು ಅಂದ ಮೇಲೆ ಕಿಡ್ನ್ಯಾಪ್ ಹೇಗೆ ಆಗುತ್ತದೆ? ಎಂದು ಪ್ರಶ್ನಿಸಿದರು.




ಅಭ್ಯರ್ಥಿ ಅಂತಿಮವಾದ ಮೇಲೆ ನಾಮಪತ್ರ: ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಜೆಡಿಎಸ್‌ಗೆ ನೀಡುವಂತೆ ಹೆಚ್.ಡಿ. ಕುಮಾರಸ್ವಾಮಿ ಅವರು ಬಿಜೆಪಿ ಮುಖಂಡರೊಂದಿಗೆ ಮಾತನಾಡಿದ್ದು, ಇದೀಗ ನಮಗೆ ಈ ಕ್ಷೇತ್ರವನ್ನು ಬಿಟ್ಟುಕೊಡಲಾಗಿದೆ. ನಮ್ಮಲ್ಲಿ ವಿವೇಕಾ ನಂದ ಮತ್ತು ಮಾಜಿ ಎಂಎಲ್‌ಸಿ ಕೆ.ಟಿ. ಶ್ರೀಕಂಠೇಗೌಡ ಇಬ್ಬರೂ ಆಕಾಂಕ್ಷಿಗಳಿದ್ದಾರೆ. ಯಾರು ಅಭ್ಯರ್ಥಿ ಎಂಬುದನ್ನು ಫೈನಲ್ ಆದ ನಂತರ ನಾಮಿನೇಷನ್ ಮಾಡಿಸುತ್ತೇವೆ ಎಂದರು.

ಪೊಲೀಸ್ ಎನ್‌ಕೌಂಟರ್‌ಗೆ ಮೂವರು ನಕ್ಸಲರು ಬಲಿ

ಗಡ್ಚಿರೋಲಿ: ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಮೂವರು ನಕ್ಸಲರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಧ್ವಂಸಕ ಚಟುವಟಿಕೆಗಳನ್ನು ನಡೆಸುವ ಉದ್ದೇಶದಿಂದ ನಕ್ಸಲೀಯರ ಪೆರಿಮಿಲಿ ದಳದ ಕೆಲವು ಸದಸ್ಯರು ಭಮ್ರಗಡ ತಾಲೂಕಿನ ಕಾಟ್ರಘಟ್ಟ ಗ್ರಾಮದ ಬಳಿ ಅರಣ್ಯದಲ್ಲಿ ಬೀಡುಬಿಟ್ಟ ಬಗ್ಗೆ ಗುಪ್ತಚರ ಮಾಹಿತಿ ಬಂದಿತ್ತು ಎಂದು ಪೊಲೀಸ್ ವರಿಷ್ಠಾಧಿಕಾರಿ ನೀಲೋತ್ಪಲ್ ಅವರು ಹೇಳಿದ್ದಾರೆ. ಗಡ್ಚಿರೋಲಿ ಪೊಲೀಸರ ವಿಶೇಷ ಕೊಂಬ್ಯಾಟ್ ವಿಭಾಗವಾದ ಸಿ–60 ಕಮಾಂಡೋಗಳ ಎರಡು ತುಕಡಿಗಳನ್ನು ತಕ್ಷಣವೇ ಈ ಪ್ರದೇಶದಲ್ಲಿ ಶೋಧಕ್ಕಾಗಿ ಕಳುಹಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮೆಮು ರೈಲಿನ ಮೇಲೆ ಬಿದ್ದ ಮರದ ಕೊಂಬೆ ; ಲೋಕೋ ಪೈಲಟ್‌ಗೆ ಗಾಯ

●ಮಂಡ್ಯ ಸಮೀಪ ಘಟನೆ ●ವಿಶ್ವ ಮಾನವ ಎಕ್ಸ್‌ಪ್ರೆಸ್‌ನಲ್ಲಿ ಮೈಸೂರು ತಲುಪಿದ ಪ್ರಯಾಣಿಕರು



ಮೈಸೂರು,ಮೇ 13(ಪಿಎಂ)– ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದ ಮೆಮು ರೈಲಿನ ಮೇಲೆ ಹಳಿ ಬದಿಯಲ್ಲಿದ್ದ ಮರದ ಬಾರೀ ಕೊಂಬೆಯೊಂದು ಬಿದ್ದ ಪರಿಣಾಮ ಲೋಕೋ ಪೈಲಟ್ ಗಾಯಗೊಂಡ ಘಟನೆ ಮಂಡ್ಯ ರೈಲ್ವೆ ನಿಲ್ದಾಣದ ಸಮೀಪ ಶುಗರ್ ಫ್ಯಾಕ್ಟರಿ ಬಳಿ ಸೋಮವಾರ ರಾತ್ರಿ ಸಂಭವಿಸಿದೆ.

ಮಂಡ್ಯ ಸುತ್ತಮುತ್ತ ಇಂದು ಸಂಜೆ ಭಾರೀ ಗಾಳಿ ಸಹಿತ ಮಳೆಯಾದ ವೇಳೆ ಸದರಿ ಮೆಮು ಪ್ಯಾಸಂಜರ್ ರೈಲಿನ (ಗಾಡಿ ಸಂಖ್ಯೆ 06525) ಮೇಲೆ ಕೊಂಬೆ ಬಿದ್ದಿದ್ದು, ಇದರಿಂದ ರೈಲಿನ ಮುಂಭಾಗದ ಗಾಜಿಗೆ ಹಾನಿಯಾಗಿದೆ. ಪರಿಣಾಮ ಎಸ್.ಎನ್.ಪ್ರಸಾದ್ (39) ಅವರ ತಲೆಗೆ ಗಾಯವಾಗಿದೆ.

ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾದ ಅವರಿಗೆ ಮಂಡ್ಯ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಸುಮಾರು ರಾತ್ರಿ 7.30ರಲ್ಲಿ ಈ ದುರ್ಘಟನೆ ನಡೆದಿದೆ. ಸದರಿ ಮೆಮು ರೈಲು ಮೈಸೂರಿಗೆ ಇಂದು ರಾತ್ರಿ 7.30ಕ್ಕೆ ಬರಬೇಕಿತ್ತು. ಆದರೆ ದುರಂತದ ಹಿನ್ನೆಲೆಯಲ್ಲಿ ಅದು ಮಂಡ್ಯ ರೈಲ್ವೆ ನಿಲ್ದಾಣದ ಸಮೀಪವೇ ಸಂಚಾರ ಸ್ಥಗಿತಗೊಳಿಸಿತು. ಈ ಕಾರಣ ಸದರಿ ರೈಲಿನ ಪ್ರಯಾಣಿಕರನ್ನು ಬೆಂಗಳೂನಿಂದ ಮೈಸೂರಿಗೆ ಬರುತ್ತಿದ್ದ ವಿಶ್ವಮಾನವ ಎಕ್ಸ್‌ಪ್ರೆಸ್ ರೈಲಿನಲ್ಲಿ ಸಂಚರಿಸಲು ಅವಕಾಶ ಕಲ್ಪಿಸಲಾಯಿತು. ವಿಶ್ವಮಾನವ ಎಕ್ಸ್‌ಪ್ರೆಸ್ ಇಂದು ರಾತ್ರಿ ಸುಮಾರು 8.30ರ ವೇಳೆಗೆ ಮೈಸೂರಿಗೆ ಆಗಮಿಸಿತು.

ಕುಡಿಯುವ ನೀರು ಪೂರೈಕೆ; ಶುಚಿತ್ವದತ್ತ ಹೆಚ್ಚು ಗಮನಹರಿಸಿ

ಅಧಿಕಾರಿ ವರ್ಗಕ್ಕೆ ಮೈಸೂರು ಜಿಪಂ ಸಿಇಓ ಗಾಯತ್ರಿ ಸಲಹೆ

ಮೈಸೂರು, ಮೇ 13(ಎಸ್‌ಬಿಡಿ)– ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸುವುದರ ಜೊತೆಗೆ ನೀರಿನ ಶುಚಿತ್ವದ ಬಗ್ಗೆ ನಿಗಾ ವಹಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ(ಸಿಇಓ) ಕೆ.ಎಂ.ಗಾಯತ್ರಿ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಕುಡಿಯುವ ನೀರಿನ ವ್ಯವಸ್ಥೆ ಸಂಬಂಧ ತಾಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಅಧಿಕಾರಿಗಳೊಂದಿಗೆ ಸೋಮವಾರ ವರ್ಚುವಲ್ ಮೂಲಕ ಸಭೆ ನಡೆಸಿದ ಅವರು, ಎಲ್ಲಾ ಗ್ರಾಮಗಳಲ್ಲೂ ಪರಿಶೀಲನೆ ನಡೆಸಿ, ನೀರಿನ ಸಮಸ್ಯೆ ಉಂಟಾಗದಂತೆ ಅಗತ್ಯ ಕ್ರಮ ವಹಿಸುವಂತೆ ತಿಳಿಸಿದರು.

ಜಲ್ ಜೀವನ್ ಮಿಷನ್ ಸೇರಿದಂತೆ ನೀರು ಪೂರೈಸುವ ಇತರೆ ಪೈಪ್‌ಲೈನ್‌ಗಳನ್ನು ಪರಿಶೀಲಿಸಬೇಕು. ಅಗತ್ಯವಿದ್ದಲ್ಲಿ ದುರಸ್ತಿ ಇಲ್ಲವೇ ಪೈಪ್ ಬದಲಿಸಬೇಕು. ಬೋರ್‌ವೆಲ್‌ಗಳ ಬಳಿ ಸ್ವಚ್ಛಗೊಳಿಸಿ, ನೀರು ನಿಲ್ಲದಂತೆ ಕ್ರಮ ವಹಿಸಬೇಕು. ನಿಯಮಿತವಾಗಿ ನೀರಿನ ಪರೀಕ್ಷೆ ನಡೆಸಿ, ಶುದ್ಧತೆಯನ್ನು ಖಚಿತಪಡಿಸಿಕೊಳ್ಳಬೇಕು. ಡೆಂಗ್ಯೂ ಹಾಗೂ ಕಾಲರಾ ಪ್ರಕರಣಗಳು ಹೆಚ್ಚು ವರದಿಯಾಗುತ್ತಿದ್ದು, ಗ್ರಾಮಗಳ ರಸ್ತೆ ಚರಂಡಿ, ಜನವಸತಿ ಪ್ರದೇಶದಲ್ಲಿ ನೀರು ನಿಲ್ಲದಂತೆ ಗಮನಹರಿಸಬೇಕು ಎಂದರು.

ನೀರಿನ ಮಿತ ಬಳಕೆ ಹಾಗೂ ಗುಣಮಟ್ಟದ ಅಗತ್ಯದ ಬಗ್ಗೆ ತಿಳಿಸಬೇಕು. ನೀರನ್ನು ಕಾಯಿಸಿ, ಆರಿಸಿ ಕುಡಿಯುವಂತೆ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಜನ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು. ಜಾನುವಾರುಗಳಿಗೆ ತೊಂದರೆಯಾಗದಂತೆ ನೀರು ಪೂರೈಸಬೇಕು. ಅವಶ್ಯವಿರುವ ಕಡೆ ನೀರಿನ ತೊಟ್ಟಿಗಳನ್ನು ನಿರ್ಮಿಸಬೇಕು. ಫೀಲ್ಡ್ ಟೆಸ್ಟಿಂಗ್ ಕಿಟ್ ಮೂಲಕ ನೀರಿನ ಗುಣಮಟ್ಟ ಹಾಗೂ ಬ್ಯಾಕ್ಟೀರಿಯಾ ಪರೀಕ್ಷೆ ನಡೆಸಬೇಕು ಎಂದು ಸೂಚನೆ ನೀಡಿದರು.

ಸಂಘಟಿತ ಕಾರ್ಯ: ಕುಡಿಯುವ ನೀರು ಪೂರೈಕೆ ಹಾಗೂ ಬಳಕೆ ಸಂಬಂಧ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ವಹಿಸಬೇಕು. ಕಾರ್ಯಪಾಲಕ ಇಂಜಿನಿಯರ್‌ಗಳು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಉಪ ವಿಭಾಗ ಹಾಗೂ ತಾಲೂಕು ಆರೋಗ್ಯಾಧಿಕಾರಿಗಳನ್ನೊಳಗೊಂಡ ತಂಡ ರಚಿಸಬೇಕು. ಗ್ರಾಮ ಪಂಚಾಯ್ತಿ ಸಿಬ್ಬಂದಿ, ನೌಕರರು, ಸಖಿ ಮತ್ತು ಆಶಾ ಕಾರ್ಯಕರ್ತೆಯರನ್ನು ತೊಡಗಿಸಿಕೊಂಡು ಸಂಘಟಿತವಾಗಿ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ನೋಂದಾಯಿಸಿ ಟ್ಯಾಂಕರ್ ಬಳಸಿ: ಕುಡಿಯುವ ನೀರಿನ ಕೊರತೆಯಾದರೆ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಟ್ಯಾಂಕರ್ ಮ್ಯಾನೇಜ್‌ಮೆಂಟ್ ಆ್ಯಪ್ ಮೂಲಕ ಕ್ರಮ ವಹಿಸಬೇಕು. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಮುನ್ನ ಸಂಬಂಧಿಸಿದ ತಾಲೂಕು ಕಚೇರಿಗಳಲ್ಲಿ ನೋಂದಾಯಿಸಬೇಕು. ಟ್ಯಾಂಕರ್‌ಗಳು, ನೀರಿನ ಶೇಖರಣಾ ಘಟಕ ಹಾಗೂ ಸರಬರಾಜು ಘಟಕಗಳ ಸ್ವಚ್ಛತೆ ಬಗ್ಗೆಯೂ ಖಾತ್ರಿಪಡಿಸಿಕೊಳ್ಳಬೇಕು ಎಂದರು.


ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಡಾ.ನಾಗರಾಜು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರಂಜಿತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು, ತಾಲೂಕು ಆರೋಗ್ಯಾಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗದ ಅಧಿಕಾರಿಗಳು, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಿದ್ದರು.

ಲಾಭದ ಆಸೆಗೆ ಹೂಡಿಕೆ; 17.80 ಲಕ್ಷ ವಂಚನೆ

ಮೈಸೂರು, ಮೇ 13(ಎಸ್‌ಬಿಡಿ)– ಟ್ರೇಡಿಂಗ್ ಸಂದೇಶ ನಂಬಿ ವ್ಯಕ್ತಿಯೊಬ್ಬರು 17.80 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ವಿಜಯನಗರ ನಾಲ್ಕನೇ ಹಂತ, ಬೆಳವಾಡಿ ನಿವಾಸಿ ಶರಣ್ ದೂರು ನೀಡಿದ್ದಾರೆ. ನನ್ನ ಮೊಬೈಲ್‌ಗೆ ಏಪ್ರಿಲ್ 21ರಂದು +4915212070582 ಸಂಖ್ಯೆಯಿಂದ ಟ್ರೇಡಿಂಗ್ ಸಂಬಂಧ ಸಂದೇಶ ಬಂದಿದ್ದು, ಅದನ್ನು ನಂಬಿ ಅವರು ತಿಳಿಸಿದ ಖಾತೆಗಳಿಗೆ ಒಟ್ಟು 17.80 ಲಕ್ಷ ರೂ. ಹಣ ವರ್ಗಾವಣೆ ಮಾಡಿದೆ. ನಂತರ ಹಣ ಪಡೆದವರು ಈವರೆಗೂ ಯಾವುದೇ ಲಾಭವನ್ನೂ ನೀಡದೆ, ಹೂಡಿಕೆ ಹಣವನ್ನೂ ವಾಪಸ್ ನೀಡದೆ ವಂಚಿಸಿದ್ದಾರೆ ಎಂದು ತಿಳಿಸಿದ್ದಾರೆ.

ಇಂಜಿನಿಯರ್‌ವೊಬ್ಬರು ನಕಲಿ ಟ್ರೇಡಿಂಗ್ ಆಪ್ ಮೂಲಕ ಹಂತ ಹಂತವಾಗಿ 89.50 ಲಕ್ಷ ರೂ. ಹೂಡಿಕೆ ಮಾಡಿ, ಮೋಸ ಹೋಗಿರುವ ಬಗ್ಗೆ ಮೊನ್ನೆಯಷ್ಟೇ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಇತ್ತೀಚೆಗೆ ಟ್ರೇಡಿಂಗ್ ಮೂಲಕ ಸುಲಭವಾಗಿ ಹೆಚ್ಚು ಲಾಭಗಳಿಸಬಹುದು ಎಂದು ನಂಬಿಸಿ, ಲಕ್ಷಾಂತರ ರೂ. ವಂಚಿಸುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಈ ಬಗ್ಗೆ ಎಚ್ಚರಿಕೆ ವಹಿಸುವಂತೆ ಪೊಲೀಸರು ಸಲಹೆ ನೀಡಿದ್ದಾರೆ.

ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ; ಕೆ.ರಘುಪತಿ ಭಟ್



ಉಡುಪಿ: ನೈರುತ್ಯ ಪದವೀಧರರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಬಿಜೆಪಿ ಟಿಕೆಟ್ ಆಕಾಂಕ್ಷಿ ಹಾಗೂ ಮಾಜಿ ಶಾಸಕರೂ ಆದ ಕೆ. ರಘುಪತಿ ಭಟ್ ಘೋಷಿಸಿದರು.

ಕರಂಬಳ್ಳಿಯ ನಿವಾಸದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪದವೀಧರರ ಕ್ಷೇತ್ರದಿಂದ ಬಿಜೆಪಿಯ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಪಕ್ಷದ ರಾಜ್ಯ ಹಾಗೂ ರಾಷ್ಟ್ರ ನಾಯಕರು ಖಚಿತವಾಗಿ ಟಿಕೆಟ್ ನೀಡುವ ಭರವಸೆಯನ್ನೂ ನೀಡಿದ್ದರು.

ಅದರಂತೆ, ಕ್ಷೇತ್ರದಾದ್ಯಂತ ಮತದಾರರ ನೋಂದಣಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು 20 ಸಾವಿರಕ್ಕೂ ಹೆಚ್ಚು ಮಂದಿಯ ನೋಂದಣಿ ಮಾಡಿಸಿದ್ದೇನೆ. ಇದೀಗ ಏಕಾಏಕಿ ಟಿಕೆಟ್ ನಿರಾಕರಿಸಿರುವುದರಿಂದ ತೀವ್ರವಾಗಿ ಮನನೊಂದಿದ್ದು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ನಿರ್ಧರಿಸಿದ್ದೇನೆ ಎಂದರು.

ಬಿಜೆಪಿ ಹಿರಿಯ ನಾಯಕ ಸುಶೀಲ್ ಮೋದಿ ನಿಧನ



ನವದೆಹಲಿ: ಬಿಜೆಪಿಯ ಹಿರಿಯ ನಾಯಕ ಸುಶೀಲ್ ಮೋದಿ(72) ಅವರು ಸೋಮವಾರ ಸಂಜೆ ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ನಿಧನರಾದರು. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಸುಶೀಲ್ ಮೋದಿ ಅವರು ಕಳೆದ ಒಂದು ತಿಂಗಳಿನಿಂದ ಏಮ್ಸ್‌ನ ತೀವ್ರ ನಿಗಾ ಘಟಕದಲ್ಲಿ ದಾಖಲಾಗಿದ್ದರು. ಬಿಹಾರದ ಮಾಜಿ ಉಪಮುಖ್ಯಮಂತ್ರಿ ಮತ್ತು ಮಾಜಿ ರಾಜ್ಯಸಭಾ ಸದಸ್ಯರಾದ ಸುಶೀಲ್‌ಕುಮಾರ್ ಮೋದಿ ಜಿ ಅವರ ನಿಧನಕ್ಕೆ ಶ್ರದ್ಧಾಂಜಲಿ. ಇದು ಬಿಹಾರ ಬಿಜೆಪಿಗೆ ತುಂಬಲಾರದ ನಷ್ಟ ಎಂದು ಬಿಹಾರದ ಬಿಜೆಪಿ ರಾಜ್ಯಾಧ್ಯಕ್ಷ ಸಾಮ್ರಾಟ್ ಚೌಧರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಿಎಫ್‌ಟಿಆರ್‌ಐನಲ್ಲಿ ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ

ಸೃಜನಶೀಲತೆ–ಕುತೂಹಲ ಇದ್ದರೆ ಅತ್ಯುತ್ತಮ ಆವಿಷ್ಕಾರ ಸಾಧ್ಯ

ಉದ್ಯಮಿ ಅರ್ಜುನ್ ರಂಗ ಅಭಿಮತ

ಮೈಸೂರು,ಮೇ 13(ಪಿಎಂ)– ಸೃಜನಶೀಲತೆ ಮತ್ತು ಕುತೂಹಲ ಇದ್ದರೆ ಯಾವುದೇ ಕ್ಷೇತ್ರದಲ್ಲಿ ಹೆಚ್ಚು ಪ್ರಯೋಜನಕಾರಿಯಾದ ಅತ್ಯುತ್ತಮ ಆವಿಷ್ಕಾರಗಳು ಹೊರಹೊಮ್ಮಲಿವೆ. ಹಾಗಾಗಿ ಉದ್ಯಮದಲ್ಲಿ ಸಂಶೋಧನೆ, ಆವಿಷ್ಕಾರ, ನೂತನ ತಂತ್ರಜ್ಞಾನ ಅಳವಡಿಕೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡಬೇಕೆಂದು ಎನ್‌ಆರ್ ಗ್ರೂಪ್‌ನ ಪಾಲುದಾರ, ಸೈಕಲ್ ಪ್ಯೂರ್ ಅಗರಬತ್ತಿ ತಯಾರಕರೂ ಆದ ಎನ್.ರಂಗರಾವ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಓ, ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಹೇಳಿದರು.

ಮೈಸೂರಿನ ಸಿಎಸ್‌ಐಆರ್–ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಸಂಸ್ಥೆ (ಸಿಎಫ್‌ಟಿಆರ್‌ಐ) ವತಿಯಿಂದ ಸಂಸ್ಥೆಯ ಚೆಲುವಾಂಬ ಹಾಲ್‌ನಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ'ಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು 'ಅಗರಬತ್ತಿಯಿಂದ ಏರೋಸ್ಪೇಸ್‌ವರೆಗೆ... ಆವಿಷ್ಕಾರ ಮನಸ್ಥಿತಿ ಬೆಳೆಸುವ ಬಗೆ' ಕುರಿತು ಅವರು ಮಾತನಾಡಿದರು.

ಕಡ್ಡಿಯೊಂದಕ್ಕೆ ಗಂಧದ ಲೇಪನ ಮಾಡಲು ತಂತ್ರಜ್ಞಾನವೇಕೆಂದು ನಮ್ಮ ಪೂರ್ವಿಕರು ಸುಮ್ಮನೆ ವ್ಯಾಪಾರ ಮಾಡಿಕೊಂಡಿದ್ದರೆ ಇಂದು ರಂಗ್‌ಸನ್ಸ್ ಏರೋಸ್ಪೇಸ್‌ನ ಸಾಧನಗಳು ಇಸ್ರೋ ಚಂದ್ರಯಾನದಲ್ಲಿ ಬಳಕೆಯಾಗುವ ಸನ್ನಿವೇಶ ನಿಜಕ್ಕೂ ಸೃಷ್ಟಿಯೇ ಆಗುತ್ತಿರಲಿಲ್ಲ. 1948ರಲ್ಲಿ ನನ್ನ ಅಜ್ಜ ರಂಗರಾವ್ ಮೈಸೂರಿನ ಸಂತೆಪೇಟೆಯಲ್ಲಿ 5 ರೂಪಾಯಿಗೆ ಮಳಿಗೆಯೊಂದನ್ನು ಬಾಡಿಗೆಗೆ ಪಡೆದು ಅಲ್ಲಿ ಅಗರಬತ್ತಿ ಉದ್ಯಮ ಆರಂಭಿಸಿದರು ಎಂದು ತಿಳಿಸಿದರು.

ಏನಾದರೂ ಸಾಧನೆ ಮಾಡಬೇಕೆಂಬ ಹಂಬಲ ಅವರಲ್ಲಿತ್ತು. ಹಾಗಾಗಿ ಅಷ್ಟಕ್ಕೆ ಸುಮ್ಮನೇ ಕೂರದೇ ಸುಗಂಧ ದ್ರವ್ಯ ತಯಾರಿಸುವ ತಂತ್ರಜ್ಞಾನದ ಪುಸ್ತಕಗಳನ್ನು ಫ್ರಾನ್ಸ್‌ನಿಂದ ತರಿಸಿದ್ದರು. ಅದು ಮೈಸೂರಿಗೆ ಬರಲು 14 ತಿಂಗಳು ಸಮಯ ಹಿಡಿಯಿತು. ಅವುಗಳ ಅಧ್ಯಯನ ನಡೆಸಿ ತಿ.ನರಸಿಪುರದಲ್ಲಿ 1950ರ ಸಂದರ್ಭದಲ್ಲಿ ಸುಗಂಧ ದ್ರವ್ಯದ ಪ್ರಯೋಗಾಲಯ ಪ್ರಾರಂಭಿಸಿದರು. ಕಾಲಕಾಲಕ್ಕೆ ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಅಗರಬತ್ತಿ ಉದ್ಯಮದಲ್ಲಿ ಅಭಿವೃದ್ಧಿ ಹೊಂದುತ್ತಾ ಸಾಗಲಾಯಿತು.



ಮೈಸೂರಿನ ಸಿಎಫ್‌ಟಿಆರ್‌ಐ ಸಂಸ್ಥೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆಯಲ್ಲಿ ಸಿಎಫ್‌ಟಿಆರ್‌ಐನ ಪರವಾನಗಿದಾರರಿಗೆ ಗಣ್ಯರು ಪ್ರಶಂಸನಾ ಪತ್ರ ನೀಡಿ ಅಭಿನಂದಿಸಿದರು. ಜೊತೆಗೆ ಪ್ರಾಯೋಜಿತ ಯೋಜನೆಗಳ ಸಂಬಂಧ ತಂತ್ರಜ್ಞಾನ ಒಪ್ಪಂದ ಮಾಡಿಕೊಂಡ ಪ್ರಾಯೋಜಕರು ಚಿತ್ರದಲ್ಲಿದ್ದಾರೆ.

ಬರಬರುತ್ತಾ ವಾಸು ಅಗರಬತ್ತಿಯ ಬ್ರ್ಯಾಂಡ್‌ಗೆ ಉತ್ತಮ ಬೇಡಿಕೆ ಬಂದಿತು ಎಂದರು.

ಕಳೆದ 75 ವರ್ಷಗಳಲ್ಲಿ ಪ್ರತಿಯೊಂದು ನಮ್ಮ ಉತ್ಪನ್ನಕ್ಕೆ ಆಯಾಯ ಕಾಲದ ಹೊಸ ತಂತ್ರಜ್ಞಾನ ಅಳವಡಿಸಿಕೊಂಡ ಕಾರಣ ಯಶಸ್ಸು ಸಾಧ್ಯವಾಯಿತು. ಇಂದು 25 ಸಾವಿರ ಕುಟುಂಬಗಳಿಗೆ ಕಂಪನಿ ಆಸರೆಯಾಗಿದೆ. ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದೆ. ಏರೋಸ್ಪೇಸ್, ಎಲೆಕ್ಟ್ರಾನಿಕ್ಸ್, ಆಹಾರೋದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿಯೂ ತೊಡಗಿಸಿಕೊಂಡಿದ್ದೇವೆ. ತಂತ್ರಜ್ಞಾನಕ್ಕೆ ಕಂಪನಿ ತೆರೆದುಕೊಂಡಿದ್ದರಿಂದಲೇ ಈ ಎಲ್ಲಾ ಸಾಧನೆ ಸಾಧ್ಯವಾಗಿದೆ ಎಂದು ತಿಳಿಸಿದರು.

1970ರ ವೇಳೆಗೆ ಎಲೆಕ್ಟ್ರಾನಿಕ್ಸ್ ಉದ್ಯಮಕ್ಕೆ ಪ್ರವೇಶಿಸಿದೆವು. 2013ರಿಂದ ರಾಕೆಟ್‌ಗಳಿಗೆ ವಿವಿಧ ಸಲಕರಣೆ ಒದಗಿಸಲು ಮುಂದಾಗಿದ್ದೇವೆ. ಅಗರಬತ್ತಿಯಿಂದ ಏರೋಸ್ಪೇಸ್‌ವರೆಗೆ ಮುಂದುವರೆದಿದ್ದೇವೆ. ನಮಗೆ ಇದು ಹೆಮ್ಮೆ ಎನ್ನಿಸುತ್ತದೆ. ತಂತ್ರಜ್ಞಾನ ಅಳವಡಿಸಿಕೊಳ್ಳದೇ ಇದ್ದರೆ ಇಷ್ಟು ಯಶಸ್ಸು ಸಾಧ್ಯವಾಗುತ್ತಿರಲಿಲ್ಲ ಎಂದರು.

ರಂಗ್‌ಸನ್ಸ್ ಏರೋಸ್ಪೇಸ್ ತಯಾರಿಸುವ ಪೈಪುಗಳು ಏರ್‌ಬಸ್‌ನ ಜೆಟ್ ಎಂಜಿನ್‌ನಲ್ಲಿ ಬಳಕೆಯಾಗುತ್ತಿವೆ. ರೋಲ್‌ರಾಯ್ಸ್ ಸೇರಿದಂತೆ ಹತ್ತಾರು ವಾಹನ ತಯಾರಿಕಾ ಕಂಪನಿಗಳೂ ಬಳಸುತ್ತಿವೆ. ಹೀಗೆ ಮೈಸೂರಿನ ಸಾಧನಗಳು ಇಸ್ರೋದ ಚಂದ್ರಯಾನ, ಸಮುದ್ರ ಯಾನ, ಸೌರಯಾನದಲ್ಲೂ ಬಳಕೆಯಾಗುತ್ತಿವೆ. ಕಂಪನಿ ರಕ್ಷಣಾ ಕ್ಷೇತ್ರಕ್ಕೂ ಲಗ್ಗೆ ಇಟ್ಟಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸೈಕಲ್ ಕಂಪನಿಯ 1,300 ಕೋಟಿ ಅಗರಬತ್ತಿ ವರ್ಷಕ್ಕೆ ಉರಿಯುತ್ತಿದೆ. ಯಾವುದೇ ಹೊಸ ಕಾರ್ಯ ಕೈಗೊಳ್ಳಬೇಕಾದರೂ ಪೂಜೆ ಮಾಡುತ್ತೇವೆ. ಅದಕ್ಕಾಗಿ ಅಗರಬತ್ತಿ ಬೆಳಗಿಸುವುದು ನಮ್ಮಲ್ಲಿ ರೂಢಿಯಲ್ಲಿದ್ದು, ಈ ಪ್ರಕ್ರಿಯೆ ನಮ್ಮಲ್ಲಿ ಭರವಸೆ ಮೂಡಿಸಲಿದೆ. ಅಗರಬತ್ತಿ ತಯಾರಕ ನಾನೆಂದು ಹೇಳುವ ಬದಲು, ಭರವಸೆ ಮೂಡಿಸುವಂತಹ ಮಹತ್ವದ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿಕೊಳ್ಳಲು ಹೆಮ್ಮೆಪಡುತ್ತೇನೆ ಎಂದರು.

ತಿ.ನರಸೀಪುರದ ನಮ್ಮ ಸುಗಂಧದ್ರವ್ಯ ಪ್ರಯೋಗಾಲಯವು ಸುಗಂಧರಾಜ ಪುಷ್ಪದಿಂದ ದ್ರವ್ಯ ತಯಾರಿಸುವ ಅತೀ ದೊಡ್ಡ ಘಟಕವಾಗಿದೆ. ನವೋದ್ಯಮಿಗಳು ಉದ್ಯೋಗ ಸೃಷ್ಟಿಸಬೇಕು. ತಂತ್ರಜ್ಞಾನ ಹಾಗೂ ಸಂಶೋಧನೆಗೆ ಹೆಚ್ಚು ಒತ್ತು ನೀಡಬೇಕು. ಅದರಿಂದ ಉದ್ಯಮ ವಿಸ್ತಾರವಾಗುತ್ತದೆ ಎಂಬುದಕ್ಕೆ ರಂಗರಾವ್ ಸನ್ಸ್ ಕಂಪನಿಯೇ ನಿದರ್ಶನವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಮೂರು ಪ್ರಾಯೋಜಿತ ಯೋಜನೆಗಳ ಸಂಬಂಧ ಸಿಎಫ್‌ಟಿಆರ್‌ಐ ಮತ್ತು ಪ್ರಾಯೋಜಕರ ನಡುವೆ ತಂತ್ರಜ್ಞಾನದ ಒಪ್ಪಂದದ ಪ್ರಕ್ರಿಯೆ ನಡೆಸಲಾಯಿತು. ಅಲ್ಲದೆ, ಸಿಎಫ್‌ಟಿಆರ್‌ಐನ ಪರವಾನಗಿದಾರರಿಗೆ ಪ್ರಶಂಸನಾ ಪತ್ರ ನೀಡಿ ಅಭಿನಂದಿಸಲಾಯಿತು. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ತಂತ್ರಜ್ಞಾನ ವರ್ಗಾವಣೆ ಮತ್ತು ವ್ಯವಹಾರ ಅಭಿವೃದ್ಧಿ ವಿಭಾಗದ ಮುಖ್ಯಸ್ಥ ಡಾ.ಆಶಿತೋಷ್ ಎ.ಇನಾಮ್ದಾರ್, ಸೀನಿಯರ್ ಪ್ರಿನ್ಸಿಪಾಲ್ ಸೈನ್ಟಿಸ್ಟ್ ಪರಗಿ ರಮೇಶ್ ಮತ್ತಿತರರು ಹಾಜರಿದ್ದರು.

ಅಕ್ಟೋಬರ್‌ಗೆ ಸಿಎಫ್‌ಟಿಆರ್‌ಐಗೆ 74 ವರ್ಷ

ಸಿಎಸ್‌ಐಆರ್ ಅಧೀನದ ಎಲ್ಲಾ 37 ಸಂಸ್ಥೆಗಳು ಹಲವು ವಿಷಯಗಳಲ್ಲಿ ಪರಿಹಾರ ನೀಡುವ ಮೂಲಕ ದೇಶಕ್ಕೆ ಕೊಡುಗೆ ನೀಡುತ್ತಿವೆ. ಸಮಾಜದ ಬಗೆಗಿನ ಬದ್ಧತೆಯು ಸಿಎಸ್‌ಐಆರ್ ಧ್ಯೇಯವಾಗಿದೆ ಮುಂಬರುವ ಅಕ್ಟೋಬರ್‌ಗೆ ಮೈಸೂರಿನ ಸಿಎಫ್‌ಟಿಆರ್‌ಐ 74 ವರ್ಷಗಳನ್ನು ಪೂರೈಸುತ್ತಿದೆ.

-ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್,
ನಿರ್ದೇಶಕರು, ಸಿಎಫ್‌ಟಿಆರ್‌ಐ, ಮೈಸೂರು.

12 ಹೊಸ ತಂತ್ರಜ್ಞಾನ ಅಭಿವೃದ್ಧಿ

2023–24ನೇ ಸಾಲಿನಲ್ಲಿ ಸಿಎಫ್‌ಟಿಆರ್‌ಐ 12 ಹೊಸ ತಂತ್ರಜ್ಞಾನ ಅಭಿವೃದ್ಧಿಪಡಿಸಿದೆ. ಅವುಗಳೆಂದರೆ, ರಾಗಿ ಬೇಸ್ಡ್ ಮಾಲ್ಟ್ ಹೈಡ್ರೋಲೈಸೇಟ್, ಮಲ್ಟಡ್ ರಾಗಿ ಬೇಸ್ಡ್ ರೆಡಿ ಟು ಈಟ್ ವೀನಿಂಗ್ ಫುಡ್, ಫಿಂಗರ್ ಮಿಲ್ಲೆಟ್ ಸೀಮೋಲಿನ, ಇನ್‌ಸ್ಟಂಟ್ ಫಿಂಗರ್ ಮಿಲ್ಲೆಟ್ ರವಾ ಇಡ್ಲಿ ಮಿಕ್ಸ್, ಇನ್‌ಸ್ಟಂಟ್ ಫಿಂಗರ್ ಮಿಲ್ಲೆಟ್ ಹಲ್ವಾ ಮಿಕ್ಸ್, ಇನ್‌ಸ್ಟಂಟ್ ಫಿಂಗರ್ ಮಿಲ್ಲೆಟ್ ಖಿಚ್ಡಿ ಮಿಕ್ಸ್, ಇನ್‌ಸ್ಟಂಟ್ ಫಿಂಗರ್ ಮಿಲ್ಲೆಟ್ ಉಪ್ಮ ಮಿಕ್ಸ್, ಮಿಲ್ಲೆಟ್ ಅಂಡ್ ಮಲ್ಟಿ ಮಿಲ್ಲೆಟ್ ಪುತ್ತು ಪೋದು ಮಿಕ್ಸ್, ಕ್ಲೀನರ್ ಪ್ರೋಸೆಸ್ ಫಾರ್ ಬೈಯೋಟೆಕ್ನಾಲಾಜಿಕಲ್ ಪ್ರೊಡಕ್ಷನ್ ಆಫ್ ಸ್ಪಿರುಲಿನಾ, ರೆಡಿ ಟು ಯ್ಯೂಸ್ ಮಲ್ಟಿ ಗ್ರೇನ್ ಇಡ್ಲಿ ಅಂಡ್ ದೋಸ ಬ್ಯಟರ್ ಇನ್ ರಿಟೇಲ್ ಪ್ಯಾಕ್ಸ್, ಎ ಪ್ರೋಸೆಸ್ ಫಾರ್ ದಿ ಪ್ರೊಡಕ್ಷನ್ ಆಫ್ ಮಲ್ಟಿ ಗ್ರೇನ್ ವಾಫ್ಲ್, ಎ ಪ್ರೋಸೆಸ್ ಫಾರ್ ದಿ ಪ್ರೊಡಕ್ಷನ್ ಆಫ್ ಮಲ್ಟಿಗ್ರೇನ್ ಪಿಜ್ಜಾ ಬೇಸ್.

ಕಡಕೊಳ ಗ್ರಾಮದ 33 ಹಳ್ಳಿ ಗಡಿಮನೆ ದೇವಸ್ಥಾನ ಅಭಿವೃದ್ಧಿ ಮಂಡಳಿ ಸಂಘ ಅಸ್ತಿತ್ವಕ್ಕೆ



ಮೈಸೂರು, ಮೇ 13– ಮೈಸೂರು ತಾಲೂಕು ಕಡಕೊಳ ಗ್ರಾಮದ ಶ್ರೀ ಬೀರೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ 33 ಹಳ್ಳಿ ಗಡಿಮನೆ ದೇವಸ್ಥಾನ ಅಭಿವೃದ್ಧಿ ಮಂಡಳಿ ಸಮಿತಿ ವತಿಯಿಂದ ಸಂಘದ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷ ಸ್ವಾಮಿ, 33 ಹಳ್ಳಿ ಯಜಮಾನರೂ ಹಾಗೂ ಅಧ್ಯಕ್ಷರಾದ ಸಿದ್ದರಾಮು, ಉಪಾಧ್ಯಕ್ಷರಾದ ಬೀರೇಶ.ಕೆ.ಎನ್, ಸಿ.ಮಂಜುನಾಥ, ಕಾರ್ಯಾಧ್ಯಕ್ಷ ಸಿ.ಮಂಜುನಾಥ, ಖಜಾಂಚಿ ನಾಗಣ್ಣ, ಕಾರ್ಯದರ್ಶಿ ವಿಶ್ವನಾಥ, ಸಹ ಕಾರ್ಯದರ್ಶಿ ಮಹೇಶ, ಸಂಚಾಲಕರಾದ ಕಪಿನಿಗೌಡ, ರವಿ.ಎಂ, ವಕೀಲ ಶ್ರೀಕಂಠ.ಹೆಚ್. ಕೋಚನಹಳ್ಳಿ ಶಿವು, ವಿಷಕಂಠ, ಚಂದ್ರ, ನಿಂಗಪ್ಪ, ಬಸಪ್ಪ, ಯಜಮಾನ್ ಪುಟ್ಟೇಗೌಡ, ಗಾಡಿ ಬೀರಪ್ಪ, ಮೂಗೇಗೌಡ, ಡಿ.ಮಹದೇವು, ಕಾಳಯ್ಯನ ರವಿ, ಕುಣ್ಸೆಂಗ್ರಿ, ರಾಜು, ಸಹದೇವ, ಪುಟ್ಟ, ಹುಚ್ಚಪ್ಪ ಕಾಯಿನಾಗ, ಕೆ.ಎಂ.ಹುಂಡಿ ಮಾಲೇಗೌಡ, ರವಿ.ಎಂ. ಕೆ.ಬಿ.ಕುಮಾರ, ಎಂ.ಮಹದೇವ, ರವಿಗೌಡ.ಕೆ.ಎನ್, ಕಾಳೇಗೌಡ ಕುಮಾರ.ಸಿ, ಬಸವ, ನೀಲಿಸಿದ್ದು, ಸಿ.ಕೆ.ರವಿ, ವರ್ಕ್‌ಷಾಪ್ ಮಹದೇವ, ತಾಂಡವಪುರ ರವಿರಾಜು, ಶಿವಯ್ಯ, ನಾಗೇಶ, ಶಿವರಾಜು, ಹಳ್ಳಿದಿಡ್ಡಿ ಆರ್. ಮಹದೇವ, ಬಂಚಳ್ಳಿಹುಂಡಿ ಮಿಣಕ ಹುಚ್ಚಯ್ಯ, ಅಡಕನಹಳ್ಳಿಹುಂಡಿ ಮಾದಪ್ಪ, ಕೆಂಪಿಸಿದ್ದನಹುಂಡಿ ಕೆ.ಎಸ್.ಸಿದ್ದು, ಅಪ್ಪಯ್ಯನ ಮಹದೇವ, ಕುಂಬ್ರಳ್ಳಿ ಮಠ ಶಿವರಾಮು, ಮಹದೇವು, ರಾಯನಹುಂಡಿ ಕೆಂಪರಾಮೇಗೌಡ, ಬಸವೇಗೌಡ, ಮರಿಗೌಡನಹುಂಡಿ ದಾಸೇಗೌಡ, ಸಜ್ಜೆಹುಂಡಿ ವಾಸು, ದಾಸೇಗೌಡ, ಎಸ್.ಉತ್ತನಹಳ್ಳಿ ಮಹದೇವ, ಮಾಯಪ್ಪ, ಏಳಿಗೆಹುಂಡಿ ಪು॥ ಬಸಪ್ಪ, ಮಂಡಕಳ್ಳಿ ಹೆಬ್ಬಾಳೆಗೌಡ, ಡಿ.ಸಾಲುಂಡಿ ಮಾಕಿಮಹದೇವ, ಚಂದ್ರು, ಒಡಯನಬಸಪ್ಪ, ಕೋಟೆಹುಂಡಿ ಕಾಳಮ್ಮ ದೇವರ ಗುಡ್ಡಪ್ಪ, ಮಾಲಪ್ಪ, ದಡದಹಳ್ಳಿ ಗುರು, ನಂಜಪ್ಪ, ರಾಮೇಗೌಡ, ಶಿವನಂಜು, ನಂಜೇಗೌಡ, ಡಿ.ಎಂ.ಜಿ ಹಳ್ಳಿ ಮಹದೇವ, ಮೊಡ್ಡೇಗೌಡ, ಮಾಲೇಗೌಡ, ತೋಣಚಿಕೊಪ್ಪಲು ಸಿ.ಕೃಷ್ಣಪ್ಪರವರ ಮಕ್ಕಳು, ಚಿಕ್ಕಬೀಚನಹಳ್ಳಿ ಮಾಲೇಗೌಡರ ಮಕ್ಕಳು, ಕೊರೆಹುಂಡಿ ಪುಟ್ಟೇಗೌಡ, ಮಾರ್ಬಳ್ಳಿಹುಂಡಿ ಕರೀಗೌಡ, ಪುಟ್ಟೇಗೌಡ, ಕೆಎನ್.ಹುಂಡಿ ತೀರ್ಥೇಗೌಡ, ಬಿ.ಜಿ.ಹುಂಡಿ ಪುಟ್ಟೇಗೌಡ, ಶಿವಬೀರ, ನುಗ್ಗಹಳ್ಳಿ ಪು॥ ಮಾಲೇಗೌಡ, ದೊಡ್ಡಮಾರೇಗೌಡನಹಳ್ಳಿ ಚಿಕ್ಕಕರೀಗೌಡ, ಪಳ್ಳುಂಡಿ ಬಸಪ್ಪ, ಮಾಕನಹುಂಡಿ ಮರಿನಂಜ, ರವಿ ಶಿಂಡೇನಹಳ್ಳಿ ಚಿಕ್ಕಮಾಲಯ್ಯ, ಬೀರಿಹುಂಡಿ ದೊಡ್ಡ ಮಾಲೇಗೌಡ, ಮೈಸೂರು ಎಂ.ವಿಶ್ವನಾಥ, ಹಾಗೂ ಕಡಕೊಳ, ಕೆ.ಎಂ.ಹುಂಡಿ, ಕೆ.ಎನ್.ಹುಂಡಿ, ಬಿ.ಜಿ.ಹುಂಡಿ ಗ್ರಾಮದ ಯಜಮಾನರು ಹಾಗೂ ಚಿಕ್ಕಯಜಮಾನರುಗಳು ಉಪಸ್ಥಿತರಿದ್ದರು.

ಯುಜಿಸಿಇಟಿ–2024; CBSE/CISCE/ IGCSE ತೇರ್ಗಡೆಯಾದವರಿಗೆ ಅಂಕ ದಾಖಲಿಸಲು ಮೇ 20ರವರೆಗೆ ಅವಕಾಶ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) 12ನೇ ತರಗತಿಯನ್ನು ಸಿಬಿಎಸ್‌ಇ, (ಜಮ್ಮು ಮತ್ತು ಕಾಶ್ಮೀರ ಸೇರಿದಂತೆ) ಸಿಐಎಸ್‌ಸಿಇ, 10+2, ಐಜಿಸಿಎಸ್‌ಇ ಮತ್ತಿತರ ಬೋರ್ಡ್‌ಗಳಲ್ಲಿ 2024ರಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ತಮ್ಮ ಅಂಕಗಳನ್ನು ದಾಖಲಿಸಲು ಮೇ 14ರಿಂದ 20ರವರೆಗೆ ಆನ್‌ಲೈನ್ ಪೋರ್ಟಲ್ ಲಿಂಕ್ ಅನ್ನು ಸಕ್ರಿಯಗೊಳಿಸಲಿದೆ.

ಈ ಮೇಲೆ ತಿಳಿಸಿದ ಎಲ್ಲಾ ಅಭ್ಯರ್ಥಿಗಳು ಮೇ 20ರ ಒಳಗೆ ಕಡ್ಡಾಯವಾಗಿ ತಮ್ಮ 12ನೇ ತರಗತಿಯ ಅಂಕಗಳ ವಿವರಗಳನ್ನು ನಿಗದಿತ ಲಿಂಕ್‌ನಲ್ಲಿ ಅಂಕಗಳನ್ನು ದಾಖಲಿಸಿ, ಅಂಕಪಟ್ಟಿಯ ಪಿಡಿಎಫ್ ಪ್ರತಿಯನ್ನು ತಪ್ಪದೇ ಅಪ್‌ಲೋಡ್ ಮಾಡಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಸೋಮವಾರ ಪತ್ರಿಕಾ ಪ್ರಕಟಣೆಯಲ್ಲಿ ಸೂಚಿಸಿದ್ದಾರೆ.

2024ಕ್ಕಿಂತ ಹಿಂದಿನ ವರ್ಷಗಳಲ್ಲಿ ಕರ್ನಾಟಕ ದ್ವಿತೀಯ ಪಿಯುಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಮತ್ತು 12ನೇ ತರಗತಿಯನ್ನು ಉತ್ತೀರ್ಣರಾಗಿರುವವರೂ ಅಂಕಗಳನ್ನು ದಾಖಲಿಸಬೇಕು ಎಂದು ತಿಳಿಸಲಾಗಿದೆ.

ಅರ್ಹತಾ ಕಂಡಿಕೆ Ckause-Y ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳೂ ಸಹ ಅಂಕಗಳನ್ನು ಪೋರ್ಟಲ್‌ನಲ್ಲಿ ದಾಖಲಿಸಬೇಕು. ಕರ್ನಾಟಕ ದ್ವಿತೀಯ ಪಿಯುಸಿ 2024ರ ಅಂಕಗಳನ್ನು ಪ್ರಾಧಿಕಾರವು ನೇರವಾಗಿ ಪದವಿಪೂರ್ವ ಶಿಕ್ಷಣ ಇಲಾಖೆಯಿಂದ ಪಡೆದುಕೊಳ್ಳುತ್ತದೆ.

ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕಾಗಿ ಅಭ್ಯರ್ಥಿಗಳು 2024ರ 'ನಾಟಾ' ಪರೀಕ್ಷೆಯ ಅಂಕಗಳನ್ನು ಅರ್ಹತೆಗೆ ಅನುಗುಣವಾಗಿ ದಾಖಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.inಗೆ ಭೇಟಿ ನೀಡಲು ಕೋರಿದೆ.

ಪ್ರಜ್ವಲ್ ರೇವಣ್ಣ ವಿರುದ್ಧ ರೆಡ್ ಕಾರ್ನರ್ ನೋಟಿಸ್: ಎಸ್‌ಐಟಿ ಚಿಂತನೆ

ಬೆಂಗಳೂರು: ಲೈಂಗಿಕ ದೌರ್ಜನ್ಯ ಮತ್ತು ಅಶ್ಲೀಲ ವಿಡಿಯೋ ಪ್ರಕರಣದ ಆರೋಪಿ, ಸಂಸದ ಪ್ರಜ್ವಲ್ ರೇವಣ್ಣ ಬಗ್ಗೆ ಸುಳಿವು ಇನ್ನೂ ಎಸ್‌ಐಟಿಗೆ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಅವರಿಗೆ ರೆಡ್ ಕಾರ್ನರ್ ನೋಟಿಸ್ ನೀಡಲು ಎಸ್‌ಐಟಿ ಚಿಂತನೆ ನಡೆಸಿದೆ. ಒಮ್ಮೆ ರೆಡ್ ಕಾರ್ನರ್ ನೋಟಿಸ್ ಹೊರಡಿಸಿದರೆ ಆರೋಪಿಯು ದೇಶದ ಯಾವುದೇ ವಿಮಾನ ನಿಲ್ದಾಣಕ್ಕೆ ಎಂಟ್ರಿ ಕೊಟ್ಟರು ತಕ್ಷಣ ಮಾಹಿತಿ ಸಿಗಲಿದೆ.

ಎಮಿಗ್ರೇಷನ್ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದು ಇಂಟರ್‌ಪೋಲ್‌ಗೆ ಮಾಹಿತಿ ರವಾನಿಸಲಿದ್ದಾರೆ. ಇಂಟರ್‌ಪೋಲ್ ಅಧಿಕಾರಿಗಳು ಸಂಬಂಧಿಸಿದ ತನಿಖಾ ತಂಡಕ್ಕೆ ಆರೋಪಿಯನ್ನು ಒಪ್ಪಿಸಲಿದ್ದಾರೆ. ಅಲ್ಲದೆ ಎಸ್‌ಐಟಿ ಕೋರ್ಟ್ ಮೂಲಕ ಪ್ರಜ್ವಲ್ ರೇವಣ್ಣ ಪಾಸ್‌ಪೋರ್ಟ್ ಕ್ಯಾನ್ಸಲ್ ಮಾಡಲು ಚಿಂತನೆ ನಡೆಸುತ್ತಿದೆ. ಈಗಾಗಲೇ ಲುಕ್‌ಔಟ್ ನೋಟೀಸ್ ಹಾಗೂ ಬ್ಲ್ಯೂ ಕಾರ್ನರ್ ನೋಟೀಸ್ ಹೊರಡಿಸಲಾಗಿದ್ದರೂ ಪ್ರಜ್ವಲ್ ಬಗ್ಗೆ ಕಿಂಚಿತ್ತು ಮಾಹಿತಿ ಲಭ್ಯವಾಗಿಲ್ಲ.

ಪ್ರೀತಿಸಿದ ಜೋಡಿಗೆ ಮಂತ್ರ ಮಾಂಗಲ್ಯ ಭಾಗ್ಯ!

ಮೈಸೂರು, ಮೇ 13– 14 ವರ್ಷಗಳಿಂದ ಪ್ರೀತಿಸುತ್ತಿದ್ದ ಡಾ. ರಮ್ಯಾ, ರಘು ಮಂತ್ರ ಮಾಂಗಲ್ಯದ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿರುವ ಡಾ.ಬಿ.ರಮ್ಯಾ ಹಾಗೂ ಆರ್.ರಘು ಶುಕ್ರವಾರ ಮೈಸೂರಿನ ಗೋಕುಲಂನ ಶ್ಯಾಗಲೆ ಹೌಸಿನಲ್ಲಿ ಮಂತ್ರ ಮಾಂಗಲ್ಯದ ಮದುವೆಯಾದರು.

ಚಿತ್ರದುರ್ಗದ ಭೋವಿ ಜನಾಂಗದ ರಮ್ಯಾ ಹಾಗೂ ಮೈಸೂರು ತಾಲೂಕಿನ ನಾಗನಹಳ್ಳಿ ಗ್ರಾಮದ, ದಲಿತ ಸಮುದಾಯದ ರಘು, ಎಂ.ಎ ಓದುವಾಗಿನಿಂದ ಪ್ರೀತಿಸಿದವರು. ಬಸವ ಜಯಂತಿಯಂದು ಮದುವೆಯಾದ ಅವರಿಗೆ ವಿವಾಹ ಸಂಹಿತೆಯನ್ನು ಉಗ್ರನರಸಿಂಹೇಗೌಡ ಬೋಧಿಸಿ, 'ಸಾಲ ಮಾಡಿ ಮದುವೆ ಮಾಡಿದವರು ಕೆಟ್ಟು ಹೋಗುತ್ತಾರೆ. ಯಾರಿಗೋ ತೋರಿಸಲು ದೊಡ್ಡ ಛೌಲ್ಟ್ರಿಯಲ್ಲಿ ಮದುವೆ ಮಾಡಿ ಮೈ ಸುಟ್ಟುಕೊಳ್ಳುತ್ತಾರೆ ಅಂದರೆ ಸಾಲ ಮಾಡುತ್ತಾರೆ. ಇದಕ್ಕಾಗಿ ಆರೋಗ್ಯಕರ ಸಮಾಜಕ್ಕೆ ಪ್ರೇಮ ವಿವಾಹಗಳು, ಅಂತರಜಾತಿ ವಿವಾಹಗಳು ಹೆಚ್ಚಬೇಕು ಎಂದರು.

ಕುವೆಂಪು ಅವರ ಮಂತ್ರ ಮಾಂಗಲ್ಯ ಮದುವೆಯ ಪ್ರಮಾಣ ವಚನವನ್ನು ಬೋಧಿಸಿದ ಮಾನವ ಮಂಟಪದ ಸಂಚಾಲಕ ಡಾ.ಕಾಳಚನ್ನೇಗೌಡ ಮಾತನಾಡಿ, ಅಂತರಜಾತಿ ಮದುವೆಗಳನ್ನು ಜನರು ಒಪ್ಪಿಕೊಳ್ಳುತ್ತಿದ್ದಾರೆ. ಮೊದಲಿನಷ್ಟು ವಿರೋಧವಿಲ್ಲ. ಸುತ್ತೂರು, ಧರ್ಮಸ್ಥಳ, ಚುಂಚನಗಿರಿಯಲ್ಲಿ ಸರಳವಾಗಿ ಮದುವೆಗಳಾಗುತ್ತಿವೆ. ಸರಳವಾಗಿ ಮದುವೆಯಾದರೆ ಜನರು ಹಿಯಾಳಿಸುತ್ತಾರೆ ಎಂಬ ಯೋಚನೆ ಬಿಡಿ ಎಂದು ಸಲಹೆ ನೀಡಿದರು.

ಲೇಖಕ ಡಾ.ಮುಜಾಫರ್ ಅಸಾದಿ ಮಾತನಾಡಿ, ಇವರಿಬ್ಬರೂ ನನ್ನ ಶಿಷ್ಯರು. ನನ್ನ ಮಾರ್ಗದರ್ಶನದಲ್ಲಿ ರಮ್ಯಾ ಪಿಎಚ್.ಡಿ ಮಾಡಿದ್ದಾರೆ. ಕನ್ನಂಬಾಡಿ ಅಣೆಕಟ್ಟೆಯ ಹಾಗೆ ಗಟ್ಟಿಯಾಗಿರಿ, ಸಮೃದ್ಧಿಯಾಗಿರಿ ಎಂದು ಹಾರೈಸಿದರು.

ಕವಯಿತ್ರಿ ಡಾ.ಲತಾ ಮೈಸೂರು ಮಾತನಾಡಿ, ಮದುವೆಯಾಗುವುದರಿಂದ ದೇಹ, ಮನಸು, ಆತ್ಮ ಒಂದಾಗುತ್ತವೆ ಇರುವೆಯಿಂದ ಹಿಡಿದು ಎಲ್ಲಾ ಪ್ರಾಣಿಗಳು ತಮಗೆ ಇಷ್ಟವಾದ ಸಂಗಾತಿಗಳೊಂದಿಗೆ ಸೇರಿ ಸಂತಾನೋತ್ಪತ್ತಿ ಮಾಡುತ್ತವೆ. ಆದರೆ ಪ್ರೀತಿಸಿ ಮದುವೆಯಾಗುವವರ ನಡುವೆ ಜಾತಿ ಗೋಡೆ ಏಕೆ ಎಂದು ಪ್ರಶ್ನಿಸಿದರು.

ಕುವೆಂಪು ಅವರ ಪುತ್ರ ಪೂರ್ಣಚಂದ್ರ ತೇಜಸ್ವಿ ಅವರು ರಾಜೇಶ್ವರಿ ಅವರನ್ನು ಪ್ರೀತಿಸಿದರು. ಅವರ ಮದುವೆಯನ್ನು ಕುವೆಂಪು ಅವರೇ ಮಂತ್ರಮಾಂಗಲ್ಯ ಮೂಲಕ ನೆರವೇರಿಸಿದರು. ಕುವೆಂಪು ಅವರ ಇನ್ನೊಬ್ಬ ಪುತ್ರಿ ಚೈತ್ರ ಅವರು ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾದರು. ಆದರೂ ಅಂತರಮತೀಯ ವಿವಾಹಕ್ಕೆ ಕುವೆಂಪು ಹಾಗೂ ಅವರ ಪತ್ನಿ ಹೇಮಾವತಿ ಅಡ್ಡಿಬರಲಿಲ್ಲ ಎಂದು ಡಾ.ಲತಾ ಹೇಳಿದರು.

ಹಿರಿಯ ಲೇಖಕ ಹೊರೆಯಾಲ ದೊರೆಸ್ವಾಮಿ ಮಾತನಾಡಿ, ಸಾಲ ಮಾಡಿ ಓಲೆ ಖರೀದಿಸಿದ ನಂತರ ಓಲೆ ಒತ್ತೆಯಿಟ್ಟು ಬಡ್ಡಿಗೆ ದುಡ್ಡು ಕೊಡುವಂತಾಗಬಾರದು ಅಂದರೆ ಸಾಲ ಮಾಡಿ ಮದುವೆ ಮಾಡುವ ಅಗತ್ಯವಿಲ್ಲ ಎಂದರು.

ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಭೂಮಿಗೌಡ ಮಾತನಾಡಿ, 36 ವರ್ಷಗಳ ಹಿಂದೆ ಸಬಿಹಾ ಅವರನ್ನು ಮದುವೆಯಾಗುವಾಗ ನಮ್ಮ ಊರವರೇ ನೆರವೇರಿಸಿದರು ಎಂದರು.

ಧನಂಜಯ ಎಲಿಯೂರು ಮಾತನಾಡಿ, ಅಸಮಾನತೆಯ ಸಮಾಜದಲ್ಲಿ ಸಮಾನತೆ ಸೃಷ್ಟಿಸಲು ಮೀಸಲಾತಿ ಇದೆ. ಅಂತರಜಾತಿ ಮದುವೆಯಾದವರು ತಮ್ಮ ಮಕ್ಕಳ ಮೀಸಲಾತಿಯನ್ನು ತಾವೇ ನಿರ್ಧರಿಸಬಹುದು ಇಲ್ಲವೆ 18 ವರ್ಷವಾದ ನಂತರ ಮಕ್ಕಳ ನಿರ್ಧಾರಕ್ಕೆ ಬಿಡಬಹುದು ಎಂದರು. ಮದುವೆಯಾದ ಡಾ.ರಮ್ಯಾ ಅವರ ತಾಯಿ ಶಾಂತಕುಮಾರಿ, ತಂದೆ ಭುವನೇಶ್ ಹಾಗೂ ರಘು ತಾಯಿ ಭಾಗ್ಯ ಇದ್ದರು.



ಮೈಸೂರಿನಲ್ಲಿ ಮಂತ್ರ ಮಾಂಗಲ್ಯ ಮೂಲಕ ಮದುವೆಯಾದ ಡಾ.ರಮ್ಯಾ ಹಾಗೂ ರಘು ಅವರೊಂದಿಗೆ ಧನಂಜಯ ಎಲಿಯೂರು, ಡಾ.ಲತಾ ಮೈಸೂರು, ಉಗ್ರನರಸಿಂಹೇಗೌಡ, ಡಾ.ಕಾಳಚನ್ನೇಗೌಡ, ಡಾ.ಮುಜಾಫರ್ ಅಸಾದಿ, ಹೊರೆಯಾಲ ದೊರೆಸ್ವಾಮಿ ಹಾಗೂ ಡಾ.ಭೂಮಿಗೌಡ.

ಮೈಸೂರು ಮಿತ್ರ ಮಂಗಳವಾರ 14 ಮೇ 2024

ಸಂಸದ ಶ್ರೀನಿವಾಸಪ್ರಸಾದ್ ಜನಮಾನಸದಲ್ಲಿ ಚಿರಸ್ಥಾಯಿ

ನುಡಿನಮನ ಕಾರ್ಯಕ್ರಮದಲ್ಲಿ ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ಸ್ಮರಣೆ

ನಂಜನಗೂಡು, ಮೇ 13– ಪ್ರಸ್ತುತ ರಾಜಕಾರಣಿಗಳು ತತ್ವಜ್ಞಾನದ ಕೊರತೆಯಿಂದಾಗಿ ಗೊಂದಲದಲ್ಲಿ ಮುಳುಗಿದ್ದು, ಇದಕ್ಕೆ ಅಪವಾದವೆಂಬಂತೆ ಸಂಸದ ವಿ.ಶ್ರೀನಿವಾಸಪ್ರಸಾದ್ ತತ್ವಜ್ಞಾನಯುಳ್ಳ ರಾಜಕಾರಣಿಯಾಗಿದ್ದು, ಜನಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ ಎಂದು ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ಸ್ಮರಿಸಿದರು.

ತಾಲೂಕಿನ ಸಿಂಧುವಳ್ಳಿ ಗೇಟ್ ಬಳಿಯ ಸಂತಾನ ಗಣಪತಿ ಕಲ್ಯಾಣ ಮಂಟಪದಲ್ಲಿ ನಂಜನಗೂಡು ನಾಗರಿಕ ವೇದಿಕೆ ವತಿಯಿಂದ ಭಾನುವಾರ ಆಯೋಜಿಸಿದ್ದ ವಿ.ಶ್ರೀನಿವಾಸಪ್ರಸಾದ್ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಲ್ಲರನ್ನು ಒಳಗೊಳ್ಳುವ ಮಾತೃ ಸ್ವರೂಪದ ಭಾವ ವಿ.ಶ್ರೀನಿವಾಸಪ್ರಸಾದ್ ಅವರಲ್ಲಿತ್ತು. ಮಹಾಬೆಳಕಿನ ಪ್ರತೀಕವಾಗಿ ಸಮಾಜದ ನಡುವೆ ಕೊಂಡಿಯಾಗಿದ್ದರು. ಮಠಗಳು ಸಾಮಾಜಿಕ ನ್ಯಾಯದ ಕೇಂದ್ರಗಳಾಗಬೇಕೆಂದು ಪ್ರತಿಪಾದಿಸಿದ್ದರು. ಅವರು ಮಾತಿನಿಂದ ಮಂಟಪ ಕಟ್ಟಲಿಲ್ಲ. ಬದಲಿಗೆ ತಮ್ಮ ಬದುಕಿನಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಗಳನ್ನು ಅಳವಡಿಸಿಕೊಂಡು ಅದರಂತೆ ನಡೆ ನುಡಿಯಲ್ಲಿ ತೋರಿಸಿಕೊಟ್ಟು ಹೋಗಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ಹೇಗೆ ಸಾಗಬೇಕೆಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದರು.

ಈ ಜಗತ್ತಿಗೆ ನಾವು ಇರುವಿಕೆಯನ್ನು ಅರಿಯಲು ಬಂದಿದ್ದೇವೆ. ಮಾನವ ಸಂಬಂಧ ಗಟ್ಟಿಯಾಗದೇ ಸಮಾಜವನ್ನು ಉದ್ಧರಿಸಲು ಸಾಧ್ಯವಿಲ್ಲ. ಆಳ್ವಿಕೆಯಲ್ಲಿ ನಮ್ಮ ಬಾಳ್ವಿಕೆ ಇರಬೇಕೆಂಬುದನ್ನು ತೋರಿಸಿಕೊಟ್ಟ ಶ್ರೀನಿವಾಸಪ್ರಸಾದ್ ಇಂದಿನ ಕಾಲಘಟ್ಟದ ಯುವಕರಿಗೆ ಆದರ್ಶಪ್ರಾಯರಾಗಿದ್ದಾರೆ ಎಂದು ಹೇಳಿದರು.



ನಂಜನಗೂಡಿನಲ್ಲಿ ನಡೆದ ವಿ.ಶ್ರೀನಿವಾಸಪ್ರಸಾದ್ ನುಡಿನಮನ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಮಾತನಾಡಿ, ಶ್ರೀನಿವಾಸಪ್ರಸಾದ್ ಅವರು ಬಡವರ ಮೇಲೆ ತುಂಬಾ ಕಾಳಜಿ ಹೊಂದಿದ್ದನ್ನು ನಾನು ತುಂಬಾ ಹತ್ತಿರದಿಂದ ಬಲ್ಲೆ. ಅವರು ನಂಜನಗೂಡಿನ ಬಗ್ಗೆ ವಿಶೇಷ ಪ್ರೀತಿ ಹೊಂದಿದ್ದರು. ಹಾಗಾಗಿ ಅವರ ಹೆಸರನ್ನು ಅಜರಾಮರಗೊಳಿಸುವ ನಿಟ್ಟಿನಲ್ಲಿ ಪ್ರವಾಸಿ ಮಂದಿರದ ಮುಂದೆ ನಿರ್ಮಾಣ ಮಾಡಿರುವ ಬಟಾನಿಕಲ್ ಗಾರ್ಡನ್‌ಗೆ ಅವರ ಹೆಸರನ್ನು ನಾಮಕರಣ ಮಾಡಬೇಕು. ಜೊತೆಗೆ ರೈಲ್ವೆ ಮೇಲ್ಸೇತುವೆಗೆ ಶ್ರೀನಿವಾಸಪ್ರಸಾದ್ ಹೆಸರಿಡುವ ನಿಟ್ಟಿನಲ್ಲಿ ನಾವೆಲ್ಲರೂ ಪ್ರಯತ್ನ ಮಾಡೋಣ ಎಂದರು.

ಮಾಜಿ ಶಾಸಕ ಕಳಲೆ ಎನ್.ಕೇಶವಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹರವೆ ಮಠದ ಸರ್ಪಭೂಷಣ ಸ್ವಾಮೀಜಿ, ಕಸುವಿನಹಳ್ಳಿ ಮಠದ ಶಿವಕುಮಾರ ಸ್ವಾಮೀಜಿ, ವಿ.ಶ್ರೀನಿವಾಸಪ್ರಸಾದ್ ಸಹೋದರ ವಿ.ರಾಮಸ್ವಾಮಿ, ಜಿಪಂ ಮಾಜಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮಾಜಿ ಸದಸ್ಯರಾದ ಸಿ.ಚಿಕ್ಕರಂಗ ನಾಯಕ, ಕೆ.ಮಾರುತಿ, ಮಂಗಳಾ ಸೋಮಶೇಖರ್, ಎಂ.ಲತಾ, ಮುಖಂಡರಾದ ಯು.ಎನ್.ಪದ್ಮನಾಭ ರಾವ್, ಸುಬ್ಬಣ್ಣ, ನಂದಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠ ನಾಯಕ, ಬಿಜೆಪಿ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ, ತಾಪಂ ಮಾಜಿ ಅಧ್ಯಕ್ಷರಾದ ತಮ್ಮಣ್ಣೇಗೌಡ, ಬಿ.ಎಂ.ನಾಗೇಶ್‌ರಾಜ್, ಜೆಡಿಎಸ್ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ದೊರೆಸ್ವಾಮಿ, ಪಿ.ಮಹೇಶ್, ದೊರೆಸ್ವಾಮಿ ನಾಯಕ ಸೇರಿದಂತೆ ಹಲವರಿದ್ದರು.

> "ನನ್ನ ತಂದೆ ಧ್ರುವನಾರಾಯಣ್ ಹಾಗೂ ಶ್ರೀನಿವಾಸಪ್ರಸಾದ್ ನಡುವೆ ಉತ್ತಮ ಬಾಂಧವ್ಯವಿತ್ತು. ನಾನು ವಕೀಲನಾಗಲು ಶ್ರೀನಿವಾಸ ಪ್ರಸಾದ್ ಅವರ ಸಹಾಯವಿದೆ. ಅವರು ಶಾಸಕರಾಗಿದ್ದಾಗ ಬೆಂಗಳೂರಿನ ಅವರ ರೂಂನಲ್ಲಿ ಎರಡು ವಾರಗಳ ಕಾಲ ವ್ಯಾಸಂಗ ಮಾಡಿ ಎಲ್‌ಎಲ್‌ಬಿಗೆ ಪ್ರವೇಶ ಪರೀಕ್ಷೆ ಬರೆಯಲು ನನಗೆ ನೆರವಾಗಿದ್ದರು.
>
> -ದರ್ಶನ್ ಧ್ರುವನಾರಾಣ್, ನಂಜನಗೂಡು ಶಾಸಕ

ರೈಲಿಗೆ ಸಿಲುಕಿ ಯುವಕ ಆತ್ಮಹತ್ಯೆ

ನಂಜನಗೂಡು, ಮೇ 13– ಚಲಿಸುತ್ತಿದ್ದ ರೈಲಿಗೆ ಸಿಲುಕಿ ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬಸವನಪುರ ಸಮೀಪದ ರೈಲ್ವೆ ಅಂಡರ್ ಪಾಸ್ ಬಳಿ ಸೋಮವಾರ ಮುಂಜಾನೆ ನಡೆದಿದೆ.

ನಗರದ ಚನ್ನಕೇಶವ ಲೇಔಟ್ ನಿವಾಸಿ ದಫೇದಾರ್ ಶಿವಕುಮಾರ್, ಶಿಕ್ಷಕಿ ನಂದಿನಿ ದಂಪತಿ ಪುತ್ರ ಕರಣ್(17) ಆತ್ಮಹತ್ಯೆ ಮಾಡಿಕೊಂಡವರು. ಈತ ನಂಜನಗೂಡಿನ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ದ್ವಿತೀಯ ವರ್ಷದ ಡಿಪ್ಲೋಮಾ ವಿದ್ಯಾರ್ಥಿಯಾಗಿದ್ದು, ಜೊತೆಗೆ ಪತ್ರಿಕೆ ಹಂಚುವ ಕೆಲಸ ಮಾಡಿಕೊಂಡಿದ್ದ. ವ್ಯಾಸಂಗದ ಕಡೆಗೆ ಸರಿಯಾಗಿ ಗಮನ ಹರಿಸುತ್ತಿಲ್ಲ ಎಂದು ಮನೆಯವರು ಆತನಿಗೆ ಬುದ್ಧಿವಾದ ಹೇಳಿದ್ದಾರೆ. ಇದರಿಂದ ಮನನೊಂದಿದ್ದ ಕರಣ್ ಸೋಮವಾರ ಮುಂಜಾನೆ 5.30ಕ್ಕೆ ಚಾಮರಾಜನಗರ ಕಡೆಗೆ ತೆರಳುವ ರೈಲಿಗೆ ಬಸನವಪುರ ರೈಲ್ವೆ ಅಂಡರ್ ಪಾಸ್ ಸಮೀಪ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಈತ ರೈಲ್ವೆ ಹಳಿ ಪಕ್ಕ ಸೈಕಲ್ ನಿಲ್ಲಿಸಿ ನಂತರ ರೈಲ್ವೆ ಹಳಿ ಮಧ್ಯಭಾಗದಲ್ಲಿ ಕಣ್ಮುಚ್ಚಿಕೊಂಡು ನಿಂತಿದ್ದ. ಆತನನ್ನು ಉಳಿಸಲು ಬ್ರೇಕ್ ಹಾಕಿದರೂ ರೈಲು ನಿಯಂತ್ರಣಕ್ಕೆ ಬರಲಿಲ್ಲ ಎಂದು ಲೋಕೋ ಪೈಲಟ್ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಮೈಸೂರು ರೈಲ್ವೆ ಪೊಲೀಸರು ಭೇಟಿ ನೀಡಿ ಮಹಜರು ನಡೆಸಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಯಿತು. ಈ ಕುರಿತು ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅತಿಯಾದ ಮದ್ಯಸೇವನೆ: ಯುವಕ ಸಾವು

ಹುಣಸೂರು, ಮೇ 13– ಅತಿಯಾದ ಮದ್ಯಸೇವನೆಯಿಂದ ಯುವಕನೋರ್ವ ಸಾವನ್ನಪ್ಪಿರುವ ಘಟನೆ ಸೋಮವಾರ ನಡೆದಿದೆ.



ತಾಲೂಕಿನ ಬಲ್ಲೇನಹಳ್ಳಿ ಗಿರಿಜನ ಹಾಡಿ ನಿವಾಸಿ ಲೇ.ಚಿಕ್ಕಂಯ್ಯ ಅವರ ಪುತ್ರ ಮಾದೇವ (28) ಸಾವನ್ನಪ್ಪಿದವರು. ಕುಡಿತದ ದಾಸನಾಗಿದ್ದ ಈತ ನಿತ್ಯ ಕೂಲಿ ಮಾಡಿ ಸಂಪಾದಿಸಿದ ಹಣವನ್ನು ಕುಡಿತಕ್ಕೆ ವ್ಯಯ ಮಾಡುತ್ತಿದ್ದ. ಭಾನುವಾರ ಪೂರ್ತಿ ಕುಡಿದ ಅಮಲಿನಲ್ಲಿದ್ದ ಈತ ಸೋಮವಾರ ಮುಂಜಾನೆ ಮಲಗಿದ್ದ ಜಾಗದಲ್ಲೇ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ.

ಬಲ್ಲೇನಹಳ್ಳಿ ಗ್ರಾಮದ ಗಿರಿಜನ ಹಾಡಿ ಹಾಗೂ ಪರಿಶಿಷ್ಟ ಕಾಲೋನಿ ಸೇರಿದಂತೆ 5 ಕಡೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಇದರಿಂದ ಕೂಲಿ ಕಾರ್ಮಿಕರು ಹೆಚ್ಚಾಗಿ ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದಾರೆ. ಹೀಗಾಗಿ ಅಬಕಾರಿ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ ತಡೆಯಬೇಕೆಂದು ಜಿಲ್ಲಾ ಜಾಗೃತಿ ಹಾಗೂ ಉಸ್ತುವಾರಿ ಸಮಿತಿ ಸದಸ್ಯ ನೇರಳಕುಪ್ಪೆ ಮಹದೇವ್ ಆಗ್ರಹಿಸಿದ್ದಾರೆ.

ವನ್ಯಜೀವಿಗಳ ಹಾವಳಿ ತಡೆಗೆ

ಕಾಡಂಚಿನಲ್ಲಿ ತಡೆಗೋಡೆ ನಿರ್ಮಾಣ

ಅರಣ್ಯ ಸಚಿವ ಈಶ್ವರ್ ಖಂಡ್ರೆ



ಹುಣಸೂರು, ಮೇ 13– ವನ್ಯಜೀವಿಗಳ ಹಾವಳಿ ತಡೆಯಲು ಅರಣ್ಯ ಪ್ರದೇಶದ ಅಂಚಿನಲ್ಲಿ ತಡೆಗೋಡೆ ಮತ್ತು ಕಂದಕಗಳನ್ನು ನಿರ್ಮಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ತಾಲೂಕಿನ ವೀರನಹೊಸಹಳ್ಳಿ ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ಕುಟುಂಬ ಸಮೇತ ವಿಶ್ರಾಂತಿಗಾಗಿ ಆಗಮಿಸಿದ್ದ ವೇಳೆ ಸ್ಥಳೀಯ ಮುಖಂಡರಿಂದ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಉದ್ಯಾನವನದಂಚಿನ ಮೈಸೂರು ಹಾಗೂ ಕೊಡಗು ಜಿಲ್ಲೆಯಲ್ಲಿ ವನ್ಯಜೀವಿಗಳ ಹಾವಳಿ ಹೆಚ್ಚಾಗಿವೆ. ಇದರಿಂದ ಬೆಳೆ ಹಾನಿಯಾಗಿದ್ದು, ಕೃಷಿಕರು, ಕಾಫಿ ಬೆಳೆಗಾರರಿಗೆ ಸಮಸ್ಯೆಯಾಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾಡುಪ್ರಾಣಿಗಳು ತೋಟಗಳಿಗೆ ನುಗ್ಗದಂತೆ, ರೈಲ್ವೆ ಹಳಿ ತಡೆಗೋಡೆ ಇಲ್ಲದ ಕಡೆಗಳಲ್ಲಿ ಹಾಗೂ ಹಳಿ ಇರುವ ಕಡೆಗಳಲ್ಲೂ ಕಂದಕ ನಿರ್ಮಿಸಿ, ವನ್ಯಪ್ರಾಣಿಗಳು ಹೊರದಾಟದಂತೆ ಕ್ರಮವಹಿಸಲಾಗುವುದೆಂದು ಅಭಯ ನೀಡಿದರು.

ನಾಗರಹೊಳೆ ರಾಷ್ಟ್ರೀಯ ಉದ್ಯಾನವನವು ಪ್ರವಾಸಿ ತಾಣವಾಗಿರುವುದರಿಂದ ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಹೀಗಾಗಿ ಅರಣ್ಯ ಆಸುಪಾಸಿನಲ್ಲಿ ಸ್ವಚ್ಛತೆ ಕಾಪಾಡುವುದು ಮುಖ್ಯ. ಇಲ್ಲದಿದ್ದಲ್ಲಿ ಕಾಡುಪ್ರಾಣಿಗಳು ತ್ಯಾಜ್ಯ ತಿಂದು ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಅರಣ್ಯ ಸಿಬ್ಬಂದಿ ಸಹ ಎಚ್ಚರವಹಿಸುವುದು ಅತ್ಯಗತ್ಯ. ಈ ಬಗ್ಗೆ ವಾಹನ ಸವಾರರಿಗೂ ಎಚ್ಚರಿಸಬೇಕಿದೆ ಹಾಗೂ ಭಾಗಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛವಾಗಿ ಇಡುವಂತೆ ಮತ್ತು ಕಸದ ತೊಟ್ಟಿಗಳನ್ನು ನಿರ್ಮಾಣ ಮಾಡಲು ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕಿದೆ. ಅಭಿವೃದ್ಧಿ ಕಾರ್ಯಗಳು ಸುಸ್ಥಿರವಾಗಿರಬೇಕು. ಪ್ರವಾಸಿ ತಾಣಗಳಲ್ಲಿ ರಸ್ತೆಗಳ ಅಭಿವೃದ್ಧಿಯಾಗಬೇಕು. ಈ ಬಗ್ಗೆ ಅಧಿಕಾರಿಗಳಿಗೆ ಸೂಚಿಸುತ್ತೇನೆಂದರು.

ಇದೇ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಉದ್ಯಮಿ ರವಿಚಂದ್ರನ್, ಕಾಡುಪ್ರಾಣಿಗಳ ಹಾವಳಿ ತಡೆ, ಪ್ರಾಣಿಗಳಿಂದ ಬೆಳೆ ಕಳೆದುಕೊಂಡ ರೈತರಿಗೆ ಹೆಚ್ಚಿನ ಪರಿಹಾರ ನೀಡುವಂತೆ ಮನವಿ ಮಾಡಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಹರ್ಷವರ್ಧನ್ ಚಿಕ್ಕನರಗುಂದ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವಿನಯ್, ವಲಯ ಅರಣ್ಯಾಧಿಕಾರಿ ಅಭಿಷೇಕ್ ಮತ್ತಿತರಿದ್ದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ಮೇ 13– ಅಂತರಸಂತೆ ಹಾಗೂ ಹೆಚ್.ಡಿ.ಕೋಟೆ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಮೇ 14, 16 ಹಾಗೂ 18ರಂದು ಹೆಚ್.ಡಿ.ಕೋಟೆ ಟೌನ್, ಮೇಟಿಕುಪ್ಪೆ, ಚಿಕ್ಕೂಡನಹಳ್ಳಿ, ಭೀಮನಹಳ್ಳಿ, ಹಿರೇಹಳ್ಳಿ, ಅಣ್ಣೂರು, ಪಡುವಕೋಟೆ, ಸವ್ವೆ, ನಾಗನಹಳ್ಳಿ ಮತ್ತು ಚಿಕ್ಕಕೆರೆ ಯೂರು ಹಾಗೂ ಅಂತರಸಂತೆ, ನೂರಲಕುಪ್ಪೆ, ಡಿ.ಬಿ.ಕುಪ್ಪೆ, ಹೊಸಹೊಳಲು, ಎನ್. ಬೆಳತ್ತೂರು ಮತ್ತು ಬೀಚನಹಳ್ಳಿ ಗ್ರಾಪಂ ವ್ಯಾಪ್ತಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶೀತಲ್ ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಭೇರ್ಯ, ಮೇ 13– ಸಾಲಿಗ್ರಾಮ ತಾಲೂಕು ಹರದನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷೆ ನಂದಿನಿ ರಮೇಶ್ ದಂಪತಿ ಪುತ್ರಿ ಹಾಗೂ ಹಾಸನದ ಪ್ರತಿಷ್ಠಿತ ವಿದ್ಯಾಸಂಸ್ಥೆ ಯುನೈಟೆಡ್ ಇಂಗ್ಲಿಷ್ ಸ್ಕೂಲ್ ವಿದ್ಯಾರ್ಥಿನಿ ಹೆಚ್.ಆರ್.ಶೀತಲ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 600 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ.



ನದಿಗೆ ಕಾಲು ಜಾರಿ ಬಿದ್ದು ಯುವತಿ ಸಾವು

ತಿ.ನರಸೀಪುರ, ಮೇ 13– ನದಿಯಲ್ಲಿ ಸ್ನಾನ ಮಾಡುವ ವೇಳೆ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಯುವತಿಯೊಬ್ಬಳು ಸಾವನ್ನಪ್ಪಿರುವ ಘಟನೆ ತಾಲೂಕಿನ ತಲಕಾಡು ಪೊಲೀಸ್ ಠಾಣಾ ವ್ಯಾಪ್ತಿಯ ಕಾವೇರಿ ನಿಸರ್ಗಧಾಮದಲ್ಲಿ ಸಂಭವಿಸಿದೆ.

ಬೆಂಗಳೂರಿನ ಆನೇಕಲ್ ತಾಲೂಕಿನ ಬಿಲವಾರದಹಳ್ಳಿ ಗ್ರಾಮದ ಆಟೋ ಚಾಲಕ ವಸೀಮ್ ಖಾನ್ ಎಂಬುವರ ಪುತ್ರಿ ಮೆಹಕ್ ನಾಜ್(16) ನದಿಯಲ್ಲಿ ಮುಳುಗಿ ಸಾವನ್ನಪ್ಪಿದವರು. ವಸೀಮ್ ಖಾನ್ ಕುಟುಂಬ ಸಮೇತರಾಗಿ ತಲಕಾಡಿಗೆ ಪ್ರವಾಸಕ್ಕೆ ಬಂದಿದ್ದು, ಕಾವೇರಿ ನಿಸರ್ಗಧಾಮದಲ್ಲಿ ಸ್ನಾನ ಮಾಡಲು ನದಿಗಿಳಿದ ವೇಳೆ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಈಕೆ ನೀರಿನಲ್ಲಿ ಮುಳುಗಿದ್ದಾಳೆ. ತಕ್ಷಣ ಆಕೆಯನ್ನು ತೆಪ್ಪ ನಡೆಸುವವರ ಸಹಾಯದಿಂದ ರಕ್ಷಣೆ ಮಾಡಿ ತಲಕಾಡು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ತಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆತರಲಾಯಿತು. ಆದರೆ ಆಕೆ ಸಾವನ್ನಪ್ಪಿದ್ದಳು. ಈ ಸಂಬಂಧ ತಲಕಾಡು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಸವಣ್ಣನವರ ಆದರ್ಶ ಜೀವನ ಎಲ್ಲರಿಗೂ ಮಾದರಿ

ಬಸವ ಜಯಂತಿಯಲ್ಲಿ ಹಲವಾರ ಮಠದ ಷಡಕ್ಷರ ಸ್ವಾಮೀಜಿ

ತಿ.ನರಸೀಪುರ, ಮೇ 13– ಸಮ ಸಮಾಜ ನಿರ್ಮಾಣಕ್ಕಾಗಿ ಬಸವಣ್ಣನವರ ಆದರ್ಶ, ತತ್ವ, ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ಹಲವಾರ ಮಠದ ಶ್ರೀ ಷಡಕ್ಷರಸ್ವಾಮೀಜಿ ಸಲಹೆ ನೀಡಿದರು.

ತಾಲೂಕಿನ ಹಲವಾರ ಗ್ರಾಮದಲ್ಲಿ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮ ಸಮಾಜ ನಿರ್ಮಾಣಕ್ಕೆ ಬಸವಣ್ಣನವರ ಕೊಡುಗೆ ಅಪಾರ. ಬಸವಣ್ಣನವರ ಸರಳ ಹಾಗೂ ಆದರ್ಶ ಜೀವನ ಎಲ್ಲರಿಗೂ ಮಾದರಿಯಾಗಿದೆ. ಸಮಾಜವನ್ನು ತಿದ್ದಿದ ಬಸವಣ್ಣನವರ ವಚನಗಳು ಇಂದಿಗೂ ಪ್ರಸ್ತುತ ಎಂದರು.

ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ತಾಲೂಕು ಬಸವ ಕೇಂದ್ರದ ಅಧ್ಯಕ್ಷ ಪರಮೇಶ್ವರ್ ಪಟೇಲ್, ಸಮ ಸಮಾಜ ನಿರ್ಮಾಣದ ಕನಸು ಕಂಡು ಅದನ್ನು ನನಸು ಮಾಡಿದ ಬಸವಣ್ಣನವರು ಇಡೀ ವಿಶ್ವಕ್ಕೆ ಸಮಾನತೆಯ ಬೆಳಕು ನೀಡಿದರು. 12ನೇ ಶತಮಾನದಲ್ಲೇ ಸಾಮಾಜಿಕ ಅಸಮಾನತೆ, ಮೌಢ್ಯತೆ, ಅಸ್ಪೃಶ್ಯತೆ, ಕಂದಾಚಾರಗಳನ್ನು ತೊಡೆದು ಹಾಕಲು ಅವಿರತವಾಗಿ ಶ್ರಮಿಸಿದ ಬಸವಣ್ಣನವರು ದೌರ್ಜನ್ಯ, ಅಪಮಾನಗಳನ್ನು ಅನುಭವಿಸಿದ್ದ ಜನರಿಗೆ ದಾರಿದೀಪವಾದರು. ಸಮಾನತೆಯ ಮೂಲಕ ಜ್ಞಾನದ ದೀಪ ಹಚ್ಚಿದರು ಎಂದರು.

ಬಸವಣ್ಣನವರು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೇ ಸರಳ ಜೀವನ ಅನುಸರಿಸಿದರು. ಪ್ರತಿಯೊಬ್ಬರಿಗೂ ಕಾಯಕದ ಮಹತ್ವದ ಬಗ್ಗೆ ಅರಿವು ಮೂಡಿಸಿದರು. ಅನುಭವ ಮಂಟಪದಲ್ಲಿ ಪುರುಷರಿಗೆ ಸರಿಸಮಾನವಾಗಿ ವಚನಗಳನ್ನು ರಚಿಸಲು ಮಹಿಳೆಯರಿಗೂ ಅವಕಾಶ ಮಾಡಿಕೊಟ್ಟರು. ಸರ್ವಕಾಲಕ್ಕೂ ಪ್ರಚಲಿತವಾಗುವಂತಹ ವಚನಗಳನ್ನು ರಚಿಸಿದ ಬಸವಣ್ಣನವರ ತ್ರಿವಿಧ ದಾಸೋಹಿ ತತ್ವ ಇಂದಿಗೂ ಶಾಶ್ವತವಾಗಿ ನಡೆಯುತ್ತಿದೆ ಎಂದರು. ನೆರೆಗ್ಯಾತನಹಳ್ಳಿ ಮಠದ ಶ್ರೀ ಶಿವಕುಮಾರಸ್ವಾಮೀಜಿ, ಗ್ರಾಮಸ್ಥರಾದ ಮಹದೇವಸ್ವಾಮಿ, ಗಿರೀಶ್, ನಂಜುಂಡಸ್ವಾಮಿ, ಪಟೇಲ್ ಮಹದೇವಸ್ವಾಮಿ, ಹಾಗೂ ಬಸವೇಶ್ವರ ಯುವಕರ ಬಳಗ, ಗ್ರಾಮಸ್ಥರು ಹಾಜರಿದ್ದರು.



ತಿ.ನರಸೀಪುರ ತಾಲೂಕಿನ ಹಲವಾರದಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಕಟ್ಟೆಮಳಲವಾಡಿಯಲ್ಲಿ ಕಂದಾಯ ಸೇವೆಗಳ ವಿಶೇಷ ಅಭಿಯಾನ

ಈ ವ್ಯವಸ್ಥೆ ಸದುಪಯೋಗಪಡಿಸಿಕೊಳ್ಳಿ: ಎಸಿ ಮಹಮದ್ ಹ್ಯಾರಿಸ್ ಸುಮೇರ್



ಉಪವಿಭಾಗಾಧಿಕಾರಿ ಮಹಮದ್ ಹ್ಯಾರಿಸ್ ಸುಮೇರ್ ಸಾರ್ವಜನಿಕರಿಂದ ಸಮಸ್ಯೆ ಆಲಿಸಿದರು.

ಹಿರೀಕ್ಯಾತನಹಳ್ಳಿ ಮೇ 13– ಇಲ್ಲಿನ ಕಟ್ಟೆಮಳಲವಾಡಿ ಗ್ರಾಪಂ ಕಚೇರಿಯಲ್ಲಿ ಕಂದಾಯ ಸೇವೆಗಳ ವಿಶೇಷ ಆಂದೋಲನ ಉಪವಿಭಾಗಾಧಿಕಾರಿ ಮಹಮದ್ ಹ್ಯಾರಿಸ್ ಸುಮೇರ್ ನೇತೃತ್ವದಲ್ಲಿ ನಡೆಯಿತು.

ಎಸಿ ಮಹಮದ್ ಹ್ಯಾರಿಸ್ ಸುಮೇರ್ ಮಾತನಾಡಿ, ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಗ್ರಾಮ ಆಡಳಿತಾಧಿಕಾರಿಗಳ ವ್ಯಾಪ್ತಿಗೆ ಬರುವ ಬಾಕಿ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಹಾಗೂ ಕಂದಾಯ ಇಲಾಖೆಯ ವಿವಿಧ ಸೇವೆಗಳನ್ನು ಸಾರ್ವಜನಿಕರಿಗೆ ತ್ವರಿತ ಗತಿಯಲ್ಲಿ ತಲುಪಿಸಲು 15 ದಿನಗಳ ಕಂದಾಯ ಸೇವೆಗಳ ವಿಶೇಷ ಆಂದೋಲನ ಹಮ್ಮಿಕೊಳ್ಳಲಾಗಿದೆ. ಇದನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಉಪ ತಹಸಿಲ್ದಾರ್ ಹಾಗೂ ಗ್ರಾಮ ಆಡಳಿತಾಧಿಕಾರಿಗಳು ತಮ್ಮ ವ್ಯಾಪ್ತಿಯ ಬಾಕಿ ಪ್ರಕರಣಗಳನ್ನು ಪಟ್ಟಿ ಮಾಡಿಕೊಂಡು ಪ್ರತಿಯೊಂದು ಗ್ರಾಮಗಳಿಗೆ ಭೇಟಿ ನೀಡಿ ಆಧಾರ್ ಸೀಡಿಂಗ್, ಪರಿಹಾರ ಬಾಕಿ ಪಾವತಿ, ಪೌತಿ ಖಾತೆ ಸೇರಿದಂತೆ ಇನ್ನಿತರ ಸಾರ್ವಜನಿಕರ ಸಮಸ್ಯೆಗಳನ್ನು ಪರಿಶೀಲಿಸಿ ವಿಲೇವಾರಿ ಮಾಡುವುದರ ಜೊತೆಗೆ ಕಂದಾಯ ಇಲಾಖೆಯಿಂದ ಸಾರ್ವಜನಿಕರಿಗೆ ಸಿಗುವ ಸೇವೆಗಳು ತ್ವರಿತ ಗತಿಯಲ್ಲಿ ಸಿಗುವಂತೆ ಮಾಡಲು ಕ್ರಮ ವಹಿಸುವಂತೆ ಸೂಚಿಸಿದರು.

ಈ ವೇಳೆ ಸಾರ್ವಜನಿಕರು ಗ್ರಾಮದಲ್ಲಿ ದಲಿತರೆ ಹೆಚ್ಚಾಗಿದ್ದು, ಇವರಿಗೆ ನಿವೇಶನ ಇಲ್ಲ. ಬೇರೆ ಊರಿನಿಂದ ಬಂದ ಆದಿವಾಸಿಗಳು ಹಾಗೂ ಮೀನುಗಾರರು ಇಲ್ಲಿ ನಿವೇಶನ ನೀಡುವಂತೆ ಮನವಿ ಮಾಡುತ್ತಿದ್ದು, ಅವರನ್ನು ಸ್ಥಳಾಂತರಿಸಿ ಇಲ್ಲಿನ ನಿವೇಶನ ರಹಿತ ಕಡುಬಡವರಿಗೆ ನಿವೇಶನ ನೀಡಬೇಕು. ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ನೀರು ಪೂರೈಸುವಂತೆ ಮನವಿ ಮಾಡಿದರೂ ಪಿಡಿಓ ಸ್ಪಂದಿಸುತ್ತಿಲ್ಲ ಎಂದು ಉಪ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಅವರು ಈ ಬಗ್ಗೆ ತಾಪಂ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅವರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಸೂಚಿಸಲಿದ್ದಾರೆ ಎಂದರು.

ಇದೇ ವೇಳೆ ಎಸಿ ಮಹಮದ್ ಹ್ಯಾರಿಸ್ ಗಾವಡಗೆರೆ ನಾಡ ಕಚೇರಿಗೆ ಭೇಟಿ ನೀಡಿ, ಅಲ್ಲಿನ ಕಾರ್ಯವೈಖರಿ ಪರಿಶೀಲಿಸಿದರು. ಅಲ್ಲದೇ ಹಲವು ದಾಖಲೆಗಳನ್ನು ಪರಿಶೀಲಿಸಿದರು. ಅಲ್ಲದೇ ಆರ್‌ಡಿ ವಂಶವೃಕ್ಷ ನೀಡದ ರೈತರಿಗೆ 24 ಗಂಟೆಯೊಳಗೆ ವಂಶವೃಕ್ಷ ನೀಡುವಂತೆ ಅಲ್ಲಿನ ಸಿಬ್ಬಂದಿಗೆ ಸೂಚಿಸಿದರು.

ಈ ವೇಳೆ ತಹಸೀಲ್ದಾರ್ ಡಾ.ಎಂ.ನಯನ, ಉಪ ತಹಶೀಲ್ದಾರ್ ಅರುಣ್ ಕುಮಾರ್, ಹೋಬಳಿ ರಾಜಸ್ವ ನಿರೀಕ್ಷಕ ಹೇಮಂತ್ ಹೊಸಹಳ್ಳಿ, ಗ್ರಾಮ ಆಡಳಿತಾಧಿಕಾರಿ ಶ್ರೀವತ್ಸ, ಪಿಡಿಓ ಸೇರಿದಂತೆ ಹಾಗೂ ಸಾರ್ವಜನಿಕರು ಹಾಜರಿದ್ದರು.

ಎಂ.ಗ್ರೀಷ್ಮಾ, ಸರ್ವಾಣಿ ಸುಖಪ್ರದಗೆ ಉನ್ನತ ಶ್ರೇಣಿ



ಗ್ರೀಷ್ಮಾ



ಸರ್ವಾಣಿ ಸುಖಪ್ರದ

ತಿ.ನರಸೀಪುರ, ಮೇ 13– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಟ್ಟಣದ ಲಿಟಲ್ ಫ್ಲವರ್ ಶಾಲೆ ವಿದ್ಯಾರ್ಥಿನಿ ಎಂ.ಗ್ರೀಷ್ಮಾ 561 ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈಕೆ ಪತ್ರಕರ್ತ ಎಂ.ಮಹದೇವ್, ಸಿ.ಆರ್.ಸುನೀತಾ ದಂಪತಿ ಪುತ್ರಿ. ಇದೇ ಶಾಲೆಯ ವಿದ್ಯಾರ್ಥಿನಿ ಸರ್ವಾಣಿ ಸುಖಪ್ರದ 575 ಅಂಕ ಪಡೆದು ಉನ್ನತ ಶ್ರೇಣಿ ಉತ್ತೀರ್ಣರಾಗಿದ್ದಾರೆ. ಈಕೆ ಬಿ.ಕೆ.ಮಾದೇಶ್ ಹಾಗೂ ಸಾವಿತ್ರಿ ದಂಪತಿ ಪುತ್ರಿ.



ಮೂಗೂರು ಗ್ರಾಮದ ವೀರಶೈವ ಸಮುದಾಯದ ಮುಖಂಡರು ಜಗಜ್ಯೋತಿ ಬಸವ ಜಯಂತಿ ಹಿನ್ನೆಲೆಯಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಮೆರವಣಿಗೆ ನಡೆಸಿದರು. ಗ್ರಾಮದ ಮುಖಂಡರು, ಯುವಕ ಸಂಘದ ಪದಾಧಿಕಾರಿಗಳು ಇದ್ದರು.

SRI TIRUMALA EDUCATION TRUST (R)

THIRUMALA PUBLIC SCHOOL

(Affiliated To CBSE, Aff. No : 831085)

96, SARDAR VALLABHBHAI PATEL NAGAR, T.N. PURA ROAD, MYSURU

100% RESULT SECOND BATCH

CONGRATULATIONS TO OUR STUDENTS OF CLASS 10 FOR THEIR PERFORMANCE IN CBSE AISSE 2023-24



Hamsini D S (93%) | Chinmay Gowda (90.8%) | Namrutha B C (87.8%) | Manasa S (85.6%)

Kishan Gowda P (80.4%) | Deepthi B (77.6%) | Nithin Gowda V (75.6%)

Total Appeared - 17
Distinction - 04
First Class - 12
Others - 01

Congratulations



Haseen Mirza
596 / 625


She secured 596 out of 625 in SSLC At St.Anne's Girls High school Best Wishes from, Mother: Nagina Khatoon

ಬೇಕಾಗಿದ್ದಾರೆ

ಮೈಸೂರಿನ ಬೋಗಾದಿಯಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

94481 16337
99863 94123

Dog Missing



Name : Max
(5 years old)
Breed :
White Retriever
has a red color belt
Area :
Saraswathipuram
Mysore, Near
Apollo hospital

Kindly help finding our boy Max
9353357925 / 7975753554 / 7204091491

100% TEAK WOOD

FACTORY FINISH DOORS & FRAMES

@ FACTORY DEPOT RATES

10 YEARS WARRANTY*

9845426862
9901291267

SAPIENT COLLEGE

THE CHANGE MAKERS

Courses Available

1 PUC (EBAS | EABC | BABS)
2 BBA (Bachelor of Business Application)
3 BCA (Bachelor of Computer Application)
4 BCOM (Bachelor of Commerce)

ADMISSIONS OPEN

Location: #763/764, Metagalli Extension near KRS ring road junction, Mysore- 570016

sapientcollegeofcommerce@gmail.com
0821-2334642 / 9880737788
www.sapientcollege.in
@sapient_ccm

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ದಿನಾಂಕ: 14.05.2024 ಮಂಗಳವಾರ ಕಾರ್ಯವನ್ನು ಜಿ.ಬಿ. ಸರಗೂರಿನಲ್ಲಿ ಏರ್ಪಡಿಸಿರುವುದರಿಂದ ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ರತ್ನಮ್ಮ, ಚೆಂಪ ಜೀವನ್, ಪ್ರಕಾಶ್ ಮತ್ತು ಕುಟುಂಬವರ್ಗದವರು

ಶ್ರೀ ರವಿಕುಮಾರ್‌ರವರು

ಕೆಎಸ್‌ಆರ್‌ಟಿಸಿ

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್

ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಮೈಸೂರು

ಪ್ರವೇಶ ತೆರೆದಿದೆ

ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)

Mob: 9886654463

WANTED DRIVERS

with Heavy Vehicle Licence for a reputed CBSE School in Mysore.

Call :
99450 38026
94498 09181

T.I.M.E. KIDS



The pre-school that cares

• Play Group
• Nursery • PP-1 • PP-2

Admissions open

Sharada Devi Nagar
Niveditha Nagar
9743096624
9364089922

WANTED

- Tool Room Engineer
  - 6-8 years experience
  - Salary b/w 35k to 50k based on performance in the interview
  - Qualification: GTTC Diploma or any equivalent

95137 77350

15ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 15 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ಇಂತಿ ದುಃಖತಪ್ತರು ಕಿಶೋರ್ ಮತ್ತು ಕುಟುಂಬಸ್ಥರು ಹಾಗೂ ಬಂಧುಮಿತ್ರರು ಮೈಸೂರು – ಉಡುಪಿ

ಕಾವ್ಯ
ನಿಧನ: 14–05–2009

BUILDING CONSTRUCTION

Starts from Rs.1699/- sqft (Including Teakwood and Granite) Contact:

7897891986

SAI EDUCATION INSTITUTION

(English Medium)
State NCERT Syllabus

ADMISSIONS OPEN FOR 2024-25

1st to 8th Std.,

74, 7/2nd Cross, St. Mary's Road, N.R. Mohalla, Mysore-07

Mob : 9731154512
saieducation74@gmail.com

MYSORE PUBLIC SCHOOL

A Co-Educational Day / Boarding School, affiliated to the Council for the Indian School Certificate Examinations, New Delhi. (ICSE & ISC (Integrated)



FEW SEATS LEFT FOR ADMISSION (PRE KG - IX)

FACILITIES



* The Teacher student ratio is 5:1
* Playground, Basket Ball Courts, Volleyball Courts, Tennis Courts, Cricket Pitch.
* Well equipped Computer, Physics, Chemistry and Biology Laboratories
* Well stocked Library with the service of a trained Librarian. Access to prominent news papers and periodicals in various languages.
* Hospital with full time trained Nurse and a doctor on call for emergencies.

More details contact :

0821 - 2597917 / 2597957 / 2597934

www.mysorepublicschool.com | mps_mysore@yahoo.co.in
admin@mysorepublicschool.com

H D Kote Road, Rayanakere Post, Mysore - 570 008

ಗ್ರೇಸ್ ಪ್ರೌಢಶಾಲೆ

ಮಹದೇಶ್ವರ ಬಡಾವಣೆ, ಮೈಸೂರು


ಅಭಿನಂದನೆಗಳು

2024–25ನೇ ಸಾಲಿನ SSLC ಪರೀಕ್ಷೆಯಲ್ಲಿ 100% ಫಲಿತಾಂಶ ಬಂದಿರುತ್ತದೆ.

ಎಲ್ಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಆಡಳಿತ ಮಂಡಳಿ ವತಿಯಿಂದ ಅಭಿನಂದನೆಗಳು.

–ಮುಖ್ಯೋಪಾಧ್ಯಾಯರು

3ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು:
ಹರೀಶ್ ಸೈಕಲ್ ಮಾರ್ಟ್ ಜಯನಗರ, 4ನೇ ಮೇನ್, 4ನೇ ಕ್ರಾಸ್, ಮೈಸೂರು

ಮಕ್ಕಳಾದ:
ಎಂ.ರಾಜಶೇಖರ್, ಎಂ.ಹರೀಶ್,

ಸೊಸೆಯಂದಿರು: ಎಂ.ಶಿಲ್ಪ & ಭವ್ಯ

ಮೊಮ್ಮಕ್ಕಳು:
ಆರ್.ಎಸ್.ಶರತ್,
ಆರ್.ಎಸ್. ಶ್ರೇಯಸ್
ಎಚ್.ಬಿ. ಯಶಸ್ವಿನಿ, ಎಚ್.ಬಿ.ಯತಿನ್

ಶ್ರೀಮತಿ ಗಾಯಿತ್ರಿ

ದಾಸ್ತಿ ಪ್ಯಾರಾ ಮೆಡಿಕಲ್ ಕಾಲೇಜು

#ಎಲ್,46/4, ಎಂ.ಜಿ.ಟವರ್ಸ್, 2ನೇ ಮಹಡಿ, (ಜೆ.ಹೆಚ್.ಬಿ. ಕಾಂಪ್ಲೆಕ್ಸ್ ಹಿಂಭಾಗ) 1ನೇ ಹಂತ, ಕುವೆಂಪುನಗರ, ಮೈಸೂರು – 570023, (ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ಈ ಸಂಸ್ಥೆಯಲ್ಲಿ ಪರಿಣಿತ ವೈದ್ಯರು ಮತ್ತು ತಾಂತ್ರಿಕ ತಜ್ಞರಿಂದ ಬೋಧನೆ.

ಎಸ್.ಎಸ್.ಎಲ್.ಸಿ. ಪಾಸಾದವರಿಗೆ

"ಪ್ರವೇಶ ತೆರೆದಿದೆ, ತ್ವರೆಮಾಡಿ"

- ಡಿಪ್ಲೋಮಾ–ಇನ್–ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ (DMLT)
(ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ ಟೆಕ್ನೀಷಿಯನ್ ಹುದ್ದೆಗೆ ಅವಕಾಶ)
- ಡಿಪ್ಲೋಮಾ –ಇನ್–ಮೆಡಿಕಲ್ ಹೆಲ್ತ್ ಇನ್ಸ್‌ಪೆಕ್ಟರ್ (DMHI)
(ಸರ್ಕಾರಿ / ನಗರಪಾಲಿಕೆ / ನಗರಸಭೆ / ಪುರಸಭೆಗಳಲ್ಲಿ ಉದ್ಯೋಗಕ್ಕೆ ಅವಕಾಶ)

8904403905 | 9731507047

HIGH VOLTAGE DEAL!!

Ready to run immediately Cafeteria / Restaurant with upto seating capacity of 70, No infrastructure investment or on utensils. Veg or non-veg.
Location: Vishwamanava Double road, Saraswathipuram,
Only nominal deposits**

9845355473

4400 Sq.ft., DUPLEX COMMERCIAL SPACE FOR RENT OR LEASE



Suitable for Banks, Supermarket, IT companies, Showrooms etc...

Address:- #5259 PNG complex, NPS school 80ft., Road, Vijayanagar 4th Stage, 2nd Phase, Mysore Mob : 9886647772

VIDYADEEP SCHOOL

Play Group, Pre KG, LKG, UKG and Activity Centre.
20+yrs experience in Pre Schooling

ADMISSIONS OPEN FOR 2024-25

Address :

74, 7/2nd Cross, St. Mary's Road N.R. Mohalla Mysore -07
Mob : 6363304664

58&59, Hegde layout behind cake house, Alanahalli, Mysore -28
Mob : 6363304664

#28,1st Cross, Gokulam Park Road, V.V. Mohalla, Mysore-02
Mob : 6363304664

Email : vidyadeep772@gmail.com

DTCP SITES FOR SALE

DTCP Sites With RERA Near Jayapura, H.D. Kote Road, Mysore.

9590491194,9606783264

ಪ್ರಕಟಣೆ

ಪಾಂಡವಪುರ ಬಾಲಕಿಯರ ವಿದ್ಯಾಸಂಸ್ಥೆ (ರಿ.)

ಪಾಂಡವಪುರ–571434, ಮಂಡ್ಯ ಜಿಲ್ಲೆ

ಕ್ರ.ಸಂ.	ಸಂಸ್ಥೆಯ ಹೆಸರು	ಖಾಲಿ ಹುದ್ದೆಗಳ ವಿಷಯ & ಪದನಾಮ	ಹುದ್ದೆ ಸಂಖ್ಯೆ	ವಿದ್ಯಾರ್ಹತೆ
1	ಪಾಂಡವಪುರ ಬಾಲಕಿಯರ ಪದವಿ ಪೂರ್ವ ಕಾಲೇಜು	ಭೌತಶಾಸ್ತ್ರ ಉಪನ್ಯಾಸಕರು	01	M.Sc., B.Ed.
2		ಜೀವಶಾಸ್ತ್ರ ಉಪನ್ಯಾಸಕರು	01	M.Sc., B.Ed.
3		ವಾಣಿಜ್ಯ ಶಾಸ್ತ್ರ / ಲೆಕ್ಕ ಶಾಸ್ತ್ರ	01	M.Com., B.Ed.
4		ಭೂಗೋಳ ಶಾಸ್ತ್ರ	01	M.A., B.Ed.
5		ಲ್ಯಾಬ್ ಅಟೆಂಡರ್	01	PUC
6		ಲೈಬ್ರರಿಯನ್	01	B.Lib
7	ಪಾಂಡವಪುರ ಬಾಲಕಿಯರ ಪ್ರೌಢಶಾಲೆ	ಪಿ.ಸಿ.ಎಂ.	01	B.Sc., / M.Sc. B.Ed.
8		ಸಮಾಜ–ವಿಜ್ಞಾನ	01	B.A., / M.A., B.Ed.
9		ಜೀವಶಾಸ್ತ್ರ (ಸಿ.ಬಿ.ಝಡ್)	01	B.Sc., / M.Sc., B.Ed.,

* ಅಭ್ಯರ್ಥಿಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆ ಜೊತೆಗೆ ಸೇವಾ ಅನುಭವವಿದ್ದಲ್ಲಿ ಆದ್ಯತೆ ನೀಡಲಾಗುವುದು.
* ಅರ್ಜಿ ಸಲ್ಲಿಸಲು ಆಸಕ್ತಿಯಿರುವ ಅಭ್ಯರ್ಥಿಗಳು ಪ್ರಕಟವಾದ ದಿನದಿಂದ 7 ದಿನಗಳೊಳಗೆ ಸ್ವವಿವರಗಳು ಮತ್ತು ದೃಢೀಕರಿಸಿದ ದಾಖಲಾತಿಗಳೊಂದಿಗೆ ಅರ್ಜಿಯನ್ನು ಗೌರವ ಕಾರ್ಯದರ್ಶಿರವರು, ಪಾಂಡವಪುರ ಬಾಲಕಿಯರ ವಿದ್ಯಾಸಂಸ್ಥೆ (ರಿ), ಪಾಂಡವಪುರ ಟೌನ್, ಮಂಡ್ಯ ಜಿಲ್ಲೆ–571434, ಈ ವಿಳಾಸಕ್ಕೆ ಕಳುಹಿಸಿಕೊಡಲು ತಿಳಿಸಿದೆ.
* ಮೊಬೈಲ್ ಸಂಖ್ಯೆ: 9972960019, 8050836594

ಸಹಿ/– ಕಾರ್ಯದರ್ಶಿ
ಬಾಲಕಿಯರ ವಿದ್ಯಾಸಂಸ್ಥೆ (ರಿ), ಪಾಂಡವಪುರ

ಸಹಿ/– ಅಧ್ಯಕ್ಷರು
ಬಾಲಕಿಯರ ವಿದ್ಯಾಸಂಸ್ಥೆ (ರಿ), ಪಾಂಡವಪುರ

ಮೈಸೂರು ಮಿತ್ರ

45

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ವನಿತಾ ಸದನ

ಕೃಷ್ಣಮೂರ್ತಿಪುರಂ, ಮೈಸೂರು – 570004, ದೂ: 0821–2332124

ಅಭಿನಂದನೆಗಳು

ಮೈಸೂರಿನ ಕೃಷ್ಣಮೂರ್ತಿಪುರಂ, ಶ್ರೀಮತಿ ಸುಶೀಲಾ ಬಾಯಿ ಶ್ರೀ ನಾಗೇಶ್ ರಾವ್ ರಸ್ತೆಯಲ್ಲಿರುವ ವನಿತಾ ಸದನ ಸಂಸ್ಥೆಯಡಿಯಲ್ಲಿ ನಡೆಯುತ್ತಿರುವ ಅನುದಾನಿತ ವನಿತಾ ಸದನ ಪ್ರೌಢಶಾಲೆಗೆ ಮಾರ್ಚ್/ಏಪ್ರಿಲ್–2024ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.96.77% ರಷ್ಟು ಫಲಿತಾಂಶ ಬಂದಿದ್ದು, ಒಟ್ಟು 31 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 30 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಮತ್ತು ಶಾಲೆಗೆ ಉತ್ತಮ ಫಲಿತಾಂಶ ನೀಡಿದ ಎಲ್ಲಾ ವಿದ್ಯಾರ್ಥಿಗಳನ್ನು ಆಡಳಿತ ಮಂಡಳಿಯು ಹಾಗೂ ಮುಖ್ಯೋಪಾಧ್ಯಾಯಿನಿ ಸೇರಿದಂತೆ ಎಲ್ಲಾ ಅಧ್ಯಾಪಕ ವೃಂದದವರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸುತ್ತಿದ್ದಾರೆ.

SALES Staff : Male / Female WANTED

1. Readymade Women's Wear (M/F) - 4 Nos. (2 Years Experience)
2. Fancy and Silk Sarees (M/F) - 2 Nos. (2 Years Experience)
3. Kidswear (M/F) : 2 Nos. (2 Years Exp.,)
4. Helpers: (M/F) : 5 Nos. (No Exp., required age within 40yrs)
5. Tailors: (Male) : 1 No. (Ladies Readymade Dress alternations tailor)
6. Security Guard: (M) : 2 Nos. (Age limit within 50 years)
7. Housekeeping (M/F) : 1No. (Age limit within 45 years)

Interview Date : 14.05.2024 to 18.05.2024
Interview Timing : 11.30am to 2pm & 3.30pm to 6pm

Bhimji's
65, D.D. Urs Road, Mysore-01
Ph : 0821-4192666